


ಸಂಚಿಕೆ ೮೬

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆಯ ಗ್ಯಾಲರಿ





ರವಿಕುಮಾರ್ ಕಾಶಿ ಅವರ ಕಲಾಕೃತಿಗಳು

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ದ್ವೈಮಾಸಿಕ ● ಸಂಪುಟ : ೧೯ ● ಸಂಚಿಕೆ : ೩(೮೬)

ಮೇ-ಜೂನ್ ೨೦೧೦

ಕಾಜಗದ ದೋಣಿ ಈಜುವ ಸೋಜಿಗ
ಕಾಣಿರೋ ಕಾಣಿರೋ
ಕಣ್ಣಿದ್ದವರು ಕಾಣಿರೋ
ಕಣ್ಣಿಲ್ಲದವರು ಕಣ್ಣು ಧರಿಸಿ ಕಾಣಿರೊ

ಕೆ.ಬಿ. ಸಿದ್ದಯ್ಯ

ಸಂಪಾದಕ : ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ, ೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦ -೨೬೭೯೧೨೫
ಮೊಬೈಲ್: ೯೮೪೪೦೬೩೫೧೪


email: prahlad118@yahoo.com

ಮುಖಪುಟದ ಚಿತ್ರ:
ರವಿಕುಮಾರ ಕಾಶಿ ಕಲಾಕೃತಿ

ಒಳಪುಟ ಚಿತ್ರಗಳು:
ಸೃಜನ್, ರವಿಕಾಶಿ

ಮುಖಪುಟ ಮತ್ತು
ಪುಟ ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೨೫೦/- ● ಎರಡು ವರ್ಷಕ್ಕೆ : ರೂ. ೫೦೦/-



ಈ ಸಂಚಿಕೆಯಲ್ಲಿ...

ರಜನಿಭಕ್ತಿ –
ಮಾತುಕತೆ ಮತ್ತು ಹೊಸ ಪುಸ್ತಕ
ಕೆ. ಸತ್ಯನಾರಾಯಣ ...೫

ಸಾಹಿತ್ಯದ ರಾಜಕೀಯ
ಕೆಲವು ಪ್ರಶ್ನೆಗಳು
ವಿ.ಎನ್. ಲಕ್ಷ್ಮೀನಾರಾಯಣ ...೧೫

ಗಲ್ಲೆಬಾನಿ
ಕೆಲವು ಟಿಪ್ಪಣಿಗಳು
ಡಾ. ಎ. ರಘುರಾಂ ...೨೦

ಎಕೋ ಕ್ರಿಟಿಸಿಸಂ
ಇಂಗ್ಲಿಷ್ ಮೂಲ : ಪೀಟರ್ ಬೆರಿ
ಕನ್ನಡಕ್ಕೆ : ವಿಜಯರಾಘವನ್
ಕೆ.ಸಿ. ಶಿವಾರೆಡ್ಡಿ ...೨೮

ಮಾಹಿತಿಗಳ ಮಾಯಾಬಜಾರಿನಲ್ಲಿ
ಆನಂದ ಝುಂಜರವಾಡ ...೪೯

ಕಾವ್ಯ ಸಂಚಯ ...೫೯
- ಗೀತಾ ಹೆಗಡೆ
- ಹಿಂದಿ ಕವಿತೆಗಳು

ಮೂಲ : ವಿಜಯಕುಮಾರ
ಕನ್ನಡಕ್ಕೆ : ಮುಕುಂದ ಜೋಷಿ

ಪುಸ್ತಕ ಪರಿಚಯ
ಗೋಪಾಲಕೃಷ್ಣ ಪೈ ಅವರ
ಸ್ವಪ್ನ ಸಾರಸ್ವತ ಕುರಿತು
□ ಎಸ್. ಮನುಚಕ್ರವರ್ತಿ ...೬೮

ದೇಶಕಾಲ ವಿಶೇಷ ಕುರಿತು
□ ಸುಧೀಂದ್ರಕುಮಾರ್ ...೭೫

ಹೊಳೆದದ್ದು ತಾರೆ ಉಳಿದದ್ದು ಆಕಾಶ!

'ಮಧುರವಾಣಿ' ಮತ್ತು ಮಾಸ್ತಿ

ಪ್ರಿಯ ಓದುಗರೆ,

ಬಹಳ ವರ್ಷಗಳ ನಂತರ — ನಾನು ಓದಿದ್ದ ಪ್ರೈಮರಿ ಶಾಲೆಗೆ ಹೋದೆ. ಪ್ರತಿಯೊಬ್ಬರಿಗೂ ಬಾಲ್ಯದ ಶಾಲೆಯ ದಿವಸಗಳು ಒಂದು ಮಧುರ ನೆನಪು. ಆಗ ಈಗಿನ ಹಾಗೆ ಇಂಗ್ಲಿಷ್ ಕಾನ್ವೆಂಟುಗಳ ಹಾವಳಿಗಳಿಲ್ಲದ ಸರಳ ಕನ್ನಡ ಶಾಲೆಗಳು. ನನ್ನ ಶಾಲೆಯ ಕಟ್ಟಡ ಆ ಹಳೆಯ ನೆನಪುಗಳ ಕುರುಡಾಗಿ ಮಲ್ಲೇಶ್ವರದ ಗಿಜಿಗುಡುವ ಟ್ರಾಫಿಕ್ಕು, ಅಂಗಡಿಗಳ ನಡುವೆ ಸ್ಮಾರಕದ ಹಾಗೆ ನಿಂತಿದೆ. ಇನ್ನೆಷ್ಟು ದಿನಗಳು ಉಳಿದೀತೋ ಆ ಹಳೆಯ ಮನೆ. ಅದಕ್ಕೆ ಹೊಂದಿಕೊಂಡ ಹಾಗಿದ್ದ ಸ್ಕೂಲಿನ ಕಟ್ಟಡದ ಆಯಸ್ಸು ಗೊತ್ತಿಲ್ಲ. ಇನ್ನೂ ಯಾವ ರಿಯಲ್ ಎಸ್ಟೇಟ್ ತಿಮಿಂಗಲಗಳ ಬಾಯಿಗೆ ತುತ್ತಾಗದೆ ಉಳಿದಿರುವ ಬಗ್ಗೆ ಆಶ್ಚರ್ಯವಾಯ್ತು. ಆ ಶಾಲೆಯ ಹೆಸರು 'ಮಧುರವಾಣಿ ಪ್ರಾಥಮಿಕ ಶಾಲೆ'. ನಂತರ ಅದು ಹೆಣ್ಣುಮಕ್ಕಳ ಹೈಸ್ಕೂಲಾಗಿತ್ತು. ನನ್ನ ಮೊದಲ ಅಕ್ಷರಗಳನ್ನು ಕಲಿಸಿದ ಅಧ್ಯಾಪಕಿಯರು, ಗೆಳೆಯರು, ಗೆಳತಿಯರನ್ನೆಲ್ಲ ನೆನಪು ಮಾಡಿಕೊಳ್ಳತೊಡಗಿದೆ. ನಾವು ಆಡುತ್ತಿದ್ದ ಆಗ ದೊಡ್ಡದೆನ್ನಿಸುತ್ತಿದ್ದ, ಈಗ ಇಷ್ಟೇ ಅನ್ನಿಸುವ ಅಂಗಳ, ಅದಕ್ಕೆ ಅಂಟಿದ್ದ ಮನೆಯ ಮುಂದಿನ ಜಗಲಿ, ಅದರ ಮೇಲೆ ಕುಳಿತು ನನ್ನ ಸಹಪಾಠಿಯೊಬ್ಬಳನ್ನು ಮದುವೆಯಾಗುವೆ ಅಂತ ಚೀಟಿಯಲ್ಲಿ ಬರೆದು ಪುಸ್ತಕದಲ್ಲಿಟ್ಟುಕೊಂಡು, ದೊಡ್ಡವರಿಗೆ ಗೊತ್ತಾದರೆ ಬಾರಿಸುತ್ತಾರೆನ್ನುವ ಭಯದಲ್ಲಿ ಹರಿದು ಹಾಕಿದ್ದು ನೆನಪಾಯಿತು. ಅಮ್ಮ ಕಳಿಸಿದ್ದ ಪುಟ್ಟ ಹಿತ್ತಾಳೆ ಡಬ್ಬಿಯ ಉಪ್ಪಿಟ್ಟು, ಅದನ್ನು ನನ್ನ ಬ್ಯಾಗು ಹಾಸಿಕೊಂಡು ಕೂತು ತಿಂದದ್ದು ಯಾಕೋ ಮರೆತೇ ಇಲ್ಲ.

ಆಗೆಲ್ಲ ಶಾಲೆಗಳು ಅವನ್ನ ನಡೆಸುವವರ ಮನೆಯ ಭಾಗಗಳೇ ಆಗಿರುತ್ತಿದ್ದವು. ನಮ್ಮ ಮನೆಯ ಪಕ್ಕದಲ್ಲೊಂದು ಹಳೆಯ 'ಸೀತಾರಾಮ ಪಾಠ ಶಾಲೆ'ಯನ್ನು ರಂಗಮ್ಮ ಎಂಬ ಅಜ್ಜಿ ನಡೆಸುತ್ತಿದ್ದರು. ಆ ಕಾಲಕ್ಕೇ

ಅದು ನಿಂತುಹೋಗಿತ್ತು. 'ಮಧುರವಾಣಿ' ಶಾಲೆಯನ್ನು ಸ್ಥಾಪಿಸಿದವರು ನಾರಾಯಣರಾವ್ ಎಂಬುವವರು ಅವರ ತರುವಾಯ ಅವರ ಹೆಂಡತಿ-ಮಕ್ಕಳು ಆ ಕನ್ನಡ ಶಾಲೆಯನ್ನು ನಡೆಸುತ್ತಿದ್ದರು. ಈಗ ಮತ್ತೆ 'ಮಧುರವಾಣಿ'ಯ ಮುಂದೆ ನನ್ನನ್ನು ನಿಲ್ಲಿಸಿದ್ದು ಮಾಸ್ತಿಯವರು; ಅವರ ಸಣ್ಣಕತೆಗಳು. ಇದು ಮಾಸ್ತಿಯವರ ಸಣ್ಣಕತೆಗಳ ನೂರನೇ ವರ್ಷ. ತಮ್ಮ ಮೊದಲ ಕತೆ ಪ್ರಕಟಗೊಂಡದ್ದು ೧೯೧೦ರಲ್ಲಿ ಅಂತ ಮಾಸ್ತಿ ಅವರು ರಾಮಚಂದ್ರ ಶರ್ಮರ ಜೊತೆಗಿನ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಈಚೆಗೆ ಅವರ ಸಮಗ್ರ ಕತೆಗಳ ಸಂಪುಟ ಓದುತ್ತಿದ್ದಾಗ ಮಾಸ್ತಿ ತಮ್ಮ ಮೊದಲ ಕತೆಗಳಿಗೆ ಬೆಳಕು ನೀಡಿದ ಪತ್ರಿಕೆ, ಅದರ ಸಂಪಾದಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಮಾಸ್ತಿಯವರ ಸಣ್ಣಕತೆಗಳು ಮೊದಲಿಗೆ ಪ್ರಕಟಗೊಂಡಿದ್ದು 'ಮಧುರವಾಣಿ' ಪತ್ರಿಕೆಯಲ್ಲಿ. ಆ ಮಧುರವಾಣಿಯ ಸಂಪಾದಕ - ಪ್ರಕಾಶಕರಾದ ನಾರಾಯಣರಾವ್ ತಮ್ಮ ಪತ್ರಿಕೆ ನಿಂತುಹೋದ ನಂತರ ಅದೇ ಹೆಸರಿನ ಕನ್ನಡ ಶಾಲೆಯನ್ನು ಸ್ಥಾಪಿಸಿದವರು. ಅವರ ನಂತರ, ಅವರ ಕುಟುಂಬದ ಸದಸ್ಯರು ತಮ್ಮ ಶಕ್ತ್ಯಾನುಸಾರ ಆ ಶಾಲೆಯನ್ನು ನಡೆಸಿಕೊಂಡು ಬಂದರು. ಈಗ ಅದು ಪಳೆಯುಳಿಕೆಯಾಗಿ ಮೌನವಾಗಿ ನಿಂತಿದೆ. ಆ ಮನೆಯಲ್ಲಿ ಇದ್ದವರನ್ನು ವಿಚಾರಿಸಿದರೆ ಅವರಲ್ಲಿ ಯಾವ ಮಹಿತಿಗಳೂ ಇರಲಿಲ್ಲ. ಆ ಮನೆಗೆ ಸಂಬಂಧಿಸಿದವರು ದೂರದ ಚಂಡೀಗಢದಲ್ಲಿದ್ದಾರೆ. ಯಾವಾಗಲೋ ಬರುತ್ತಾರೆ. ಅವರ ಹತ್ತಿರವೂ ಪತ್ರಿಕೆಯ ಬಗ್ಗೆ ಮಾಹಿತಿ ಇಲ್ಲ ಎಂದರು. ಸಾಧ್ಯವಾದರೆ 'ಮಧುರವಾಣಿ' ಸಿಕ್ಕರೆ ಮಾಸ್ತಿ ಅವರ ಕತೆಗಳು ಮೊತ್ತಮೊದಲಿಗೆ ಪ್ರಕಟಗೊಂಡಿದ್ದನ್ನು ನಮ್ಮ ಜನಗಳಿಗೆ ತೋರಿಸಬಹುದೆನ್ನುವ ಉತ್ಸಾಹದಲ್ಲಿ ಹೋಗಿದ್ದ ನನಗೆ ನಿರಾಸೆಯಾಯ್ತು. ಹೀಗೆ ಕಾಲಗರ್ಭ ಸೇರಿಹೋಗುತ್ತಿರುವ ಅನೇಕ 'ಮಧುರವಾಣಿ'ಗಳು ಮನಸ್ಸಿನಲ್ಲಿ ಮೂಡತೊಡಗಿತು. ಅದಕ್ಕೆ ಕಾರಣರಾದ ಮಾಸ್ತಿ ಅವರ ಸಣ್ಣಕತೆಗಳ ನೂರನೇ ವರ್ಷದ ನೆಪ, ಎಂಥ ನೆಪ. ಈಗಲಾದರೂ ಮಾಸ್ತಿ ಕತೆಗಳನ್ನು ಸರಳವಾಗಿ, ಸುಂದರವಾಗಿ ಅವರು ತಮ್ಮ ಜೀವನ ಕಾರ್ಯಾಲಯದಿಂದ ಹೊರತರುತ್ತಿದ್ದ ಹಾಗೆ ಜನಗಳಿಗೆ ತಲುಪುವ ಹಾಗೆ ಪ್ರಕಟಿಸಬೇಕಿದೆ. ಆದರೆ ಐದು ಪುಸ್ತಕಗಳ ಅವರ ಕಥಾ ಸಂಪುಟ ಕೆಟ್ಟದಾಗಿ ಪ್ರಿಂಟಿಸಿದ್ದಾರೆ. ಬೆಲೆ ಒಂಬೈನೂರಾ ಐವತ್ತು ರೂಪಾಯಿಗಳು. ಅಕ್ಷರ ದೋಷ, ಮಧ್ಯೆ ಮಧ್ಯೆ ಚಿತ್ರಗಳು, ಕೆಟ್ಟ ಮುಖಪುಟ, ಮಾಸ್ತಿ ಕತೆಯ ಎಲ್ಲ ಪಾತ್ರಗಳು ಅಯ್ಯಂಗಾರರೇ ಅಂತನ್ನುವ ತಪ್ಪು ತಿಳುವಳಿಕೆಯಲ್ಲಿ ಬರೆದ ರೇಖಾಚಿತ್ರಗಳು. ಬೇರೆ ದೇಶ, ಭಾಷೆಗಳಲ್ಲಿ ಜನ ತಮ್ಮ ಲೇಖಕನನ್ನು ಅವನ ಇಂಥ ಪ್ರಸಂಗಗಳನ್ನು ಎಷ್ಟೊಂದು ಸಂಭ್ರಮದಿಂದ ಹೊತ್ತು ತಿರುಗುತ್ತಿದ್ದರು. ಆದರೆ ನಮ್ಮ ಹಿರಿಯ ಲೇಖಕರ ಮಕ್ಕಳು, ವಾರಸುದಾರರು ಅಂಥ ಯಾವ ಸೂಕ್ಷ್ಮತೆಯೂ ಇಲ್ಲದವರು. ಡಿ.ಆರ್. ಹೇಳುತ್ತಿದ್ದ ಹಾಗೆ – ಇವರು ಹುಲ್ಲುಗಾವಲು ಕಾಯುವ ನಾಯಿಗಳ ಹಾಗೆ. ನಾಯಿ ತಾನು ಹುಲ್ಲು ತಿನ್ನುವುದಿಲ್ಲ, ಬೇರೆಯ ಪ್ರಾಣಿಗೆ ಆ ಹುಲ್ಲು ತಿನ್ನಲೂ ಬಿಡುವುದಿಲ್ಲ. ನಮ್ಮ ಬಹುಪಾಲು ದೊಡ್ಡ ಲೇಖಕರ ಮುಖ್ಯ ಪುಸ್ತಕಗಳು ತಲುಪಲಾರದ ತೆವಲುಗಳುಳ್ಳವರ ನಡುವೆ ಕೊಳೆಯುತ್ತಿರುವುದು ದುರಂತ.

ನಿಮ್ಮ

ಸಂಪಾದಕ

ರಜನಿಭಕ್ಷಿ

ಮಾತುಕತೆ ಮತ್ತು ಹೊಸ ಪುಸ್ತಕ

ಕೆ. ಸತ್ಯನಾರಾಯಣ

ರಜನಿಭಕ್ಷಿ ಕನ್ನಡ ಓದುಗರಿಗೆ ಹೊಸಬರಲ್ಲ. ಇವರ 'ಬಾಪುಕುಟಿ' ಕನ್ನಡ ಅನುವಾದದಲ್ಲಿ ಸಾಕಷ್ಟು ಜನಪ್ರಿಯತೆಯನ್ನು, ಓದುಗರನ್ನು ಗಳಿಸಿಕೊಂಡಿದೆ.★

ಗಾಂಧಿಯ ನಂಬಿಕೆ ಮತ್ತು ಪ್ರಯೋಗಶೀಲತೆ ಸ್ವಾತಂತ್ರೋತ್ತರ ಬದುಕಿನಲ್ಲಿ ಹೇಗೆ, ಯಾವ ರೀತಿಯಲ್ಲಿ ಎಂತಹವರ ಮೂಲಕ ಜೀವಂತವಾಗಿದೆಯೆನ್ನುವುದನ್ನು ಭಾರತದುದ್ದಕ್ಕೂ ಬೇರೆ ಬೇರೆ ರೀತಿಯಲ್ಲಿ ಜೀವನ ಶೈಲಿ, ಸಂಘಟನೆ, ಕಾರ್ಯಕ್ಷಮತೆಯ ಮೂಲಕ ಶೋಧಿಸುತ್ತಿರುವ ಕ್ರಿಯಾಶೀಲರ ಜೀವನಗಾಥೆ, ಹೋರಾಟ, ಸೋಲು-ಗೆಲುವು, ಆದರ್ಶದ ವಾಂಛೆ- ಇದೆಲ್ಲವನ್ನು ಕಥನ ಮತ್ತು ವ್ಯಕ್ತಿ ಚಿತ್ರ ಬೆರೆತ ವಿಶ್ಲೇಷಣಾತ್ಮಕ ಶೈಲಿಯಲ್ಲಿ ರಜನಿಯವರು ನಿರೂಪಿಸಿದ ರೀತಿ ಕನ್ನಡ ಓದುಗರಿಗೆ ಹೊಸದಾಗಿತ್ತು ಇಷ್ಟು ಮಾತ್ರವಲ್ಲ, ಈ ಕೃತಿ ಮೊದಲು ಮರಾಠಿಯಲ್ಲಿ ಪ್ರಕಟವಾದಾಗಲೂ, ಇಷ್ಟೇ ಜನಪ್ರಿಯವಾಗಿತ್ತಂತೆ. ನಂತರ ಇಂಗ್ಲಿಷ್ ಆವೃತ್ತಿ,



★ (ಕನ್ನಡಾನುವಾದ: ಕೆ. ವೆಂಕಟರಾಜು, ಪ್ರಕಾಶಕರು, ಅಭಿನವ, ಬೆಂಗಳೂರು) ಈ ಪುಸ್ತಕದ ಸಮೀಕ್ಷೆಯ ಬಗ್ಗೆ ಕುತೂಹಲವಿರುವವರು ನನ್ನ 'ಮನೋ ಧರ್ಮ' ಸಂಕಲನದಲ್ಲಿ 'ಗಾಂಧಿಯ ಮರುಶೋಧನೆ' ಎಂಬ ಲೇಖನವನ್ನು ಗಮನಿಸಬಹುದು.

೧೯೯೯ರಲ್ಲಿ ಈ ಪುಸ್ತಕದ ಸಮೀಕ್ಷೆ ಬರೆದಾಗ ರಜನಿಯವರನ್ನು ನಾನು ಎಂದಾದರೂ ಭೇಟಿ ಮಾಡುವ ಸಂದರ್ಭ ಬರಬಹುದೆಂದು ನಿರೀಕ್ಷಿಸಿರಲಿಲ್ಲ. ಮುಂಬೈಗೆ ವರ್ಗವಾಗಿ ಬಂದ ನಂತರ ರಜನಿಯವರು ನಾನು ಇರುವ ಮನೆಯ ಹತ್ತಿರವೇ ಇರುವುದಾಗಿ ತಿಳಿದುಬಂತು. ಕಾದಂಬರಿಕಾರ ಕುಸುಮಾಕರ ದೇವರಗೆಣ್ಣೂರರ ಸೋದರ ಶ್ರೀ ಪ್ರಹ್ಲಾದ್ ದಿವಾಣಜಿಯವರಿಗೆ ರಜನಿಯವರ ಪರಿಚಯವಿತ್ತು. ದಿವಾಣಜಿಯವರೇ ಆಸಕ್ತಿವಹಿಸಿ ಭೇಟಿ ಮತ್ತು ಮಾತುಕತೆಗೆ ಒಂದು ಸಂದರ್ಭ ಕಲ್ಪಿಸಿದರು. ಮಾತುಕತೆಯುದ್ದಕ್ಕೂ ಹಾಜರಿದ್ದ ದಿವಾಣಜಿಯವರು ರಜನಿಯವರೊಡನೆ ಮಾತನಾಡಿದ್ದು ಯೋಗಕ್ಷೇಮದ ಬಾಬತ್ತನ್ನು ಮಾತ್ರ. ಮಾತುಕತೆಯನ್ನು ನಮ್ಮಿಬ್ಬರಿಗೇ ಬಿಟ್ಟರು. ಮಾತುಕತೆಯ ಸಂದರ್ಭದಲ್ಲಿ ಸಹಕರಿಸಿದವರು ನನ್ನ ಸಹಾಯಕಾಧಿಕಾರಿ ವಿಪಾಸನ, ಆಧ್ಯಾತ್ಮ ಪ್ರಯೋಗಗಳಲ್ಲಿ ಪರಿಶ್ರಮವಿರುವ ಶ್ರೀ ದಿನೇಶ್ ಚೌರಾಸಿಯ ಮಾತುಕತೆಯ ಒಂದು ಹಂತದಲ್ಲಿ ರಜನಿಯವರಿಗೆ ಬೇಕಾಗಿದ್ದ ಕೆಲವು ಯೋಗಿಕ ಪರಿಭಾಷೆಯನ್ನು ಕೂಡ ಒದಗಿಸಿದರು. ಈ ಇಬ್ಬರೂ ಹಿತೈಷಿಗಳಿಗೂ ಕೃತಜ್ಞತೆಗಳು.

ರಜನಿಯವರ ಹೊಸ ಪುಸ್ತಕ BAZARS, CONVERSATIONS AND FREEDOM FOR A MARKET CULTURE BEYOND GREED AND FEAR-- ೨೦೦೯ರ ಸೆಪ್ಟಂಬರ್‌ನಲ್ಲಿ ಪ್ರಕಟವಾಯಿತು. ಈ ಕೃತಿಯ ಓದಿನಿಂದ ಮೂಡಿಬಂದ ವಿಚಾರಗಳೇ ಮಾತುಕತೆಗೆ ತಕ್ಷಣದ ಪ್ರೇರಣೆಯಾಗಿದ್ದರೂ, ಪ್ರಶ್ನೆಗಳನ್ನು ''ಬಾಪುಕುಟಿ'' ಕೃತಿಯ ಹಿನ್ನೆಲೆಯಲ್ಲೂ, ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಯ ಪರಿಪ್ರೇಕ್ಷದಲ್ಲೂ ತಯಾರು ಮಾಡಿಕೊಂಡು ಟಿಪ್ಪಣಿಗಳೊಡನೆ ರಜನಿಯವರನ್ನು ಭೇಟಿಯಾದದ್ದು.

ಮಾತುಕತೆಯ ವಿವರಗಳಿಗಿಂತಲೂ ಮುಂಚೆ ಮತ್ತು ಮುಖ್ಯವಾಗಿ ಹೇಳಬೇಕಾದ್ದು ಸಂದರ್ಶನ ನಡೆದ ರೀತಿಯ ಬಗ್ಗೆ. ಮನೆಯ ಸದಸ್ಯರೊಡನೆ ಗೃಹಕೃತ್ಯದ ಸಂಗತಿಗಳನ್ನು ಮಾತಾಡುವ ರೀತಿಯಲ್ಲೇ ಇಡೀ ಸಂದರ್ಶನ ನಡೆಯಿತು. ಸಾಮಾನ್ಯವಾಗಿ ಸಂದರ್ಶನದಲ್ಲಿ ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಲಾಗುತ್ತದೆ. ಇಲ್ಲಿ ಮಾತ್ರ ರಜನಿಯವರಿಗೇ ಹೆಚ್ಚು ಪ್ರಶ್ನೆಗಳಿದ್ದವು. ಪ್ರಶ್ನೆಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿದ್ದರು ಎಂಬುದು ಒಂದು ಮುಖ. ಎಷ್ಟೋ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುತ್ತಿದ್ದರು. ಮಾತುಕತೆ ಉತ್ತರದ ದಿಕ್ಕಿನಿಂದ ವಿಮುಖವಾದಾಗ ಯಾರನ್ನು ಉತ್ತರ ಕೇಳಬಹುದು, ಸಲಹೆ ಕೇಳಬಹುದು ಎಂದು ಚರ್ಚಿಸಲು ಪ್ರಾರಂಭಿಸುತ್ತಿದ್ದರು. ಬರವಣಿಗೆ, ಸ್ವಯಂಸೇವೆ, ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದರಿಂದ ನಾನು ಇತರರಿಗಿಂತ ನೈತಿಕವಾಗಿ ಸಾಮಾಜಕವಾಗಿ ಭಿನ್ನವೆಂದು ಎಲ್ಲೂ ಕಾಣಿಸಿಕೊಳ್ಳಲಿಲ್ಲ. ಕಾಣಿಸಿಕೊಳ್ಳಲಿಲ್ಲ ಎಂದರೆ ತಪ್ಪಾಗುತ್ತದೆ. ಆ ರೀತಿಯ ಕಲ್ಪನೆ, ಸ್ವಯಂ ಪ್ರಾಮುಖ್ಯತೆಯ ದಿಕ್ಕಿನಲ್ಲಿ ರಜನಿಯವರ ಮನಸ್ಸು ಯೋಚಿಸೇ ಇಲ್ಲವೆನ್ನುವುದು ಹೆಚ್ಚು ಸೂಕ್ತ. ಮಾತುಕತೆಯುದ್ದಕ್ಕೂ ರಜನಿಯವರ ವಯಸ್ಸಾದ ತಾಯಿ ನಮ್ಮೊಂದಿಗೇ ಕುಳಿತಿದ್ದರು. ಮಾತುಕತೆಯ ಕೆಲವು ಹಂತಗಳಲ್ಲಿ ತಾಯಿಯವರು ಕುತೂಹಲ ತೋರಿದಾಗ ರಜನಿಯವರು, ಎಷ್ಟೋ ಸಂಗತಿ, ಪರಿಕಲ್ಪನೆಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ತಾಳ್ಮೆಯಿಂದ ವಿವರಿಸಿ, ನಂತರ ಮತ್ತೆ ವಿವರಿಸುವುದಾಗಿ ಸಾವಧಾನದಲ್ಲಿ ಸಮಾಧಾನ ಹೇಳುತ್ತಿದ್ದರು. ಈ ನಡಾವಳಿಗಳೂ ಕೂಡ ರಜನಿಯವರ ಮಾತುಕತೆಯಷ್ಟೇ ಮುಖ್ಯವಾದದ್ದರಿಂದ ಮಾತುಕತೆಯ ವಿವರಗಳಿಗಿಂತ ಮುಂಚೆಯೇ ಪ್ರಸ್ತಾಪಿಸುತ್ತಿದ್ದೇನೆ.

ತಮ್ಮ ಸದ್ಯದ ಬರವಣಿಗೆಯ ರೀತಿಗೆ ಹಿನ್ನೆಲೆಯಾಗಿ ಸ್ವಂತ ವ್ಯಕ್ತಿತ್ವವೊಂದನ್ನು ರೂಪಿಸಿಕೊಳ್ಳಲು ನೆರವಾದ ಹುಡುಕಾಟದ ಬಗ್ಗೆ ರಜನಿ ಮಾತುಕತೆಗೆ ಹೋಗಿದ್ದ ನಾವು ಹೊಸಬರಾದರೂ ಮುಕ್ತ ರೀತಿಯಲ್ಲಿ ಹೇಳಿಕೊಂಡರು.

★

ನನ್ನದು ಎಲ್ಲ ರೀತಿಯಿಂದಲೂ ಅನುಕೂಲಸ್ಥ ಹಿನ್ನೆಲೆ. ಪಂಜಾಬಿಗಳಾದ ನನ್ನ ಪೂರ್ವಜರು, ಬಂಧುಗಳು ಈವತ್ತಿನ ಪಾಕಿಸ್ತಾನದ ಮೂಲದವರು. ದೇಶ ಇಬ್ಭಾಗವಾಗಿ, ಕೋಮುಗಲಭೆಯಾಗಿ ದೆಹಲಿಯ ಕಡೆಗೆ ಉಳಿದವರು. ಒಡಕು, ಗಲಭೆ, ಹಿಂಸೆಯೆಲ್ಲ ತಾತ್ಕಾಲಿಕವಾದದ್ದು ಕೆಲ ತಿಂಗಳುಗಳು ಮಾತ್ರ ಇರುತ್ತದೆ. ಮತ್ತೆ ನಾವುಗಳೆಲ್ಲ ನಮ್ಮ ನಮ್ಮ ಮನೆ ಮಠ, ಆಸ್ತಿ, ವ್ಯವಹಾರ, ಬಂಧು-ಬಳಗ-ಮಿತ್ರರೆಲ್ಲ ಇರುವ ನಮ್ಮ ನಮ್ಮ ಊರುಗಳಿಗೆ ಹಿಂತಿರುಗಿಬಿಡಬಹುದು ಎಂಬ ಭಾವದಲ್ಲೇ ತುಂಬಾ ಕಾಲ ಇದ್ದುದು. ಕೊನೆಗೂ ಮತ್ತೆ ಮೂಲಕ್ಕೆ ಹಿಂತಿರುಗಲು ಸಾಧ್ಯವಾಗಲೇ ಇಲ್ಲವೆಂಬ ಗಾಯ ಮತ್ತು ನೋವು ನಮ್ಮ ಬಂಧುಗಳಲ್ಲಿ ಉಳಿದೇಬಿಟ್ಟಿತು.

ತಂದೆ ರಿಸರ್ವ್ ಬ್ಯಾಂಕಿನಲ್ಲಿ ತುಂಬಾ ದೊಡ್ಡ ಹುದ್ದೆಯಲ್ಲಿದ್ದದ್ದರಿಂದ, ಜಮೈಕಾಗೆ ಬೇಕಾಗಿದ್ದ Development Bank ಪ್ರಾರಂಭಿಸಲು ಅಲ್ಲಿಗೇ ಹೋಗಿ ವಾಸವಾಗಿದ್ದುದರಿಂದ ಹೈಸ್ಕೂಲು ಶಿಕ್ಷಣವೆಲ್ಲ ನಡೆದದ್ದು ಹೊರಗಡೆಯೇ ಮತ್ತು ಸ್ವಲ್ಪ ಭಾಗ ಮಾತ್ರ ದೆಹಲಿಯಲ್ಲಿ. ನಂತರ ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದಲ್ಲಿ ರಾಜಕೀಯ ವಿಜ್ಞಾನದ ಪದವಿ. ಪ್ರೊ|| ದಯಾಕೃಷ್ಣರ ಬಗ್ಗೆ ಇದ್ದ ಗೌರವ ಮತ್ತು ಆಕರ್ಷಣೆಯಿಂದಾಗಿ ರಾಜಸ್ಥಾನದ ಜೈಪುರ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ. ನಂತರ ದೆಹಲಿಯ ಲೋಕಾಯಾನದ ಸಂಪರ್ಕ. ಸಂಚಾಲಕಿಯಾಗಿ ಜವಾಬ್ದಾರಿ. ಜೀವನ, ದಿನನಿತ್ಯದ ಬದುಕು ಯಾವತ್ತೂ ಯಾಂತ್ರಿಕವಾಗಬಾರದು, ಬೇಸರವಾಗಬಾರದು. ಬೆಳಗ್ಗೆಯಿಂದ ಸಂಜೆ ತನಕ ಒಂದೇ ಕಡೆ ಕುಳಿತಿರುವ ಕಛೇರಿ ಕೆಲಸ ಸೇರಬಾರದು ಎಂದು ಮೊದಲಿನಿಂದಲೂ ಅನಿಸಿತ್ತು. ಉತ್ತಮ ಹಿನ್ನೆಲೆಯಿಂದ ಬಂದು ಸಮಾಜದಿಂದ ಎಲ್ಲವನ್ನೂ ಪಡೆದಿದ್ದರಿಂದ ಸಮಾಜಕ್ಕೆ ಕೊಂಚವಾದರೂ ಹಿಂತಿರುಗಿಸಬೇಕೆಂಬ ಭಾವನೆ. ಈ ಚಡಪಡಿಕೆ, ತಳಮಳ, ಸ್ವಯಂಸೇವಾ ಸಂಸ್ಥೆಗಳೊಡನೆ ಒಡನಾಟ– ಇವುಗಳ ನಡುವೆ ಇದ್ದಾಗ ಗಾಂಧಿ ನನ್ನ ಬಳಿ ಬಂದರು. **ಗಾಂಧಿಯನ್ನು ಯಾರೂ ಹುಡುಕಿಕೊಂಡು ಹೋಗಿ ಪಡೆಯಲಾಗುವುದಿಲ್ಲ. ನಮ್ಮ ನಮ್ಮ ಹುಡುಕಾಟ, ಪಯಣ, ಶೋಧನೆಯ ಒಂದು ಹಂತದಲ್ಲಿ ಗಾಂಧಿಯೇ ನಮ್ಮ ಹತ್ತಿರ ಬರುತ್ತಾರೆ. ನಮ್ಮನ್ನು ಹುಡುಕುತ್ತಾರೆ ಮತ್ತು ಶೋಧಿಸುತ್ತಾರೆ. Gandhiji finds us out.** ಈ ಸಂದೇಶ, ಒಳನೋಟವನ್ನು ನಾವು ಮುಂದಿನ ಪೀಳಿಗೆಗಾಗಿ ತಿಳಿಸಬೇಕು.

ಗಾಂಧಿಯ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳಲು ನೆರವಾದದ್ದು ಎರಡು ಪುಸ್ತಕಗಳು. ಎರಿಕ್ ಎರಿಕ್‌ಸನ್‌ರ Gandhi's truth ಮತ್ತು ಗಾಂಧಿ ಜೀವನ ಕುರಿತ ಲೂಯಿ ಫಿಷರ್‌ನ ಪುಸ್ತಕ My week with Gandhiji - (ಪುಟ-೨೨೨) ಭಾಗದಲ್ಲಿ ಬರುವ ಈ ಮಾತುಗಳು ನಾನು ಗಾಂಧಿಯನ್ನು, ಜಗತ್ತನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಿದವು.

He had great charm. He was a remarkable natural phenomenon. Quite and insidiously overwhelming. Intellectual contact with him was a delight becuse **he opened his mind** and allowed us to see how the machine works. He did not attempt to express his ideas in finished term. He thought aloud. **He revealed each step in his thinking. You heard not only words but his thoughts.** You could therefore follow him as he moved to a conclusion. This prevented him from talking like a propagandist. He talked like a frined. He was interested in exchange of views; **but much more in the establishment of a presonal relationship.**

ಪತ್ರಿಕೋದ್ಯಮಿಯಾಗಿ ತರಬೇತಿ ಪಡೆದು ಕೆಲಸ ಮಾಡುವಾಗ, ಚಳುವಳಿ, ಮತ್ತು ಹೋರಾಟಗಳನ್ನು ಕುರಿತು ವರದಿಗಳನ್ನು ತಯಾರಿಸುತ್ತಿದ್ದಾಗ, ಬರವಣಿಗೆ ಮತ್ತು ಓದುವಿಕೆಯ ಬಗ್ಗೆ ಒಂದು ರೀತಿಯ ಹಿಂಜರಿಕೆ ಮತ್ತು ಪಾಪಪ್ರಜ್ಞೆಯಿತ್ತು. Activism ಬರವಣಿಗೆಗಿಂತ ದೊಡ್ಡದು ಮತ್ತು ಮುಖ್ಯವೆಂಬ ಭಾವನೆಯಿತ್ತು. ಶ್ರೀರಾಮ್ ಬಾಪಟ್, ಗಂಗೂಲಿ ಮತ್ತು ವಿಜಯಪ್ರತಾಪ್‌ರಂತವರು ನೈತಿಕ ಸ್ಥೈರ್ಯ ನೀಡಿದರು ಮತ್ತು ಮಾರ್ಗದರ್ಶನ ಮಾಡಿದರು. ಬರವಣಿಗೆಯ ಬಗ್ಗೆ ನಿನಗೆ ಒಲವಿದ್ದರೆ, ಬರೆಯುವುದೇ ನಿನ್ನ ಮನೋಧರ್ಮವಾಗಿದ್ದರೆ Writing is also an activism ಎಂದು ಮನದಟ್ಟು ಮಾಡಿಕೊಟ್ಟರು. ಆದರೆ ಸಂಶೋಧಕಿ, ಬುದ್ಧಿಜೀವಿ, ಸಿದ್ಧಾಂತಿಯಾಗುವಷ್ಟು ವಿಶಾಲವಾದ ಓದಿನ ಹಿನ್ನೆಲೆ ನನಗಿರಲಿಲ್ಲ. ಎಂ.ಜೆ. ಅಕ್ಬರ್‌ರಂತಹ ಧೀಮಂತ ಪತ್ರಿಕೋದ್ಯಮಿಗಳ ಬಳಿ ಕೆಲಸ ಮಾಡುತ್ತಿದ್ದುದ್ದರಿಂದ ನನ್ನನ್ನು ನಾನು ಶೋಧಿಸಿಕೊಳ್ಳಲು, ನನಗೆ ಬೇಕಾದ ರೀತಿಯಲ್ಲಿ ಬರವಣಿಗೆ ಮಾಡಲು ತುಂಬಾ ಸ್ವಾತಂತ್ರ್ಯ ಮತ್ತು ಪ್ರೋತ್ಸಾಹವಿತ್ತು.

೧೯೮೦ರ ದಶಕದ ಮುಂಬೈ ಜವಳಿ ಕಾರ್ಮಿಕರ ಹೋರಾಟದ ಏಳು-ಬೀಳುಗಳನ್ನು ತುಂಬಾ ಹತ್ತಿರದಿಂದ ಸೂಕ್ಷ್ಮವಾಗಿ ನೋಡಲು ಸಾಧ್ಯವಾಯಿತು. (THE LONG HAUL. THE BOMBAY TEXTILE WORKERS STRIKE- ಕೃತಿಯಲ್ಲಿ ಈ ಹೋರಾಟದ ವಿವರ-ವಿಶ್ಲೇಷಣೆಯಿದೆ.)

ಬಾಬ್ರಿ ಮಸೀದಿಯ ಗೊಂದಲ ಮತ್ತು ಹಿಂಸೆ ತುಂಬಿದ ದಿನಗಳಲ್ಲಿ ನಾನು ಏನೂ ಅರ್ಥವಾಗದೆ ಮಂಕಾಗಿಹೋದೆ; ಕುಗ್ಗಿಹೋದೆ. ಕಲ್ಕತ್ತಾದ ರಾಮಕೃಷ್ಣಾಶ್ರಮದಲ್ಲಿ ಹೋಗಿ ಇದ್ದು ಬಿಟ್ಟೆ, ಭಕ್ತಿ ಸಾಹಿತ್ಯಕ್ಕೆ ವಿಶೇಷವಾಗಿ ಸಂತ ಕಬೀರರ ಬರವಣಿಗೆಗೆ ತೆರೆದುಕೊಂಡೆ. ಕಬೀರರಿಂದ ಕಲಿತ ದೊಡ್ಡ ಪಾಠವೆಂದರೆ, ನಾನು ಇನ್ನೊಂದು ಮತ್ತು ಇನ್ನೊಬ್ಬರು ಅನ್ಯವಾದದ್ದು ಎಂದು ಭಾವಿಸುವುದು, ತಿಳಿಯುವುದು ಕೇವಲ ಮಾನಸಿಕ ಭ್ರಮೆಯಾಗಿರುತ್ತದೆಂದು. the other is always an illusion. ರಾಮಕೃಷ್ಣಾಶ್ರಮದ ಹಿರಿಯರು ಹೇಳಿದ್ದು ಒಂದೇ ಮಾತು. ನಾವೀಗ ತುಂಬಾ ಅಸೂಕ್ಷ್ಮ ದಿನಗಳಲ್ಲಿ ಬದುಕುತ್ತಿದ್ದೇವೆ. ನಿರಂತರ ಸಾವಧಾನ, ಪ್ರೀತಿ ಮತ್ತು ಪಯಣ ಮಾತ್ರ ಈಗ ನಮಗಿರುವ ದಾರಿ.

ಸಂದರ್ಶನವೆಂದು ನಮ್ಮ ಭೇಟಿಯನ್ನು ಕರೆಯಬಹುದಾದರೆ ಸಂದರ್ಶನದಲ್ಲಿ ಪ್ರಶ್ನೋತ್ತರವು ಇರಲಿಲ್ಲ. ಚರ್ಚೆಯೂ ಇರಲಿಲ್ಲ. ಆತ್ಮಾವಲೋಕನದ ಮೆಲುದನಿಯ ಮಾತುಗಳು. ಎದುರಿಗೆ ಕೂತಿರುವವರ ಗಮನ, ಮೆಚ್ಚುಗೆಗಿಂತ ಹೆಚ್ಚಾಗಿ ನಮಗೆ ನಾವೇ ಹೇಳಿಕೊಳ್ಳುವಂತಹ ಧ್ವನಿ.

ಹೀಗಾಗಿ ಕೆಲವು ಮುಖ್ಯ ಪರಿಕಲ್ಪನೆಗಳು ಮತ್ತು ವಿದ್ಯಮಾನಗಳನ್ನು ಕುರಿತಂತೆ ರಜನಿಯವರ ಆಲೋಚನೆಗಳನ್ನು ಸಂಕ್ಷಿಪ್ತವಾಗಿ ಮುಂದೆ ನೀಡಲಾಗಿದೆ.

Binary vision ಮನುಷ್ಯರನ್ನು ಮತ್ತು ವಿದ್ಯಮಾನಗಳನ್ನು ನಾವು ಇಲ್ಲಿ ನೀವು, ಸ್ವ ಮತ್ತು ಅನ್ಯ, ನಾವು ಮತ್ತು ಇತರೆಯವರು ಎಂಬ ದ್ವಂದ್ವಾತ್ಮಕ ಪರಿಕಲ್ಪನೆಗಳಲ್ಲಿ ಗ್ರಹಿಸುವುದನ್ನು ರಜನಿ ವಿರೋಧಿಸಿದರು. ಹೀಗೆ ಗ್ರಹಿಸುವುದರಿಂದ ತೀವ್ರವಾಗಬಹುದು, ನಾಟಕೀಯವಾಗಬಹುದು. ನಮಗೆ ಬೇಕಾದ ಆಯಾಮದ ಬಗ್ಗೆ ಹೆಚ್ಚಿನ ಒತ್ತು ಕೊಡಬಹುದು. ಸತ್ಯದಿಂದ ಮತ್ತು ಸತ್ಯದ ಬಹುಮುಖತೆಯಿಂದ ದೂರವಾಗುತ್ತೇವೆ. ಗಾಂಧಿಯವರ ಚಿಂತನ ಕ್ರಮದಲ್ಲಿ ಮಾತ್ರ ಈ ಸಮಸ್ಯೆಯ, ಅಪಾಯದ ನಿರಂತರ ಎಚ್ಚರವನ್ನು ನಾವು ಕಾಣಬಹುದು. ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ನಡೆಸಿದ ಹೋರಾಟದಿಂದಾಗಿ ವರ್ಣಭೇದ ನೀತಿ ಕೊನೆಗೊಂಡು ನಂತರ ಬಹುಸಂಖ್ಯಾತ ಕಪ್ಪು ಜನರು ಗದ್ದುಗೆ ಹಿಡಿದಾಗ, ಹಿಂದಿನ ಹಿಂಸೆ, ದಬ್ಬಾಳಿಕೆ ಬಗ್ಗೆ ವಿಚಾರಣೆಗಳು ನಡೆದಾಗ ಕಂಡುಬಂದದ್ದು ಎಲ್ಲರನ್ನು ಸಮಾನವಾಗಿ, ಒಂದೇ ಎಂದು ಕಾಣುವ, ಮನುಷ್ಯರ ನಡುವೆ ಇರುವ ಕೃತಕ ವಿಭಜನೆಗಳನ್ನು, ಪರಿಕಲ್ಪನೆಗಳನ್ನು ನಿರಾಕರಿಸುವ ಪ್ರಯತ್ನ ಮತ್ತು ಹೋರಾಟ.

ನಾವು ಯಾವಾಗಲೂ ಚಳುವಳಿಗೆ, ಹೋರಾಟಗಳಿಗೆ, ಈಗಾಗಲೇ ಶೋಷಣೆಗೆ, ಹಿಂಸೆಗೆ ಒಳಗಾಗಿರುವ victimsಗಳನ್ನು ಸಂಘಟಿಸಲು, ನಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತೇವೆ. non-victimsಗಳನ್ನು ಕೂಡ ನಮ್ಮ ತೆಕ್ಕೆಗೆ ಸೆಳೆದುಕೊಳ್ಳಬೇಕು. ನರ್ಮದಾ ಬಚಾವೋ ಚಳುವಳಿಯಲ್ಲಿ, ಪರಿಸರ ಪ್ರೀತಿಯ ಚಳುವಳಿಯಲ್ಲಿ ಇದು ಸ್ವಲ್ಪ ಮಟ್ಟಿಗೆ ಸಾಧ್ಯವಾಯಿತು. ಹೋರಾಟ ಮುಗಿದ ನಂತರದ ಸಮಾಜದ ನೆಮ್ಮದಿ ಮತ್ತು ಆರೋಗ್ಯದ ದೃಷ್ಟಿಯಿಂದ non-victims ಕೂಡ ನಮ್ಮ ಜೊತೆ ಇರಬೇಕಾದ ಅಗತ್ಯವಿದೆಯಷ್ಟೇ. ನಾವು ಯಾವುದೇ ಹೋರಾಟವನ್ನು ಪ್ರಾರಂಭಿಸುವಾಗಲೂ, ಸಮಾಜದಲ್ಲಿ ಈಗಾಗಲೇ ಆಗಿರುವ ಬದಲಾವಣೆ ಮತ್ತು ಮನಪರಿವರ್ತನೆಯನ್ನು ಕೂಡ ಮಾನ್ಯ ಮಾಡಬೇಕು. ದಲಿತರನ್ನು ಕುರಿತಂತೆ ಸಮಾಜವು ನೋಡುವ ದೃಷ್ಟಿಕೋನದಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಇದು ಸಾಲದು ಎಂಬುದು ನಿಜವಿದ್ದರೂ, ಈಗಾಗಲೇ ಆಗಿರುವ ಮನಪರಿವರ್ತನೆಯನ್ನು ಗಮನಿಸದೆ ಹೋದರೆ, ಮುಂದಿನ ಹೆಜ್ಜೆ ಮತ್ತು ಗತಿಗೆ ಸರಿಯಾದ ಒತ್ತಾಸೆ ನೀಡಲಾರೆವು.

ಬದಲಾವಣೆ ಹಾಗೂ ಪರಿವರ್ತನೆ ಬಗ್ಗೆ ರಜನಿಯವರು ಆಸಕ್ತಿ ತೋರುವ ವಲಯಗಳು ಕುತೂಹಲಕಾರಿಯಾದವು. ಮನುಷ್ಯನ ಆಧ್ಯಾತ್ಮ ಮತ್ತು ಅಂತರಂಗದ ಸಂಶೋಧನೆ ಕುರಿತಂತೆ ನಮ್ಮ ಕಾಲದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಕೂಡ ಸ್ವಯಂ ಸೇವಾ ಸಂಸ್ಥೆಗಳ ಕ್ರಿಯಾಶೀಲತೆ ಮತ್ತು ಪ್ರತಿಭಟನಾತ್ಮಕ ಹೋರಾಟದಷ್ಟೇ ಮುಖ್ಯ. ಇಷ್ಟು ಮಾತ್ರವಲ್ಲ ದಿನನಿತ್ಯದ ಕ್ರಮವನ್ನು ಮೌಲಿಕಗೊಳಿಸಲು, ಸುಂದರಗೊಳಿಸಲು ಈಗಾಗಲೇ ಕಾರ್ಖಾನೆ, ಕಚೇರಿಗಳಲ್ಲಿ ನಡೆಯುತ್ತಿರುವ ನಾನಾರೀತಿಯ ಕಾರ್ಯಕ್ರಮಗಳು, ಚಿಂತನೆಗಳನ್ನು ಕೂಡ ಗುರುತಿಸಿ ಒಪ್ಪಿಕೊಂಡು, ಪ್ರೋತ್ಸಾಹಿಸಬೇಕು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕಾರ್ಯಾಧ್ಯಕ್ಷರೊಡನೆ ಈ ಬಗ್ಗೆ ನಡೆಸಿದ ಮಾತುಕತೆಯನ್ನು ರಜನಿಯವರು ತುಂಬಾ ಉತ್ಸಾಹದಿಂದ ನನ್ನೊಡನೆ ಹಂಚಿಕೊಂಡಾಗ ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು. ವ್ಯವಸ್ಥೆಯ ಸಮಗ್ರ ಬದಲಾವಣೆಗೆ ಪ್ರಯತ್ನಿಸುವವರು, ಹೋರಾಡುವವರು ಇಂತಹ ಸಣ್ಣ-ಪುಟ್ಟ ಪ್ರಯತ್ನಗಳನ್ನು, ಕಾರ್ಯಕ್ರಮಗಳನ್ನು ಕುರಿತು ಸಿನಿಕವಾಗಿ ಮಾತನಾಡುವುದೇ ಹೆಚ್ಚು.

ಈ ಹಿನ್ನೆಲೆಯಲ್ಲೇ Indentity Politics ಕುರಿತು ಮಾತು ಬಂತು. ಹಿಂದೂ ಮಹಾಸಭಾ-ಮುಸ್ಲಿಂಲೀಗ್ ದಿನಗಳಿಂದಲೂ ಈ ರೀತಿಯ ರಾಜಕೀಯ ಚಟುವಟಿಕೆಗಳಿಗಿರುವ ಮಿತಿಯ ಬಗ್ಗೆ ಗೊತ್ತಿದ್ದೂ ಅದನ್ನೇ ಬೇರೆ ಬೇರೆ ರೀತಿಯಲ್ಲಿ ಮುಂದುವರೆಸುತ್ತಿರುವ ನಿರರ್ಥಕತೆಯ ಬಗ್ಗೆ ಪ್ರಸ್ತಾಪಿಸಲಾಯಿತು. Indentity Politics ಮಿತಿ ಕುರಿತು ವಿರೋಧಿಸುವ ಉತ್ಸಾಹದಲ್ಲಿ ನೊಂದವರನ್ನು ದಮನಿತರನ್ನು ಧ್ವನಿಯಿಲ್ಲದವರನ್ನು, ಆಯಾ ವರ್ಗಗಳ ವಿಶಿಷ್ಟ ಹಿನ್ನೆಲೆ-ಸಮಸ್ಯೆಗಳ ನೆಲೆಯಲ್ಲಿ ಸಂಘಟಿಸುವ, ಆ ರೀತಿಯ ಸಂಘಟನೆಗಳಿಗಿರುವ ಪ್ರಾಮುಖ್ಯತೆ ಬಗ್ಗೆ ನಮ್ಮ ನಿಲುವು ಯಾವ ರೀತಿಯದೆಂಬುದರ ಬಗ್ಗೆ ಸದಾ ಗಮನ ಮತ್ತು ಎಚ್ಚರವಿರಬೇಕೆಂದರು. ಹೀಗೆ ಹೇಳುವಾಗ ಉಲ್ಲೇಖಿಸಿದ್ದು ದಲಿತರ ಮತ್ತು ಗಿರಿಜನರ ಸಂಘಟನೆಗಳನ್ನು, ಮುಸ್ಲಿಮರನ್ನು ಕುರಿತಂತೆ ಕೂಡ ಸರ್ಕಾರ ಮತ್ತು ಸಮಾಜದ ವತಿಯಿಂದ ವಿಶೇಷ ಒತ್ತಿನೊಡನೆ ತುಂಬಿದ ಕಾರ್ಯಕ್ರಮಗಳು ಬೇಕೇ ಬೇಕು ಎಂಬುದನ್ನು ಮರೆಯಬಾರದೆಂದರು. ಮಧ್ಯಕಾಲೀನ ಭಕ್ತಿ ಚಳುವಳಿಗಳಿಂದ ಈ ಕುರಿತು ಸ್ಫೂರ್ತಿ ಪಡೆಯಬಹುದಾಗಿದೆ ಎಂದು ಹೇಳುವಾಗ ಮತ್ತೆ ಪ್ರಸ್ತಾಪಿಸಿದ್ದು ಕಬೀರರನ್ನೇ.

ಗಾಂಧೀಜಿ ತಮ್ಮ ಕಾಲದ ಎಲ್ಲ ಸಮಸ್ಯೆಗಳನ್ನು, ಒಟ್ಟು ಮನುಷ್ಯ ನಾಗರೀಕತೆಯ ಸಂದರ್ಭದಲ್ಲಿ ಭೂತ-ಭವಿಷ್ಯ-ವರ್ತಮಾನಗಳ ವಿಶಾಲ ಚೌಕಟ್ಟಿನಲ್ಲಿ ಗ್ರಹಿಸಲು ಪ್ರಯತ್ನಿಸಿದರು. ಈ ಧೀಮಂತ ಗ್ರಹಿಕೆಗೆ ಸಿಕ್ಕ ಪರ್ಯಾಯ ಎಂಬಂತೆ ಭಾರತವೂ ಸೇರಿದಂತೆ ಎಲ್ಲ ಕಡೆಯ ಚಿಂತಕರು ಸಮಸ್ಯೆಗಳನ್ನು ಚಾರಿತ್ರಿಕ ನೆಲೆಗಳಲ್ಲಿ ಮಾತ್ರ ಗ್ರಹಿಸಿದರು. ಭಾರತದ ಸಾಂಪ್ರದಾಯಿಕ ಚಿಂತನೆಯ ಬಲವಿರುವುದು ಕೂಡ Civilizational ಸ್ತರವನ್ನು ಮರೆತೇಬಿಟ್ಟಿದ್ದೇವಲ್ಲ ಎಂಬ ಮಾತು ಬಂದಾಗ ಈ ಹೊರಳುವಿಕೆಗೆ ಮಾರ್ಕ್ಸ್‌ವಾದಿಗಳಿಗೆ ಚರಿತ್ರೆ ಮತ್ತು ಪ್ರಗತಿಯ ಬಗ್ಗೆ ಇದ್ದ ರೊಮ್ಯಾಂಟಿಕ್ ಕಲ್ಪನೆಗಳೇ ಕಾರಣವಿರಬೇಕೆಂಬ ಪಕ್ಕ ಬೆರೆತ ಅನುಮಾನವನ್ನು ಮಂಡಿಸಿದರು.

ಇತಿಹಾಸ ಮತ್ತು ಮನುಷ್ಯರ ಬದುಕನ್ನು ಗ್ರಹಿಸುವಲ್ಲಿ linear ಮಾದರಿಯಲ್ಲಿ ಚಿಂತಿಸಬೇಕೆ ಇಲ್ಲ Cyclical ಮಾದರಿಯಲ್ಲೇ ? ಎರಡೂ ಕ್ರಮಗಳಿಂದಲೂ ಪ್ರೇರಣೆ ಪಡೆದು ಮಧ್ಯದಲ್ಲಿ ಒಂದು ಹೊಸ ಹಾದಿ ಹುಡುಕುವ ಹಂತದಲ್ಲಿ ಈಗ ನಾವು ನಿಂತಿದ್ದೇವೆ. ಪ್ರಾಯಶಃ ಈ ಬಗ್ಗೆ ಒಂದು ಹೊಸದಾದ ವಿವರವಾದ ಪುಸ್ತಕವನ್ನು ಬರೆಯಬೇಕಾಗುತ್ತದೆ ಎಂದ ರಜನಿಯವರು ತಮ್ಮ ಚಿಂತನೆ ಮತ್ತು ಬರವಣಿಗೆಗೆ ವಿಶೇಷವಾಗಿ ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದವರೆಂದು ಮತ್ತೆ ಮತ್ತೆ ಪ್ರಸ್ತಾಪಿಸಿದ್ದು, ಪ್ರೊ. ರಾಮಕೃಷ್ಣ, ಬಿ.ಎಲ್. ಸೇಠ್ ಮತ್ತು ಅಶಿಶ್ ನಂದಿಯವರನ್ನು.

೩

BAZARS, CONVERSATIONS AND FREEDOM ಕೃತಿಯನ್ನು 'ಬಾಪುಕುಟಿ'ಯ ಮುಂದಿನ ಭಾಗವಂತೆ ಓದಬಹುದು. ಈ ಕೃತಿಯ ಮೂಲಕ ರಜನಿಯವರು ''ಬಾಪುಕುಟಿ''ಯನ್ನು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಹುಡುಕಿದ್ದಾರೆ. ಹೀಗೆ ಹುಡುಕಿದ ಬಾಪುಕುಟಿಯಲ್ಲಿ ಬೇರೆ ಬೇರೆ ಸಂಸ್ಕೃತಿಗಳ, ಹಿನ್ನೆಲೆಯ ಮನೋಧರ್ಮದ ಚಿಂತಕರು, ಹೋರಾಟಗಾರರು, ಗೃಹಸ್ಥರು, ವಿಜ್ಞಾನಿಗಳು ತುಂಬಿದ್ದು ಗಾಂಧಿ ಚಿಂತನೆ ಮತ್ತು ಪ್ರಯೋಗಶೀಲತೆಯನ್ನು ಮುಂದುವರೆಸಿದ್ದಾರೆ.

ಈ ಕೃತಿಯ ಮುಖ್ಯ ಒಲವಿರುವುದು ಯಾವುದೇ ರೀತಿಯ ವೈಚಾರಿಕತೆಯ ಒಂದು ತುದಿಯಲ್ಲಿ ಹೋಗಿ ನಿಂತು extreme ಆಗಿ ಯೋಚಿಸುವ ರೀತಿಯನ್ನು ನಿರಾಕರಿಸುವುದರಲ್ಲಿ.

ಸರ್ಕಾರವೇ ಎಲ್ಲವನ್ನು ಮಾಡಬೇಕು, ಮಾಡುತ್ತದೆ ಎಂಬ ನಿಲುವು ಒಂದು ಕಡೆ. ಇಲ್ಲ ಇಲ್ಲ ಸರ್ಕಾರ ಮತ್ತು ಸಮಾಜವಾದ ಎರಡೂ ವಿಫಲವಾಗಿವೆ, ಇನ್ನೇನಿದ್ದರೂ ಮಾರುಕಟ್ಟೆ ಸಂಸ್ಕೃತಿ, ಸ್ಪರ್ಧೆಯನ್ನು ನೆಚ್ಚಬೇಕು ಎಂಬ ನಿಲುವಿನವರು ಒಂದು ಕಡೆ. ಈ ಎರಡೂ ರೀತಿಯ ಅತಿರೇಕದ ನಿಲುವುಗಳನ್ನು ಇಲ್ಲಿ ಒಪ್ಪುವುದಿಲ್ಲ. ಎರಡು ರೀತಿಯಲ್ಲಿ ಯೋಚಿಸುತ್ತಿರುವವರ ಮನಸ್ಸಿನೊಳಗಡೆ ಜರುಗುತ್ತಿರುವ ತುಮುಲ, ದ್ವಂದ್ವಗಳು, ಈ ತುಮುಲ ದ್ವಂದ್ವಗಳಿಂದಾಗಿ ಜಾಗೃತವಾಗುತ್ತಿರುವ ಹೊಸ ಹೊಸ ದರ್ಶನ, ಕಾಣ್ಕೆಗಳನ್ನು ನಮ್ಮ ಬೆನ್ನಿಗಿಟ್ಟುಕೊಂಡ ನಾಳೆಗಳನ್ನು ಕಟ್ಟಬೇಕು, ಕನವರಿಸಬೇಕು ಎಂದು ಸೂಚಿಸುತ್ತಾ, ಕೈಗಾರಿಕೆ, ಆಡಳಿತ, ಸ್ವಯಂಸೇವಾ ಸಂಸ್ಥೆಗಳು, ಅರ್ಥಶಾಸ್ತ್ರಜ್ಞರ ರಾಜಕೀಯಸ್ಥರ ಕಾರ್ಯಕ್ಷೇತ್ರ- ಈ ಎಲ್ಲ ನೆಲೆಗಳಿಂದ ಉದಾಹರಣೆಗಳನ್ನು ನೀಡಲಾಗಿದೆ. ಜಾಗತೀಕರಣದಿಂದಾಗಿ ನಮ್ಮಲ್ಲಿ ದುರಾಸೆ ಮಾತ್ರವಲ್ಲ, ಭಯವೂ ಕೂಡ ಹೆಚ್ಚಾಗಿದೆ. ಇದನ್ನೂ ಒಪ್ಪಿಕೊಂಡೇ ನಾವು ಪಾಠಗಳನ್ನು ನಮ್ಮಿಂದಲೇ ಕಲಿಯಬೇಕೇ ಹೊರತು, ಪ್ರಯೋಜನವಿಲ್ಲದ ಅತಿರೇಕದ ನಿಲುವುಗಳನ್ನು ಜಪ ಮಾಡಬಾರದು ಎಂದು ಮತ್ತೆ ಮತ್ತೆ ಹೇಳುತ್ತಾ ನೆಮ್ಮದಿಗೆ, ಕನಸಿಗೆ, ಕ್ರಿಯಾಶೀಲತೆಗೆ ಆಸೆಪಡುವ ಎಲ್ಲ ಸ್ತರದ ಜನರನ್ನು ಒಳಗೊಳ್ಳಲು ರಜನಿ ಪ್ರಯತ್ನಿಸುತ್ತಾರೆ. ನಮ್ಮ ಪ್ರಯತ್ನ-ಪ್ರಯೋಗಗಳಿಂದ ಯಾರೊಬ್ಬರನ್ನೂ ಹೊರಗಿಡಬಾರದು ಎಂಬುದು ಇವರ ಕಾಳಜಿ. ಜಗತ್ತು ಈಗಿರುವ ಸ್ಥಿತಿಗೇ ಒಂದು ಸ್ತರದ, ಒಂದು ರೀತಿಯ ಸ್ವಭಾವದ ಪ್ರಜ್ಞಾವಂತಿಕೆಯ ಕಾರಣ. ಜಗತ್ತಿನ ಈವತ್ತಿನ ಸಮಸ್ಯೆಗಳಿಗೆ ಮತ್ತೆ ನಾವು ಈಗಿರುವ ಪ್ರಜ್ಞಾವಂತಿಕೆಯ ಸ್ತರ ಮತ್ತು ಸ್ವರೂಪದಿಂದಲೇ ಉತ್ತರ ಹುಡುಕಲು ಹೋಗುವುದು ತಪ್ಪಾಗುತ್ತದೆ.

ಪೇಟೆ, ಸಂತೆ, ಪರಿಷೆ – ಇವೆಲ್ಲ ನಮ್ಮಲ್ಲಿ ಮೊದಲಿನಿಂದಲೂ ಇದ್ದದ್ದೇ. ಬೆಳೆಯುವವರು, ಮಾರುವವರು, ಕೊಳ್ಳುವವರು ಇಲ್ಲಿ ಬಂದು ಸೇರಿ ಹರಟೆ ಹೊಡೆದು, ಜೀವನದ ಕಷ್ಟ-ಸುಖಗಳನ್ನು ಹಂಚಿಕೊಂಡು ತಮಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಆತ್ಮೀಯ ಸ್ತರದಲ್ಲಿ ಪಡೆಯುತ್ತಿದ್ದರು– ಇಲ್ಲ ಕೊಡುತ್ತಿದ್ದರು. ಸಂತೆ, ಪರಿಷೆ, ಪೇಟೆಗಳೆಲ್ಲ ನಮ್ಮ ನಮ್ಮ ಮನೆಗಳ, ಬೀದಿಗಳ ವಿಸ್ತರಣೆಯಾಗಿತ್ತು. ನಾಗರೀಕತೆ ಬೆಳೆದಂತೆ ಸಂತೆ, ಪೇಟೆ, ಪರಿಷೆಯೆಲ್ಲ ಕ್ಷೀಣವಾಗಿ, ಮಾಯವಾಗಿ, ದೊಡ್ಡ ದೊಡ್ಡ ಮಾರ್ಕೆಟ್‌ಗಳು, ಮಾಲ್‌ಗಳು ಬಂದವು. ಇಲ್ಲಿ ಯಾರಿಗೆ ಯಾರೂ ಪರಿಚಯವಿಲ್ಲ. ಆತ್ಮೀಯ ವರಸೆಯಿಲ್ಲ. ಈ ಪುಸ್ತಕದಲ್ಲಿ ಆ ಪದಗಳನ್ನೆಲ್ಲ ರೂಪಕಾರ್ಥಗಳಲ್ಲಿ ಬಳಸಲಾಗಿದೆ. ದೊಡ್ಡ ದೊಡ್ಡ ಮಾರುಕಟ್ಟೆಗಳಿಂದ, ಹೊಸ ರೀತಿಯ ಆರ್ಥಿಕ ವ್ಯವಸ್ಥೆಯಿಂದಾಗಿ, ಸಂಪತ್ತು ಹೆಚ್ಚಿದೆ, ಹೊಸ ವಸ್ತುಗಳ ಸೃಷ್ಟಿಯಾಗಿದೆ. ಹೆಚ್ಚು ಹೆಚ್ಚು ಜನರಿಗೆ ನಿತ್ಯದ ಜೀವನ ಹಸನಾಗಿದೆ. ಹೀಗಿದ್ದರೂ ಜನರಿಗೆ ನೆಮ್ಮದಿಯಿಲ್ಲ. ಹೊಸ ರೀತಿಯ ಆರ್ಥಿಕತೆಯಿಂದಾಗಿ ಕಂಡುಬಂದ ಸಕಾರಾತ್ಮಕ ಬೆಳವಣಿಗೆಗಳನ್ನು ನಿರಾಕರಿಸದೆ, ಸಮುದಾಯಮುಖಿಯಾಗಿದ್ದ ಹಿಂದಿನ ಜೀವನಶೈಲಿಯ ಆತ್ಮೀಯ ವರಸೆಗಳನ್ನು ಮತ್ತೆ ಹೇಗೆ ಸ್ಥಾಪಿಸಬಹುದು, ಹೀಗೆ ಸ್ಥಾಪಿಸಲು ನಡೆಯುತ್ತಿರುವ ಪ್ರಯತ್ನಗಳು ಯಾವ ರೂಪದವು ಎಂಬುದು ಈ ಕೃತಿಯುದ್ದಕ್ಕೂ, ಆದರ್ಶದ, ಆಶಾವಾದದ, ಕನಸುಗಾರಿಕೆಯ ಪರಿಭಾಷೆಯಲ್ಲಿ, ವಿವರಗಳಲ್ಲಿ ಚರ್ಚೆಯಾಗಿದೆ.

ನೆಮ್ಮದಿಯ ಬದುಕು ಮತ್ತು ಸಮಾಜದ ಬಗ್ಗೆ ಕನವರಿಸುವಾಗ ನಾವು ಒಂದು ಪಥ್ಯವನ್ನು ಯಾವತ್ತೂ ಮರೆಯಬಾರದೆನ್ನುತ್ತಾರೆ ರಜನಿ. ನಮ್ಮ ನಮ್ಮ ವೈಯಕ್ತಿಕ, ಕೌಟುಂಬಿಕ ಜೀವನಗಳಲ್ಲಿ, ಕನವರಿಕೆಗಳಲ್ಲಿ ಆರ್ಥಿಕ ಸಂಗತಿಗಳು, ಹಣಕಾಸಿನ ವಿಚಾರಗಳು ತುಂಬಾ ಮುಖ್ಯವಾದ ಪಾತ್ರವನ್ನು ವಹಿಸುವುದಿಲ್ಲ. ಹಣಕಾಸಿನ ಆಯಾಮಕ್ಕಿಂತಲೂ ಹೆಚ್ಚಾಗಿ ನಾವು ವೈಯಕ್ತಿಕ ಸಂಬಂಧಗಳು, ಮನಸ್ಸಿನ ನೆಮ್ಮದಿ,

ಜೀವನದ ಸ್ಥಿತಿ ಈ ಆಯಾಮಗಳಿಗೂ ಮಹತ್ವ ನೀಡುತ್ತೇವೆ. ಹೀಗಿದ್ದಾಗ ಒಂದು ದೇಶ ಮತ್ತು ಸಮಾಜದ ಬಗ್ಗೆ ಯೋಚಿಸುವಾಗ ಮಾತ್ರ ನಾವು ಏಕೆ ಆರ್ಥಿಕ ಆಯಾಮಗಳ ಕಡೆಯೇ ಗಮನ ಕೊಡಬೇಕು. ಹೀಗಾಗಿ ಆರ್ಥಿಕ ಪ್ರಭಾವ ಪ್ರಾಬಲ್ಯತೆಯನ್ನೇ ಆಧಾರವಾಗಿಟ್ಟುಕೊಂಡಿರುವ ಮಾರುಕಟ್ಟೆ ಪ್ರೇರಿತ ಚಿಂತನೆ, ಲಾಭಾಂಶದ ಕಾರ್ಯಸೂಚಿಯನ್ನೇ ಎಲ್ಲಕ್ಕೂ ಮೂಲಭೂತವಾಗಿ ತಟ್ಟಿದೆ. ಆಡಂ ಸ್ಮಿತ್ ಕೂಡ ತನ್ನ Wealth of Nations ಬರೆದಾಗ ಈಸ್ಟ್ ಇಂಡಿಯಾ ಕಂಪನಿಗಿದ್ದ ಬರೀ ಲಾಭಾಂಶದ ಆಕಾಂಕ್ಷೆಗಳನ್ನೂ, ಸಮಾಜ ವಿಮುಖವಾದ ವಾಣಿಜ್ಯ ನೀತಿಯನ್ನು ಪ್ರಶ್ನಿಸಿ ಪ್ರತಿಯೊಬ್ಬರೂ ಸ್ವಾತಂತ್ರ್ಯ, ಸಮೃದ್ಧಿ, ಉತ್ಪಾದನಾ ಶಕ್ತಿ, ಲಾಭವನ್ನು ಹೆಚ್ಚಿಸಿಕೊಳ್ಳುವುದರ ಪರವಾಗಿ ವಾದಿಸಿದ್ದ. ಈ ಹಿನ್ನೆಲೆಯಲ್ಲಿ ರಜನಿಯವರು ಮಂಡಿಸುವ ಒಂದು ಪ್ರಶ್ನೆ ಮಾರ್ಮಿಕವಾಗಿದೆ. ನಾವು ವಾಸಿಸುತ್ತಿರುವ ಭೂಮಿಯನ್ನು ಮನೆಯೆಂದು, ನಮ್ಮಂತರಂಗದ ಭಾಗವೆಂದು ಭಾವಿಸಬೇಕೋ ಇಲ್ಲ ಕೇವಲ ಸಂಪನ್ಮೂಲವಾಗಿ, ಉತ್ಪಾದನಾಂಗವಾಗಿ ಭಾವಿಸಬೇಕೋ?

ಯುಧಿಷ್ಠಿರನ ವ್ಯಕ್ತಿತ್ವ ಮತ್ತು ಸ್ವಭಾವದ ಬಗ್ಗೆ ಆಧುನಿಕ ಕಾಲದಲ್ಲಿ ಬದುಕುತ್ತಿರುವ ನಾವೆಲ್ಲ ಗಮನ ಹರಿಸಬಹುದೇನೋ! ರಜನಿ ಸೂಚಿಸುತ್ತಾರೆ. ಸಂಪತ್ತು ಬೇಡವೆಂದವರಾರು? ಆದರೆ ಸಂತೋಷ ಮತ್ತು ಸಮೃದ್ಧಿಯೂ ಬೇಕಲ್ಲವೇ. ನಮ್ಮ ಆ ದೌರ್ಬಲ್ಯವನ್ನೂ, ಮನೋಕಾಮನೆಗಳನ್ನು ನಾವೇಕೆ ನಿಗ್ರಹಿಸಬೇಕೆಂದರೆ, ಹೆಚ್ಚು ಹೆಚ್ಚು ಸ್ವಾತಂತ್ರ್ಯ ಪಡೆಯುವುದಕ್ಕೆ, ಮತ್ತು ಸಮಾಜಮುಖಿಯಾದ ಇನ್ನೂ ಹೆಚ್ಚಿನ ಸಂಪತ್ತು ಮತ್ತು ಜೀವನಾವಕಾಶಗಳನ್ನು ಸೃಷ್ಟಿಸುವುದಕ್ಕೆ. ಎಲ್ಲ ರೀತಿಯ ಗುಣ ಮತ್ತು ತಿಳುವಳಿಕೆಯಿದ್ದು, ಯುಧಿಷ್ಠಿರ ಒಂದು ದುರ್ಬಲ ಕ್ಷಣದಲ್ಲಿ ತನ್ನ ಸಾಮ್ರಾಜ್ಯ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಂಡ. ಹಾಗಿದ್ದೂ ಆತನ ವ್ಯಕ್ತಿತ್ವ ನಮಗೇಕೆ ಇಂದೂ ಪ್ರಸ್ತುತವೆಂದರೆ – ಹಾಗೆ ಸೋತ ನಂತರವೂ ಆತ ಗಳಿಸಲು ಪ್ರಯತ್ನಿಸಿದ್ದು, ಇನ್ನೂ ಹೆಚ್ಚಿನ, ಇನ್ನೂ ಸೂಕ್ಷ್ಮ ಸ್ತರದ ಸ್ವಾತಂತ್ರ್ಯವನ್ನು. ತನ್ನೆಲ್ಲ ಮನೋಕಾಮನೆಗಳನ್ನು ಹದ್ದುಬಸ್ತಿನಲ್ಲಿಡಬಲ್ಲ ನಿಜವಾದ ಸ್ವಾತಂತ್ರ್ಯವನ್ನು. ಜಾಗತೀಕರಣ ರೂಪಿಸುತ್ತಿರುವ ವ್ಯಕ್ತಿತ್ವದಿಂದ ತಪ್ಪಿಸಿಕೊಳ್ಳಲು ಯುಧಿಷ್ಠಿರನಂತಹ ಮನೋಧರ್ಮದವರ ನಾಯಕತ್ವದ ಅಗತ್ಯವಿದೆ. ಈ ಪುಸ್ತಕದುದ್ದಕ್ಕೂ ಇಂತಹ ಪುಟ್ಟ ಪುಟ್ಟ ಯುಧಿಷ್ಠಿರರೇ ತುಂಬಿದ್ದಾರೆ. ಈ ಸಂಬಂಧಪಟ್ಟಂತೆ ರಜನಿ ಇನ್ನೂ ಒಂದು ಪ್ರಶ್ನೆ ಮಂಡಿಸುತ್ತಾರೆ. ಕಮ್ಯುನಿಸಂ, ಚೀನಾ, ರಷ್ಯಾ ಸಾಮ್ರಾಜ್ಯಗಳೆಲ್ಲ ಕುಸಿದುಬಿದ್ದದ್ದು – ಮತ್ತಾವ ದೇಶದ ವಿರೋಧದಿಂದಲ್ಲ, ಆ ಸಮಾಜದ ಜನರಿಗೇ ಇನ್ನೂ ಹೆಚ್ಚಿನ ಸ್ವಾತಂತ್ರ್ಯ-ಸಮಾನತೆಯ ಬಯಕೆ ಮೂಡಿದ್ದರಿಂದ. ಆರ್ಥಿಕತೆ, ಶಕ್ತಿವರ್ಧನೆ, ಸ್ಪರ್ಧೆ, ತರತಮ ಭಾವನೆಯನ್ನೇ ಆಧಾರವಾಗಿಟ್ಟುಕೊಂಡಿರುವ ಜಾಗತೀಕರಣದ ಪರಿಕಲ್ಪನೆಯನ್ನು ಕೂಡ ಮನುಷ್ಯ ಕಮ್ಯುನಿಸಂ ಅನ್ನು ವಿರೋಧಿಸಿದ ಕಾರಣಕ್ಕೇ ವಿರೋಧಿಸುವುದಿಲ್ಲ ಎಂದು ಗ್ಯಾರಂಟಿಯೇನು? ಮನುಷ್ಯ ಸ್ವಭಾವದಲ್ಲೇ ಯಾವುದೇ ಧ್ಯೇಯ, ಚಿಂತನಾಪದ್ಧತಿ ತುದಿಗೆ ಹೋಗಿ ಅತಿರೇಕಕ್ಕೆ ತಲುಪಿದಾಗ ಬಂಡಾಯವೇಳುವ, ಇನ್ನೂ ಸೂಕ್ಷ್ಮಸ್ತರದ ಸ್ವಾತಂತ್ರ್ಯವನ್ನು ಬಯಸುವ ಪ್ರವೃತ್ತಿ ಇದ್ದೇ ಇದೆ. ಈ ಪ್ರವೃತ್ತಿಯನ್ನೇ ನಾವು ಮೂಲಾಧಾರವಾಗಿಟ್ಟುಕೊಂಡು ನಾಳೆಗಳನ್ನು ಕಟ್ಟಬಾರದೇಕೆ? ರಜನಿಯವರ ಪ್ರಕಾರ ಇದು ಸಾಧ್ಯ. ಯಾವಾಗೆಂದರೆ ವಾಣಿಜ್ಯ-ವ್ಯಾಪಾರ- ಆರ್ಥಿಕ ಕಲ್ಪನೆಗಳಿಗೂ ಕೂಡ ಮಾನವೀಯ ಆಯಾಮವಿರಬೇಕು, ಇರುತ್ತದೆ ಎಂದು ನಾವೇ ನಂಬಿದಾಗ. ವಾಣಿಜ್ಯ-ವ್ಯಾಪಾರ, ಆರ್ಥಿಕತೆಗೆ ಸಂಬಂಧಪಟ್ಟದ್ದೆಲ್ಲ ಸಮಾಜವಿಜ್ಞಾನಿಗಳಿಗೆ, ಮ್ಯಾನೇಜ್‌ಮೆಂಟ್ ಪ್ರವೀಣರಿಗೆ ಸಂಬಂಧಪಟ್ಟದ್ದು, ಮಾನವೀಯ ಆಯಾಮಗಳು, ಮಾನಸಿಕ ರಚನೆಗಳು ಸಂಸ್ಕೃತಿ-ತತ್ವಶಾಸ್ತ್ರದ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸಂಬಂಧಪಟ್ಟದ್ದು ಎಂಬ ಕೃತಕ ವಿಭಜನೆಯನ್ನು ಮಾಡಲು ನಮ್ಮ ಮನಸ್ಸಿನಿಂದ ನಾವೇ ಹೊರಬರಬೇಕಷ್ಟೇ.

ಈ ಮನೋಧರ್ಮವಿರುವ ನಮ್ಮ ಕಾಲದ ಪುಟ್ಟ ಪುಟ್ಟ ಯುಧಿಷ್ಠಿರರನ್ನು, ಇಂಥವರ ಕೆಲವು ಪ್ರಯೋಗ ಕೃತಿಗಳನ್ನು ಗಮನಿಸಬಹುದು. ರಜನಿಭಕ್ಷಿಯವರು ಈ ಕೃತಿಗೆ ಮುಖ್ಯವಾಗಿ ಪ್ರೇರಣೆ ಪಡೆದದ್ದು ಜಾರ್ಜ್ ಸೊರೊಸ್ ಎಂಬ ಯಶಸ್ವಿ ಬಂಡವಾಳ ಹೂಡಿಕೆದಾರನೊಬ್ಬನಿಂದ. ಮನುಷ್ಯರ ನಡುವೆ ಯಾವುದೇ ರೀತಿಯ ಸಹಕಾರ, ಒತ್ತಾಸೆಗಳಿಲ್ಲದೆ ಕೇವಲ ಸ್ಪರ್ಧೆ ಮತ್ತು ಮುಕ್ತ ಮಾರುಕಟ್ಟೆಯ ಮನೋಧರ್ಮವನ್ನೇ ನೆಚ್ಚಿಕೊಂಡರೆ ವಿಪರೀತ ರೀತಿಯ ಅಸ್ಥಿರತೆ ಮತ್ತು ಅಸಮಾನತೆಗೆ ನಾವೇ ಆಹ್ವಾನ ನೀಡಿದಂತೆ ಎಂದು ತನ್ನ ಯಶಸ್ಸಿನ ತುತ್ತತುದಿಯಲ್ಲಿದ್ದಾಗ ಚಿಂತಿಸಿದವನು ಈತ.

ನೆರೆಹೊರೆಯವರ, ಸಮಾಜದ ಒಳಿತಿನ ಕಲ್ಪನೆಯನ್ನು ಇಡಿಯಾಗಿ ತೊರೆದು. ಸ್ವಕೇಂದ್ರಿತ ಚಿಂತನೆ ಮತ್ತು ಆಕಾಂಕ್ಷೆಗಳಿಂದಲೇ ಎಲ್ಲರ ಒಳಿತನ್ನ ಸಾಧಿಸಬಹುದೆಂಬ ಕಲ್ಪನೆಗೆ, ಇನ್ನೊಬ್ಬರ ಒಳಿತನ್ನು ಸದಾ ಬಯಸುವ ಮನುಷ್ಯ ಸ್ವಭಾವ ತಿಳಿದೇ ಇಲ್ಲವೆಂದು ಈತ ವಾದಿಸಿದ. ಕಾರ್ಲ್ ಪೋಲ್‌ಯಾನಿ ಎಂಬ ಇತಿಹಾಸಕಾರ ಮತ್ತು ಮಾನವಶಾಸ್ತ್ರಜ್ಞನ ವಿಚಾರಗಳು ಇನ್ನು ಕುತೂಹಲಕಾರಿ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಮಾತ್ರ ಬದುಕುತ್ತಾನೆ ಮತ್ತು ಬದುಕಿನಲ್ಲಿ ಆರ್ಥಿಕಾಂಶಗಳೇ ಬಹುಮುಖ್ಯವಾದುವು ಎಂಬುದು ಮೊದಲಿಗೆ ಯೂರೋಪ್ ಕೇಂದ್ರಿತ ಚಿಂತನೆ. ಒಂದು ಹಂತದಲ್ಲಿ ಹೀಗೆ ಹೇಳಿದ ಪೋಲ್‌ಯಾನಿ ಮತ್ತೂ ಒಂದು ನೋಟವನ್ನು ಮಂಡಿಸುತ್ತಾನೆ. ಈ ರೀತಿಯ ಮನುಷ್ಯ ಕಲ್ಪನೆ ಯೂರೋಪಿನಲ್ಲಿ ಕೂಡ ಹಿಂದೆ ಇರಲಿಲ್ಲ. ಕೈಗಾರಿಕಾ ಕ್ರಾಂತಿಯ ನಂತರ ಮತ್ತು ಆ್ಯಡಂ ಸ್ಮಿತ್‌ನ ಬರವಣಿಗೆಯ ನಂತರವೇ ಈ ರೀತಿಯ ಕಲ್ಪನೆ ಚಾಲ್ತಿಗೆ ಬಂದದ್ದು. Sacred Journies of The East ಬರೆದ ಪೌಲ್ ಬ್ರಂಟನ್, ರಮಣ ಮಹರ್ಷಿಗಳನ್ನು ಒಂದು ಪ್ರಶ್ನೆ ಕೇಳುತ್ತಾನೆ. ಯಾವಾಗ ನಿಮ್ಮ ಭಾರತ ಪ್ರಗತಿ ಸಾಧಿಸಿ ಯೂರೋಪಿನ ಜೀವನಮಟ್ಟವನ್ನು ತಲುಪುವುದೆಂದು. ಯೂರೋಪಿನ ಜೀವನಮಟ್ಟವನ್ನು ತಲುಪುವ ಅಗತ್ಯವೇ ಇಲ್ಲವೆಂದು ಈಗಾಗಲೇ ಯೋಚಿಸಿ ನಮ್ಮ ಸಂಸ್ಕೃತಿಯಲ್ಲಿ ನಿರ್ಧರಿಸಿ ನಂಬಲಾಗಿದೆಯೆಂದು ರಮಣರು ಉತ್ತರಿಸುತ್ತಾರೆ. ಜಾರ್ಜ್‌ನ ಆರ್ವೆಲ್ ಕೂಡ ಕೇಳಿದ್ದು ಇದೇ ಪ್ರಶ್ನೆಯನ್ನು, ಕಮ್ಯುನಿಸಂನ ಸರ್ವಾಧಿಕಾರಿ ಧೋರಣೆ, ದಬ್ಬಾಳಿಕೆಯನ್ನು, ಇದಕ್ಕೆ ಕಾರಣವಾಗುವ ಸರ್ಕಾರದ ರಾಜ್ಯದ ಅಧಿಕಾರ ಕೇಂದ್ರೀಕರಣ ಮತ್ತು ಹಿಂಸೆಯನ್ನು ವಿರೋಧಿಸಬೇಕು ನಿಜ. ಇದಕ್ಕೆಲ್ಲ ಪರ್ಯಾಯವಾಗಿದೆ ಎಂದು ಹೇಳಲಾಗುತ್ತಿರುವ ಮುಕ್ತ ಮಾರುಕಟ್ಟೆ ಮತ್ತು ಸ್ಪರ್ಧೆಯಾಧಾರಿತ ಆರ್ಥಿಕ ವ್ಯವಸ್ಥೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ, ಇನ್ನೂ ಹೆಚ್ಚಿನ ಜನರ ಬಡತನ, ಕ್ಲೈಬ್ಯಕ್ಕೆ ಕಾರಣವಾಗುತ್ತದಲ್ಲವೆ?

ಈ ರೀತಿಯ ತಳಮಳಗಳು ಹೊಸ ಹೊಸ ಚಿಂತನಾಶಕ್ತಿಗಳಿಗೆ, ಅಧ್ಯಯನ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗಿದೆ. Oikonomia ಎಂಬುದು ಹಳೆಯ ಗ್ರೀಕ್ ಪದ. ಪ್ರತಿಯೊಂದು ಗೃಹವ್ಯವಸ್ಥೆಗೂ ಬೇಕಾದ ಸರಕು-ಸರಂಜಾಮುಗಳನ್ನು ತಯಾರಿಸುವಾಗ ಸಮುದಾಯದ ತಕ್ಷಣದ ಮತ್ತು ದೀರ್ಘಕಾಲದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು ಎನ್ನುವುದನ್ನು ಈ ಪದ ಸೂಚಿಸುತ್ತದೆ. ಹರ್ಮನ್ ಡೇಲಿಯವರ ಪುಸ್ತಕದ ಹೆಸರು – Ecological Eonomics for the common good- Redirecting the conomy toward community, the environment and sustainable future. ಇಂಗ್ಲೆಂಡಿನ ಸಂಗೀತತಜ್ಞ ಮತ್ತು ಚಿಲಿಯ ಪರಿಸರವಾದಿ (ಪಾಲ್ ಎಕಿನ್ಸ್ ಮತ್ತು ಮ್ಯಾಕ್ಸ್ ನೀಫ್) ಸೇರಿಕೊಂಡು ಬರೆದಿರುವ ಪುಸ್ತಕದ ಹೆಸರು The Living Economy- Wealth Beyond Measure and Real Life Economics - Understanding Wealth Creation. ಸ್ವದೇಶಿ ಎಕನಾಮಿಕ್ಸ್ ಎಂಬ ಹೊಸ ಆಸಕ್ತಿ ಹೇಳುವ ಪ್ರಕಾರ ಭಾವನಾತ್ಮಕ ಮೌಲ್ಯಗಳಿಂದ ಮಾಡುವ

ಸ್ಪಂದನಗಳಿಂದ ಆರ್ಥಿಕ-ಸಾಮಾಜಿಕ ಬೆಳವಣಿಗೆಗೆ ತೊಂದರೆಯೇನೂ ಆಗುವುದಿಲ್ಲ. ಬದಲಿಗೆ ಒಳ್ಳೆಯ ಭಾವನೆಗಳು ಮತ್ತು ಒಟ್ಟು ಭಾವನಾತ್ಮಕ ಜಗತ್ತು ಹೆಚ್ಚಿನ ಮತ್ತು ಅರ್ಥಪೂರ್ಣ ಆರ್ಥಿಕ ಪ್ರಗತಿಗೆ ಪೂರಕ ಮತ್ತು ಪ್ರೇರಕ. ಜಾಗತೀಕರಣದ ಒತ್ತಾಯಗಳಿಲ್ಲದೆ ಕೂಡ ಬಹು ಹಿಂದೆಯೇ ಜೆ.ಸಿ. ಕುಮಾರಪ್ಪನವರು ಇದೇ ರೀತಿಯ ಚಿಂತನೆಗಳನ್ನು ಮಂಡಿಸಿದ್ದರ ಬಗ್ಗೆ ರಜನಿಯವರು ಓದುಗರ ಗಮನ ಸೆಳೆಯುತ್ತಾರೆ.

ನಿಜ, ನಮ್ಮದಲ್ಲಿ ಈ ಚಿಂತನೆಗಳನ್ನು, ವಿಚಾರಕ್ರಮಗಳನ್ನು ಯಾವುದೊಂದು ಸರ್ಕಾರವಿರಲಿ, ಪುಟ್ಟ ಪಟ್ಟಣದ ಮುನಿಸಿಪಾಲಿಟಿ ಕೂಡ ಒಪ್ಪಿಲ್ಲ. ಬಿಲ್‌ಗೇಟ್ಸ್ ನಂತವರು ಕೂಡ ಈವತ್ತು Democratic Capitalism ಬಗ್ಗೆ ಮಾತಾಡುತ್ತಾರೆ. ನಮ್ಮವರೇ ಆದ ಅಮಾರ್ತ್ಯಸೇನ್‌ರಂಥವರು ಒಂದು ಹಂತದಲ್ಲಿ ಸ್ಪರ್ಧೆ ಮತ್ತು ಮಾರುಕಟ್ಟೆ ವ್ಯವಸ್ಥೆ ಅನಿವಾರ್ಯ. ಆದರೆ ಈ ಸ್ಪರ್ಧೆ ಮತ್ತು ಮಾರುಕಟ್ಟೆ ವ್ಯವಸ್ಥೆಗೆ ನೈತಿಕ ಆಯಾಮವೇ ಇಲ್ಲದಿದ್ದರೆ ಸ್ಪರ್ಧೆಯೆಂಬುದು ಹುಚ್ಚೆದ್ದ ಆನೆಯ ಸ್ವತ್ವದಂತಾಗುತ್ತದೆಂದು ಹೇಳುತ್ತಾರೆ. ಬಾಂಗ್ಲಾದಲ್ಲಿ ಯೂನಸ್‌ರಂಥವರು, ಗುಜರಾತ್‌ನಲ್ಲಿ ಇಳಾ ಭಟ್‌ರಂಥವರು, ಸಂವಹನ ಕ್ಷೇತ್ರದಲ್ಲಿ ಸ್ಯಾಮ್ ಪಿಟ್ರೋಡಾರಂಥವರು, ತಂತ್ರಜ್ಞಾನ, ವೃತ್ತಿಪರತೆ, ನೈಪುಣ್ಯತೆ, ದಕ್ಷತೆಯಂತಹ ಪರಿಕಲ್ಪನೆಗಳನ್ನು ಒಟ್ಟು ಸಮುದಾಯಕ್ಕೆ ಪ್ರಯೋಜನವಾಗುವಂತೆ ದುಡಿಸಿಕೊಂಡಿದ್ದಾರೆ. ಹಾಗೆ ಪ್ರಯೋಜನವಾಗುತ್ತಲೂ ಬಡವರ-ಹಿಂದುಳಿದವರ ಆಸೆ-ಆಕಾಂಕ್ಷೆಗಳ ಬಗ್ಗೆ ವಿಶೇಷ ಗಮನವನ್ನು ನೀಡುವ ರೀತಿ ನಾಳಿನ ಬಗ್ಗೆ ನಮ್ಮ ಕನಸುಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ಇಂತಹುದೇ ಇನ್ನೂ ಇಷ್ಟು ಉದಾಹರಣೆಗಳಿಂದ-ಚಿಂತನೆಗಳಿಂದ ಪುಸ್ತಕಮುದ್ದಕ್ಕೂ ರಜನಿ ವಿವರಿಸುತ್ತಾರೆ.

ಈ ಪುಸ್ತಕವನ್ನು ಲೇಖಕಿ ತಮ್ಮ ಆಂತರಿಕ ಪಯಣದ, ಹುಡುಕಾಟದ ಒಂದು ಭಾಗವೆಂದು ಬರೆದಿದ್ದಾರೆ. ಇಡೀ ಪುಸ್ತಕ ಪ್ರವಾಸ, ಭೇಟಿ, ಅಧ್ಯಯನ, ಚರ್ಚೆ ಮತ್ತು ನಿರಂತರ ಕಾಳಜಿಯ ಫಲಶ್ರುತಿಯಾಗಿದೆ. ಇಂತಹ ವಿಶಾಲ ಹಿನ್ನೆಲೆಯಿರುವ ಪುಸ್ತಕ ಸುಲಭವಾಗಿ ಸಂಶೋಧನಾತ್ಮಕವಾದ ಗ್ರಂಥವಾಗಿಬಿಡಬಹುದಿತ್ತು. ಹಾಗಾಗದೆ ಸುಲಭ ಓದಿಗೂ ಮತ್ತು ಮರು ಓದುವಿಕೆಗಳಿಗೂ ಪ್ರೇರಕವಾಗಬಲ್ಲಂತೆ ಇರುವುದೇ ಈ ಕೃತಿಯ ಸ್ವರೂಪದ ವಿಶಿಷ್ಟತೆ. ಸದ್ಯಕ್ಕೆ ನಾಲ್ಕು ನೂರ ನಲವತ್ತೇಳು ಪುಟಗಳಿರುವ ಈ ಪುಸ್ತಕದಲ್ಲಿ ಸುಮಾರು ಅರವತ್ತು ಪುಟಗಳಾಗುವಷ್ಟು ಕೃತಿಯ ವೈಚಾರಿಕ ಮೂಲವನ್ನು ವಿವರಿಸುವ ಉಲ್ಲೇಖಗಳಿವೆ, ಟಿಪ್ಪಣಿಗಳಿವೆ.

ಹೆಚ್ಚು ಓದುಗರನ್ನು ತಲುಪುವಂತೆ ಸಂಕ್ಷಿಪ್ತ ಆವೃತ್ತಿಯೊಂದನ್ನು ಹೊರತರಬೇಕೆಂಬ ಹಿತೈಷಿಗಳ ಸೂಚನೆಯನ್ನು ಕುರಿತು ತಾವು ಗಂಭೀರವಾಗಿ ಯೋಚಿಸುತ್ತಿರುವುದಾಗಿ ರಜನಿಯವರು ಹೇಳಿದರು. 'ಬಾಪುಕುಟಿ'ಯಂತೆ ಈ ಕೃತಿ ಕೂಡ ಕನ್ನಡಾನುವಾದಕ್ಕೆ, ಕನ್ನಡ ಓದುಗರ ಗಮನಕ್ಕೆ ಅರ್ಹವಾಗಿದೆ.

D-14, Income Tax Colony
Pedder Road, Mumbai - 400 020
Mobile: 99600 22020
98694 56201

ಸಾಹಿತ್ಯದ ರಾಜಕೀಯ

ಕೆಲವು ಪ್ರಶ್ನೆಗಳು

ಎ.ಎನ್. ಲಕ್ಷ್ಮೀನಾರಾಯಣ



ಇತ್ತೀಚೆಗೆ (ಸೆಪ್ಟೆಂಬರ್,2002), ಮೈಸೂರಿನಲ್ಲಿ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ಸಾಹಿತ್ಯ ಗೋಷ್ಠಿಯೊಂದರಲ್ಲಿ ಮೊಗಳ್ಳಿ ಗಣೇಶ ತಮ್ಮ ಕತೆ 'ಗರ್ಭ'ವನ್ನು ವಾಚಿಸಿದರು. ಅದಕ್ಕೆ ಹಿನ್ನೆಲೆಯಾಗಿ ಮೊಗಳ್ಳಿ ತಾವು ಹುಟ್ಟಿ ಬೆಳೆದುಬಂದ ಪರಿಸರ, ತಮ್ಮ ಜನಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು, ಅವರ ತಲ್ಲಣ-ತುಮುಲಗಳ ಚಿತ್ರವನ್ನು ಸಭಿಕರ ಮುಂದಿಟ್ಟರು. ತಾವು ಉನ್ನತ ವ್ಯಾಸಂಗ ನಡೆಸಿದ ಸಂದರ್ಭ, ವೈಫಲ್ಯ-ಸಾಧನೆಗಳು ಮತ್ತು ಆ ಪ್ರಕ್ರಿಯೆಯಲ್ಲಿ ತಮ್ಮ ದೃಷ್ಟಿಕೋನ, ಸಂವೇದನೆ ಮತ್ತು ಸಾಹಿತ್ಯ ಪರಿಕಲ್ಪನೆಗಳು ರೂಪುಗೊಂಡ ಬಗೆಯನ್ನು ಸವಿಸ್ತಾರವಾಗಿ ವಿವರಿಸಿದರು. ದಲಿತ ಅನುಭವವನ್ನು ಮೈಯಾಗಿಸಿದ, ಸೃಜನಶೀಲತೆ ಮತ್ತು ಸಮಾಜ ವಿಜ್ಞಾನದ ಮುಖೇನ ಬಂದ ಸಾಹಿತ್ಯದ ಬಲದಿಂದ ತಾವು ಕತೆಗಾರರಾಗಿ ರೂಪುಗೊಂಡು ಕನ್ನಡದ ಶಿಷ್ಟ ಸಹೃದಯರ ಮೆಚ್ಚುಗೆ ಪಡೆದುದನ್ನೂ, ಅದೇ ಕಾರಣಕ್ಕಾಗಿ, ತಮ್ಮ ಜನಗಳ ನೋವಿನ ಬದುಕನ್ನು ಸಾಹಿತ್ಯಗೊಳಿಸಿ ಅವರ ಮಾನ-ಮರ್ಯಾದೆಗಳನ್ನು ಬೀದಿಗೆ ತಂದು ಮಾರಿ ಅವರನ್ನು ಅವಮಾನಗೊಳಿಸಿದರೆಂಬ ಆರೋಪಕ್ಕೆ ತುತ್ತಾಗಬೇಕಾದ ವಿಪರ್ಯಾಸವನ್ನೂ ಕೇಳುಗರಲ್ಲಿ ನಿವೇದಿಸಿಕೊಂಡರು.

ಒಂದು ದಲಿತ ಕುಟುಂಬದೊಳಗಿನ ನೋವು, ಪ್ರೀತಿ, ಪರಸ್ಪರರ ಈರ್ಷೆ, ಅನುಮಾನ, ತಪ್ಪು ಗ್ರಹಿಕೆಯಿಂದ ಉದ್ಭವಿಸುವ ನರಳಾಟ, ಘರ್ಷಣೆ ಮತ್ತು

ಸ್ಪಂದನಗಳಿಂದ ಆರ್ಥಿಕ-ಸಾಮಾಜಿಕ ಬೆಳವಣಿಗೆಗೆ ತೊಂದರೆಯೇನೂ ಆಗುವುದಿಲ್ಲ. ಬದಲಿಗೆ ಒಳ್ಳೆಯ ಭಾವನೆಗಳು ಮತ್ತು ಒಟ್ಟು ಭಾವನಾತ್ಮಕ ಜಗತ್ತು ಹೆಚ್ಚಿನ ಮತ್ತು ಅರ್ಥಪೂರ್ಣ ಆರ್ಥಿಕ ಪ್ರಗತಿಗೆ ಪೂರಕ ಮತ್ತು ಪ್ರೇರಕ. ಜಾಗತೀಕರಣದ ಒತ್ತಾಯಗಳಿಲ್ಲದೆ ಕೂಡ ಬಹು ಹಿಂದೆಯೇ ಜೆ.ಸಿ. ಕುಮಾರಪ್ಪನವರು ಇದೇ ರೀತಿಯ ಚಿಂತನೆಗಳನ್ನು ಮಂಡಿಸಿದ್ದರ ಬಗ್ಗೆ ರಜನಿಯವರು ಓದುಗರ ಗಮನ ಸೆಳೆಯುತ್ತಾರೆ.

ನಿಜ. ಸದ್ಯದಲ್ಲಿ ಈ ಚಿಂತನೆಗಳನ್ನು, ವಿಚಾರಕ್ರಮಗಳನ್ನು ಯಾವುದೊಂದು ಸರ್ಕಾರವಿರಲಿ, ಪುಟ್ಟ ಪಟ್ಟಣದ ಮುನಿಸಿಪಾಲಿಟಿ ಕೂಡ ಒಪ್ಪಿಲ್ಲ. ಬಿಲ್‌ಗೇಟ್ಸ್ ನಂತವರು ಕೂಡ ಈವತ್ತು Democratic Capitalism ಬಗ್ಗೆ ಮಾತಾಡುತ್ತಾರೆ. ನಮ್ಮವರೇ ಆದ ಅಮಾರ್ತ್ಯಸೇನ್‌ರಂಥವರು ಒಂದು ಹಂತದಲ್ಲಿ ಸ್ಪರ್ಧೆ ಮತ್ತು ಮಾರುಕಟ್ಟೆ ವ್ಯವಸ್ಥೆ ಅನಿವಾರ್ಯ. ಆದರೆ ಈ ಸ್ಪರ್ಧೆ ಮತ್ತು ಮಾರುಕಟ್ಟೆ ವ್ಯವಸ್ಥೆಗೆ ನೈತಿಕ ಆಯಾಮವೇ ಇಲ್ಲದಿದ್ದರೆ ಸ್ಪರ್ಧೆಯೆಂಬುದು ಹುಚ್ಚೆದ್ದ ಆನೆಯ ನೃತ್ಯದಂತಾಗುತ್ತದೆಂದು ಹೇಳುತ್ತಾರೆ. ಬಾಂಗ್ಲಾದಲ್ಲಿ ಯೂನಸ್‌ರಂಥವರು, ಗುಜರಾತ್‌ನಲ್ಲಿ ಇಳಾ ಭಟ್‌ರಂಥವರು, ಸಂವಹನ ಕ್ಷೇತ್ರದಲ್ಲಿ ಸ್ಯಾಮ್ ಪಿಟ್ರೋಡಾರಂಥವರು, ತಂತ್ರಜ್ಞಾನ, ವ್ಯಕ್ತಿಪರತೆ, ಸ್ವಪ್ರಜ್ಞತೆ, ದಕ್ಷತೆಯಂತಹ ಪರಿಕಲ್ಪನೆಗಳನ್ನು ಒಟ್ಟು ಸಮುದಾಯಕ್ಕೆ ಪ್ರಯೋಜನವಾಗುವಂತೆ ದುಡಿಸಿಕೊಂಡಿದ್ದಾರೆ. ಹಾಗೆ ಪ್ರಯೋಜನವಾಗುತ್ತಲೂ ಬಡವರ-ಹಿಂದುಳಿದವರ ಆಸೆ-ಆಕಾಂಕ್ಷೆಗಳ ಬಗ್ಗೆ ವಿಶೇಷ ಗಮನವನ್ನು ನೀಡುವ ರೀತಿ ನಾಳಿನ ಬಗ್ಗೆ ನಮ್ಮ ಕನಸುಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ಇಂತಹದೇ ಇನ್ನೂ ಇಷ್ಟು ಉದಾಹರಣೆಗಳಿಂದ-ಚಿಂತನೆಗಳಿಂದ ಪುಸ್ತಕದುದ್ದಕ್ಕೂ ರಜನಿ ವಿವರಿಸುತ್ತಾರೆ.

ಈ ಪುಸ್ತಕವನ್ನು ಲೇಖಕಿ ತಮ್ಮ ಆಂತರಿಕ ಪಯಣದ, ಹುಡುಕಾಟದ ಒಂದು ಭಾಗವೆಂದು ಬರೆದಿದ್ದಾರೆ. ಇಡೀ ಪುಸ್ತಕ ಪ್ರವಾಸ, ಭೇಟಿ, ಅಧ್ಯಯನ, ಚರ್ಚೆ ಮತ್ತು ನಿರಂತರ ಕಾಳಜಿಯ ಫಲಶ್ರುತಿಯಾಗಿದೆ. ಇಂತಹ ವಿಶಾಲ ಹಿನ್ನೆಲೆಯಿರುವ ಪುಸ್ತಕ ಸುಲಭವಾಗಿ ಸಂಶೋಧನಾತ್ಮಕವಾದ ಗ್ರಂಥವಾಗಿಬಿಡಬಹುದಿತ್ತು. ಹಾಗಾಗದೆ ಸುಲಭ ಓದಿಗೂ ಮತ್ತು ಮರು ಓದುವಿಕೆಗಳಿಗೂ ಪ್ರೇರಕವಾಗಬಲ್ಲಂತೆ ಇರುವುದೇ ಈ ಕೃತಿಯ ಸ್ವರೂಪದ ವಿಶಿಷ್ಟತೆ. ಸದ್ಯಕ್ಕೆ ನಾಲ್ಕು ನೂರ ನಲವತ್ತೇಳು ಪುಟಗಳಿರುವ ಈ ಪುಸ್ತಕದಲ್ಲಿ ಸುಮಾರು ಅರವತ್ತು ಪುಟಗಳಾಗುವಷ್ಟು ಕೃತಿಯ ವೈಚಾರಿಕ ಮೂಲವನ್ನು ವಿವರಿಸುವ ಉಲ್ಲೇಖಗಳಿವೆ, ಟಿಪ್ಪಣಿಗಳಿವೆ.

ಹೆಚ್ಚು ಓದುಗರನ್ನು ತಲುಪುವಂತೆ ಸಂಕ್ಷಿಪ್ತ ಆವೃತ್ತಿಯೊಂದನ್ನು ಹೊರತರಬೇಕೆಂಬ ಹಿತೈಷಿಗಳ ಸೂಚನೆಯನ್ನು ಕುರಿತು ತಾವು ಗಂಭೀರವಾಗಿ ಯೋಚಿಸುತ್ತಿರುವುದಾಗಿ ರಜನಿಯವರು ಹೇಳಿದರು. 'ಬಾಪುಕುಟಿ'ಯಂತೆ ಈ ಕೃತಿ ಕೂಡ ಕನ್ನಡಾನುವಾದಕ್ಕೆ, ಕನ್ನಡ ಓದುಗರ ಗಮನಕ್ಕೆ ಅರ್ಹವಾಗಿದೆ. ○

D-14, Income Tax Colony
Pedder Road, Mumbai - 400 020
Mobile: 99600 22020
98694 56201

ಸಾಹಿತ್ಯದ ರಾಜಕೀಯ

ಕೆಲವು ಪ್ರಶ್ನೆಗಳು

ಎ.ಎನ್. ಲಕ್ಷ್ಮೀನಾರಾಯಣ



ಇತ್ತೀಚೆಗೆ (ಸೆಪ್ಟೆಂಬರ್,೨೦೦೭), ಮೈಸೂರಿನಲ್ಲಿ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ಸಾಹಿತ್ಯ ಗೋಷ್ಠಿಯೊಂದರಲ್ಲಿ ಮೊಗಳ್ಳಿ ಗಣೇಶ ತಮ್ಮ ಕತೆ 'ಗರ್ಭ'ವನ್ನು ವಾಚಿಸಿದರು. ಅದಕ್ಕೆ ಹಿನ್ನೆಲೆಯಾಗಿ ಮೊಗಳ್ಳಿ ತಾವು ಹುಟ್ಟಿ ಬೆಳೆದುಬಂದ ಪರಿಸರ, ತಮ್ಮ ಜನಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು, ಅವರ ತಲ್ಲಣ-ತುಮುಲಗಳ ಚಿತ್ರವನ್ನು ಸಭಿಕರ ಮುಂದಿಟ್ಟರು. ತಾವು ಉನ್ನತ ವ್ಯಾಸಂಗ ಪಡೆದ ಸಂದರ್ಭ, ವೈಫಲ್ಯ-ಸಾಧನೆಗಳು ಮತ್ತು ಆ ಪ್ರಕ್ರಿಯೆಯಲ್ಲಿ ತಮ್ಮ ದೃಷ್ಟಿಕೋನ, ಸಂವೇದನೆ ಮತ್ತು ಸಾಹಿತ್ಯ ಪರಿಕಲ್ಪನೆಗಳು ರೂಪುಗೊಂಡ ಬಗೆಯನ್ನು ಸವಿಸ್ತಾರವಾಗಿ ವಿವರಿಸಿದರು. ದಲಿತ ಅನುಭವವನ್ನು ಮೈಯಾಗಿಸಿದ, ಸೃಜನಶೀಲತೆ ಮತ್ತು ಸಮಾಜ ವಿಜ್ಞಾನದ ಮುಖೇನ ಬಂದ ಸಾಹಿತ್ಯದ ಬಲದಿಂದ ತಾವು ಕತೆಗಾರರಾಗಿ ರೂಪುಗೊಂಡು ಕನ್ನಡದ ಶಿಷ್ಟ ಸಹೃದಯರ ಮೆಚ್ಚುಗೆ ಪಡೆದುದನ್ನೂ, ಅದೇ ಕಾರಣಕ್ಕಾಗಿ, ತಮ್ಮ ಜನಗಳ ನೋವಿನ ಬದುಕನ್ನು ಸಾಹಿತ್ಯಗೊಳಿಸಿ ಅವರ ಮಾನ-ಮರ್ಯಾದೆಗಳನ್ನು ಬೀದಿಗೆ ತಂದು ಮಾರಿ ಅವರನ್ನು ಅವಮಾನಗೊಳಿಸಿದರೆಂಬ ಆರೋಪಕ್ಕೆ ತುತ್ತಾಗಬೇಕಾದ ವಿಪರ್ಯಾಸವನ್ನೂ ಕೇಳುಗರಲ್ಲಿ ನಿವೇದಿಸಿಕೊಂಡರು.

ಒಂದು ದಲಿತ ಕುಟುಂಬದೊಳಗಿನ ನೋವು, ಪ್ರೀತಿ, ಪರಸ್ಪರರ ಈರ್ಷೆ, ಅನುಮಾನ, ತಪ್ಪು ಗ್ರಹಿಕೆಯಿಂದ ಉದ್ಭವಿಸುವ ನರಳಾಟ, ಘರ್ಷಣೆ ಮತ್ತು

ಆತ್ಮಹತ್ಯೆಯ ಮರಂತಗಳು ನೇರ ನಿರೂಪಣೆಯಲ್ಲಿ 'ಗರ್ಭ' ಕತೆಯಾಗಿ ಮೈದಾಳಿವೆ. ಕತೆಯ ಎಳೆಯನ್ನು ಅಲ್ಲಲ್ಲಿ ಮುರಿಗೊಳಿಸಿ ಗಂಟುಹಾಕುತ್ತಾ ಸಾಗುವ ನಿರೂಪಣೆಯಲ್ಲಿ ಜಗಳದ ಭಾಗ ಕ್ರಮೇಣ ಪ್ರಾಧಾನ್ಯತೆ ಪಡೆದು, ದಲಿತ ಪ್ರಪಂಚದೊಳಗೆ ನಡೆಯುವ ಕೌಟುಂಬಿಕ ಘರ್ಷಣೆ ಸಾಹಿತ್ಯಕವಾಗಿ ವರ್ಣಿಸಿದ ಒಂದು ಕಿರು ಕದನವಾಗಿ ಕೇಳುಗರಿಗೆ ತಲುಪುತ್ತದೆ. ಈ ಸಂದರ್ಭದಲ್ಲಿ ನನಗೆ ಸಹಜವಾಗಿ ತೋಚಿದ ಕೆಲವು ಪ್ರಶ್ನೆಗಳನ್ನು ಕನ್ನಡದ ಓದುಗರೊಂದಿಗೆ ಹಂಚಿಕೊಳ್ಳುವುದು ಈ ಬರೆಹದ ಉದ್ದೇಶ.

'ಗರ್ಭ' ಕತೆಯಲ್ಲಿ ಸವಿವರವಾಗಿ ನಿರೂಪಿತಗೊಳ್ಳುವ ಕದನದ ಭಾಗ ನನಗೆ ಮಹಾಭಾರತದ ಯುದ್ಧಪರ್ವದಲ್ಲಿನ ಕೆಲವು ರೂಕ್ಷ ಭಾಗಗಳನ್ನು ನೆನಪಿಸಿತು. ಆಗ ಅನ್ನಿಸಿದ್ದು, 'ಗರ್ಭ' ಕತೆಯನ್ನು ಸಂಸ್ಕೃತಕ್ಕೆ ಅನುವಾದಿಸಿ ವಾಚನಮಾಡಿದರೆ ಹೇಗಿರುತ್ತದೆ? ಅದು ಮಹಾಭಾರತ, ರಾಮಾಯಣಗಳ ಒಂದು ಭಾಗದಂತೆ ಅನ್ನಿಸಬಹುದಲ್ಲವೆ?

ವ್ಯಾಸ, ವಾಲ್ಮೀಕಿಯರು ಅವರವರ ಕಾಲದಲ್ಲಿ ಪ್ರಚಲಿತವಾಗಿದ್ದ ಯಾರದೋ ಕತೆಗಳನ್ನು ಹೇಳಿದ್ದಾರೆಂದು ನಂಬುವುದಕ್ಕಿಂತ (ಮೊಗಳ್ಳಿಯವರು ಮಾಡಿದಂತೆ) ಅವರವರ ಕುಟುಂಬಗಳಲ್ಲಿನ ಕಲಹ, ತಲ್ಲಣ, ತಿಕ್ಕಾಟಗಳನ್ನೇ ಆಧಾರವಾಗಿಸಿ ಕತೆ ಹೇಳಿದ್ದಾರೆಯೇ ಎಂದು ಕೇಳಿಕೊಳ್ಳುವುದು ಸಾಧ್ಯವೆ?

ರಾಮಾಯಣದ ಪಾತ್ರಗಳಿಗೆ ಆಧಾರವಾಗಿದ್ದಿರಬಹುದಾದ ವ್ಯಕ್ತಿಗಳಿಗೂ ವಾಲ್ಮೀಕಿಗೂ ಇದ್ದಿರಬಹುದಾದ ಕೌಟುಂಬಿಕ ಅಥವಾ ಸಾಮಾಜಿಕ ಸಂಬಂಧದ ಬಗ್ಗೆ ಪ್ರಚಲಿತ ನಂಬಿಕೆಯ ಬೇಡ-ಕ್ರೌಂಚ ಪಕ್ಷಿಯ ಸಂಬಂಧಕ್ಕಿಂತ ಹೆಚ್ಚಿಗೆ ಬೇರೇನಾದರೂ ಇರುವುದು ಸಾಧ್ಯವೆ?

ವಾಲ್ಮೀಕಿ ಮಹರ್ಷಿ ಮೊದಲು ದರೋಡೆಕೋರನಾಗಿದ್ದ. ಅನಂತರ ನಾರದರಿಂದ ಸಂಸ್ಕಾರಕ್ಕೊಳಪಟ್ಟು ರಾಮನ ಕತೆಯನ್ನು ರಚಿಸಿದ ಎಂಬ ಪ್ರತೀತಿಯಿದೆ. ಇದಕ್ಕೂ, ಆಧುನಿಕ ಕಾಲದ ಬೇಡರು ವಾಲ್ಮೀಕಿಯನ್ನು ತಮ್ಮವನೆಂದು ಗುರುತಿಸಿಕೊಳ್ಳುವುದಕ್ಕೂ ಏನಾದರೂ ಆಧಾರ, ಸಂಬಂಧವಿದೆಯೆ?

ಮಕ್ಕಳಿಲ್ಲದ ಮೂವರು ಹೆಂಡಿರ ದೊರೆ ದಶರಥ, ಯಾಗಮಾಡಿ ಸಿಕ್ಕಿದ ಪಾಯಸ ಪ್ರಸಾದದಿಂದ ಮಕ್ಕಳನ್ನು ಪಡೆದದ್ದು, ಕಿರಿಯ ಹೆಂಡತಿಗೆ ಕೊಟ್ಟಿದ್ದ ವಾಗ್ದಾನವನ್ನು ನೆರವೇರಿಸಲು ರಾಮ ಹೆಂಡತಿ ಮತ್ತು ತಮ್ಮನೊಂದಿಗೆ ಅರಣ್ಯವಾಸಿಯಾಗಬೇಕಾಗಿ ಬಂದುದು, ಅರಣ್ಯವಾಸಿಗಳ ಪೈಕಿ ರಾಮ ತನ್ನ ವಿರೋಧಿಗಳಿಂದ ನಾನಾ ಬಗೆಯ ಕೋಟಲೆಗಳಿಗೆ ಸಿಕ್ಕಿ ನರಳಿದ್ದು, ಭಗ್ನಪ್ರಣಯಿಯಾದ ಶೂರ್ಪನಖಿಯ ಕ್ರೋಧಕ್ಕೆ ತುತ್ತಾಗಿದ್ದು, ಅದರ ಫಲವಾಗಿ ಬಲಾಢ್ಯ ಬ್ರಾಹ್ಮಣನಾದ ರಾವಣನ ಪ್ರತೀಕಾರ-ಕುಟಿಲತೆಗೆ ಬಲಿಬಿದ್ದು ಬೇಟೆಯ ಆಟದಲ್ಲಿ ಮೋಸಹೋಗಿ ಹೆಂಡತಿಯನ್ನು ಕಳೆದುಕೊಂಡಿದ್ದು, ಸ್ವಹಿತಾಸಕ್ತಿ ಪ್ರೇರಿತನಾಗಿ ವಾನರ ರಾಜ ವಾಲಿಯನ್ನು ಪ್ರಾಣಿಯನ್ನು ಕೊಲ್ಲುವಂತೆ ಮರೆಯಲ್ಲಿ ನಿಂತು ಕೊಂದದ್ದು, ನಿಷ್ಠ ವಾನರರ ಸಹಾಯದಿಂದ ರಾವಣನೊಡನೆ ಯುದ್ಧಮಾಡಿ ಹೆಂಡತಿಯನ್ನು ಮರಳಿ ಪಡೆಯುವ ಸುದೀರ್ಘ ಕತೆಯಲ್ಲಿ ಅರಣ್ಯವಾಸ, ಬೇಟೆ, ಕಳ್ಳತನ, ಕದನ ಮತ್ತು ಮೋಸಗಳ ಪಾತ್ರ ಗಣನೀಯವಾದುದು.

ಮಕ್ಕಳಿಲ್ಲದ ದೊರೆ ಜನಕನು ಸಾಕಿ ಬೆಳೆಸಿದ ಜಾನಕಿ, ಯಾರೋ ಹೆತ್ತು, ಪೆಟ್ಟಿಗೆಯಲ್ಲಿ ಹೂತಿಟ್ಟ ಶಿಶು. ಅಲ್ಲದೆ ರಾಮನ ಕುಲಗುರುವಾದ ವಸಿಷ್ಠನ ಹುಟ್ಟೇ ಸಂದಿಗ್ಧ. ಆದರ್ಶಸತಿಯೆಂದು ಕರೆಸಿಕೊಳ್ಳುವ ಆತನ ಹೆಂಡತಿ ಅರುಂಧತಿ ಹೊಲತಿಯೆಂದು ಪ್ರತೀತಿ.

ಮಹಾಭಾರತದ ಕರ್ತೃವಾದ ವ್ಯಾಸಮಹರ್ಷಿ ಪರಾಶರನಿಂದ ಯೋಜನಗಂಧಿಯಲ್ಲಿ ಹುಟ್ಟಿದವನೆಂದು ಪ್ರತೀತಿ. ಮಹಾಭಾರತದ ಸುದೀರ್ಘ ಕತೆಯಲ್ಲಿ ತನ್ನ ಹೆತ್ತತಾಯಿ ನೆನೆದಾಗಲೆಲ್ಲಾ ಬಂದು ವಂಶದ ಮುಂದುವರಿಕೆಯ ಸಂಕಷ್ಟವೂ ಸೇರಿದಂತೆ ಅನೇಕ ಸಂಕಷ್ಟಗಳಿಂದ ತನ್ನ ವಂಶಜರನ್ನು ಪಾರುಮಾಡುವ

ವ್ಯಾಸ, ತಾನೇ ಮಹಾಭಾರತದ ಕರ್ತೃವೂ ಆಗಿದ್ದಾನೆನ್ನುವುದು ವಿಶೇಷ. ವ್ಯಾಸನೂ ಸೇರಿದಂತೆ ಮಹಾಭಾರತದ ಪಾತ್ರಗಳಿಗೆ ಆಧಾರವಾಗಿರಬಹುದಾದ ಜನರ ಮೂಲಪುರುಷ ವ್ಯಾಸ, ಮತ್ತು ಮಹಾಭಾರತವನ್ನು ರಚಿಸಿದ ವ್ಯಾಸ ಇಬ್ಬರೂ ಬೇರೆ ಬೇರೆ ಇರಬಹುದೆಂದು ನಂಬಲು ಸಾಧ್ಯವಿದೆ. ಮುತ್ತಾತನು ಮೊಮ್ಮಕ್ಕಳ ಕತೆ ಬರೆಯುವುದಕ್ಕಿಂತ, ಮೊಮ್ಮಗನೋ, ಮರಿಮಗನೋ ತನ್ನ ಪೂರ್ವಿಕರ ಕತೆಯನ್ನು ಬರೆಯುವುದು ಹೆಚ್ಚು ಸಂಭಾವ್ಯ. ವ್ಯಾಸ ಹೆಸರಿನ ಕತೆಗಾರ ತನ್ನ ಪೂರ್ವಿಕನಾಗಿದ್ದ ವ್ಯಾಸಮಹರ್ಷಿಯ ವಂಶಸ್ಥನೋ ಅಥವಾ ಕತೆಯ ನಿರೂಪಣೆಯ ಸೌಲಭ್ಯಕ್ಕಾಗಿ ಮಾಡಿಕೊಂಡ ಪಾತ್ರವೋ ತಿಳಿಯದು.

ಮೇಲಿನ ಎರಡು ಅಂಶಗಳನ್ನು ಗಮನಿಸಿ ನನ್ನಲ್ಲಿ ಏಳುವ ಪ್ರಶ್ನೆಗಳಿವು:

ರಾಮಾಯಣ, ಮಹಾಭಾರತಗಳು ಆ ಕಾಲದ ದಲಿತ ರಚನೆಗಳೇ? ವಾಲ್ಮೀಕಿ ಮತ್ತು ವ್ಯಾಸರು ಅಂದಿನ ಆಶಿಷ್ಟ/ಶಿಷ್ಟಭಾಷೆಯಾದ ಸಂಸ್ಕೃತದಲ್ಲಿ ಕೃತಿ ರಚನೆಮಾಡಿದ 'ಸಂಸ್ಕಾರ'ಗೊಂಡ ದಲಿತರೇ? ತದನಂತರದ ಕಾಲಗಳಲ್ಲಿ ಸಂಸ್ಕೃತಕ್ಕೆ ಸಿಕ್ಕಿದ ರಾಜಕೀಯ ಸ್ಥಾನ-ಮಾನಗಳಿಂದಾಗಿ ಇವು ಮಹಾಕಾವ್ಯಗಳೆನಿಸಿ, ಅವುಗಳ ದಲಿತಹಿನ್ನೆಲೆ ಮರೆತುಹೋಗಿದೆಯೆ? ಅಂದರೆ ಮೇಲ್ಜಾತಿಯ ರಾಜಕೀಯದ ಕೃಪಾ ಪೋಷಣೆಯಿಂದಾಗಿ ಅವು ದಲಿತಕಾವ್ಯಗಳಾಗದೆ, ಅವನ್ನು ರಚಿಸಿದವರನ್ನು ದಲಿತರೆಂದು ನೋಡದೆ, 'ಆರ್ಯಸಂಸ್ಕೃತಿ'ಯ 'ಋಷಿ'ಗಳೆಂದು ನೋಡುವ ಪರಿಪಾಠ ಬೆಳೆದುಬಂದಿದೆಯೆ? ಮೇಲ್ಜಾತಿ ಮತ್ತು ದಲಿತ ಜಾತಿಗಳಿಗಿರುವ ಅಂತರವನ್ನು ಸಾಮಾಜಿಕವಾಗಿ ಕಾಯ್ದುಕೊಂಡು, ಸಾಂಸ್ಕೃತಿಕವಾಗಿ ಏಳುವ ಇಕ್ಕಟ್ಟುಗಳಿಂದ ಪಾರಾಗಲು ಋಷಿಮೂಲವನ್ನು ಕೆದಕಬೇಡ ಎಂಬಂಥ ನಿಷೇಧಗಳು ಜಾರಿಗೆ ಬಂದಿವೆಯೆ?

ವಾಲ್ಮೀಕಿ ಮತ್ತು ವ್ಯಾಸರು ತಮ್ಮ ಕಾವ್ಯಪ್ರತಿಭೆಯನ್ನು ಸಹಜವಾಗೇ ಹೊಂದಿದ್ದಿರಬಹುದೆಂದು ಒಪ್ಪಿಕೊಂಡರೂ, ಅವರ ಕೃತಿಗಳ ಸಂದರ್ಭದಲ್ಲಿ ಪ್ರಕಟಪಡಿಸುವ ಜ್ಞಾನ-ತಿಳುವಳಿಕೆ-ತಾತ್ವಿಕತೆ ಮತ್ತು ಲೋಕಾನುಭವಗಳನ್ನು ಯಾವಾಗ, ಹೇಗೆ ಪಡೆದುಕೊಂಡರು ಎಂಬ ವಿವರ ನಮಗೆ ತಿಳಿಯದು. ಪರಾಶರ ಮಹರ್ಷಿಯ ಮಗನಾದ ವ್ಯಾಸ, ಅಥವಾ ಮಹಾಭಾರತದ ಕರ್ತೃವಾದ ವ್ಯಾಸ ತನ್ನ ತಾಯಿ-ತಂದೆಯಿಂದ, ನಮಗೆ ತಿಳಿಯದ ಗುರುವಿನಿಂದ ಪಡೆದುಕೊಂಡಿರಬಹುದು. ವೃತ್ತಿಯಲ್ಲಿ ದರೋಡೆಕೋರನಾಗಿದ್ದ ವಾಲ್ಮೀಕಿ, ನಾರದರಿಂದ ಸಂಸ್ಕಾರ ಪಡೆದು ಅವರ ಸೂಚನೆಯಂತೆ ರಾಮಾಯಣವನ್ನು ರಚಿಸಿದನೆಂದು ಪ್ರತೀತಿಯಿದೆ. ಹೇಗೇ ಇದ್ದರೂ, ಒಟ್ಟಿನಲ್ಲಿ ಇಲ್ಲಿ ಏಳುವ ಪ್ರಶ್ನೆ, ಹೇಗೋ ಶಿಷ್ಟಸಂಸ್ಕಾರ ಪಡೆದ ಪ್ರತಿಭಾವಂತ ದಲಿತರು ರಚಿಸಿದ ಕೃತಿಗಳು ಆಳುವವರ್ಗದ ಕೃಪಾಪೋಷಣೆಗೆ ಒಳಗಾದಾಗ ಅವು ಬಹುಜನರ ಮನ್ನಣೆ ಪಡೆದ ಮಹಾಕೃತಿಗಳಾಗುತ್ತವೆಯೆ? ಅಥವಾ ಬಹುಜನರ ಮನ್ನಣೆ ಪಡೆದ ದಲಿತರ ಕೃತಿಗಳನ್ನು ಆಳುವವರ್ಗ ತನ್ನ ರಾಜಕೀಯ ಉದ್ದೇಶಗಳ ಈಡೇರಿಕೆಗಾಗಿ ಕೃಪಾಪೋಷಣೆ ಮಾಡುತ್ತದೆಯೆ?

ನಮಗೆ ತಿಳಿದಿರುವಂತೆ ಆಧುನಿಕ ಕಾಲದ ಎಲ್ಲ ದಲಿತ ಕೃತಿಕಾರರೂ ತಮ್ಮ ಕೃತಿಗಳನ್ನು ರಚಿಸಿ ಮನ್ನಣೆಗಳಿಸಿದ್ದು ಶಿಷ್ಟಸಮಾಜದ ಸಂಸ್ಕಾರ ಪಡೆದಮೇಲೆಯೇ. ಈ ಸಂಸ್ಕಾರವನ್ನು ಶಿಷ್ಟವರ್ಗಕ್ಕಲ್ಲದೆ ಆಳುವವರ್ಗ ದಲಿತರಿಗೆ ನಿರ್ದಿಷ್ಟ ಚಾರಿತ್ರಿಕ ಒತ್ತಡ-ಸಂದರ್ಭಗಳ ರಾಜಕೀಯ ಕಾರಣಗಳಿಗಾಗಿ ಕೊಡಮಾಡುವ ವಿದ್ಯಾಭ್ಯಾಸವೆಂದು ಕರೆಯಲಾಗುತ್ತದೆ. ಇದನ್ನು ಪಡೆದು, ತಮ್ಮ ಸೃಜನಾತ್ಮಕ ಅಗತ್ಯಕ್ಕೆ ತಕ್ಕಂತೆ, ಸುಧಾರಿತ ಶಿಷ್ಟಭಾಷೆಯಲ್ಲಿ, ಶಿಷ್ಟರಿಗಾಗಿ ಕೃತಿರಚನೆ ಮಾಡುವ ದಲಿತರು ಆಳುವವರ್ಗದ ಬಗೆಗಿನ ತಮ್ಮ ಪ್ರೀತಿಯಿಂದಲೋ ಅಥವಾ ವರ್ಗವಿರೋಧದ ಪ್ರತೀಕಗಳಾದ ಪಾತ್ರಗಳನ್ನೊಳಗೊಂಡ ಬಂಡಾಯದ ಅಭಿವ್ಯಕ್ತಿಯಾಗೋ ತಮ್ಮ ಸಾಹಿತ್ಯವನ್ನು ರಚಿಸಿರಬಹುದು. ತಮ್ಮ ಪೂರ್ವಜರು, ಅಜ್ಜಿ

ತಾತ ಇತ್ಯಾದಿ ಹಿರಿಯರು ಹುಟ್ಟು ಕತೆಗಾರರೆಂದು, ಕಲಾಕಾರರೆಂದು ಶಿಷ್ಟಸಂಸ್ಕಾರಕ್ಕೊಳಗಾದ ದಲಿತ ಲೇಖಕರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅಂದರೆ ಆ ಹಿರಿಯ ಕಲಾಕಾರರಿಗೆ ಸಿಗದ ದೇಶೀಯ-ಅಂತರ್‌ದೇಶೀಯ ಮನ್ನಣೆ, ಪುರಸ್ಕಾರ, ಸವಲತ್ತುಗಳು ಅವರ ವಂಶಜರಿಗೆ ಸಿಕ್ಕಿದಕ್ಕೆ ಕಾರಣ ಶಿಷ್ಟಸಮಾಜದಿಂದ ಅವರು ಪಡೆದ ಸಂಸ್ಕಾರವೋ, ಆಳುವವರ್ಗದ ಅಧಿಕೃತ ಕೃಪಾಪೋಷಣೆಯೋ ಆಗಿರಬಹುದು ಅಲ್ಲವೆ? ಹಾಗಿದ್ದರೆ, ರಾಮಾಯಣ, ಮಹಾಭಾರತ ಮುಂತಾದ ಮಹಾಕಾವ್ಯಗಳು, ಶಿಷ್ಟಸಂಸ್ಕಾರ ಪಡೆದ, ಶಿಷ್ಟಸಂವೇದನೆಯ ದಲಿತರು, ಶಿಷ್ಟಭಾಷೆಯಲ್ಲಿ ಶಿಷ್ಟರಿಗಾಗಿ ರಚಿಸಿರಬಹುದಾದ ದಲಿತಕೃತಿಗಳೇ ಅಲ್ಲವೆ? ಹಾಗೆಯೇ ನಮ್ಮ ಕಾಲದ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಮೊಗಳ್ಳಿ ಗಣೇಶ ಮುಂತಾದ ದಲಿತ ಲೇಖಕರ ಕೃತಿಗಳೂ ಅಲ್ಲವೆ? ಅಂದಮೇಲೆ ಇವರ ಕೃತಿಗಳಲ್ಲಿ ದಲಿತಸಂವೇದನೆ ಎಂಬುದೇ ಇಲ್ಲ, ಇರುವುದು ಶಿಷ್ಟ ಸಂವೇದನೆಯ ದಲಿತ ಅನುಭವ ಮಾತ್ರ ಎಂಬುದು ನಿಜವಲ್ಲವೆ? ಅದೇನಿದ್ದರೂ ಜಾನಪದೀಯ ಕೃತಿಗಳಲ್ಲಿ ಮಾತ್ರ ಎಂಬ ತೀರ್ಮಾನಕ್ಕೆ ಬರಬಹುದೆ?

ಹೀಗೆ ಕೇಳುವುದರಿಂದ ಏನನ್ನು ಸಾಧಿಸಿದಂತಾಯಿತು? ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಆಳುವವರ್ಗದ ಅಧಿಕೃತ ಸಂಸ್ಥೆಗಳು ಮತ್ತು ಅವುಗಳಿಂದ ಮಾನ್ಯತೆ ಪಡೆದ ಸಾಂಸ್ಕೃತಿಕ ಸಂಸ್ಥೆಗಳು, ಕಲಾಕಾರರು, ಬರಹಗಾರರನ್ನು ತಮ್ಮ ಮನ್ನಣೆಗಾಗಿ ಆಯ್ಕೆಮಾಡಲು ಅನುಸರಿಸುವ ಮಾನದಂಡಗಳು ತಮ್ಮ ವರ್ಗವಿರೋಧಿಗಳನ್ನು, ಮತ್ತು ಅಂಥ ಆಲೋಚನೆಗಳನ್ನು ಅಪ್ಪಿತಪ್ಪಿಯೂ ಮನ್ನಿಸದಂತೆ ರಚಿತವಾಗಿರುತ್ತವೆ. ಇದು ಜಾಗತಿಕ ಬಂಡವಾಳದ ಹಿತದಲ್ಲಿರುವ, ನೊಬೆಲ್ ಪಾರಿತೋಷಕದಿಂದ ಹಿಡಿದು ದೇಶೀಯ ಅಕಾಡೆಮಿ ಪ್ರಶಸ್ತಿ-ಪುರಸ್ಕಾರಗಳ ವಿಷಯದಲ್ಲಿ ಎದ್ದು ಕಾಣುವ ಅಂಶ. ವರ್ಗ ವಿರೋಧಿಗಳಲ್ಲದ, ವರ್ಗತಟಸ್ಥರೆಂದು ಹೇಳಿಕೊಳ್ಳುವವರ ವಿಷಯದಲ್ಲಿ ಇದು ವಿಶೇಷವೆನಿಸುವುದೇ ಇಲ್ಲ. ಆದರೆ ತಾತ್ವಿಕವಾಗಿ ವರ್ಗವಿರೋಧಿಗಳಾಗಿ, ಬಂಡಾಯ ಧೋರಣೆಯನ್ನು ಹೊಂದಿದ ದಲಿತ/ದಲಿತೇತರ ಲೇಖಕರು ಆಳುವ ವರ್ಗದ ಮನ್ನಣೆ ಪಡೆದಾಗ ಸಾಹಿತ್ಯದಲ್ಲಿನ ರಾಜಕೀಯದ ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ಅಂದರೆ, ಆಳುವ ವರ್ಗದ ಮನ್ನಣೆ ಪಡೆವ ಬರಹಗಾರರು, ದಲಿತರು ಅಥವಾ ದಮನಿತರು ಆಗಿದ್ದಾಗಲೂ, ತಮ್ಮ ಕೃತಿಗಳ ತಾತ್ವಿಕತೆ, ಆಶಯಗಳಲ್ಲಿ ಆಳುವ ವರ್ಗದ ಪರವಾಗಿ ಇಲ್ಲದಿದ್ದಾಗಲೂ, ಅವರು ದಲಿತರ ಅಥವಾ ದಮನಿತರ ವರ್ಗಹಿತಾಸಕ್ತಿಯನ್ನು ಬೆಂಬಲಿಸುತ್ತಿರಬಹುದೆಂದೇನೂ ಇಲ್ಲ. ಹೀಗಿದ್ದೂ ಅವರು ದಲಿತ/ದಮನಿತರ ಪರವಾಗಿರುವಂತೆ ತೋರಿದರೂ ಆಳುವ ವರ್ಗದ ಹಿತಾಸಕ್ತಿಯ ದೃಷ್ಟಿಯಿಂದ ಸಮ್ಮತವೆ. ಈ ತೋರಿಕೆಯ ಅಂಶ, ಮನ್ನಣೆ ಕೊಡುವಾಗ ಬಹುಮುಖ್ಯವಾಗುತ್ತದೆ. ದಲಿತ-ದಮನಿತ ಬರಹಗಾರರಲ್ಲಿ ಸತ್ವಶೀಲರಾದವರನ್ನು ಆಳುವವರ್ಗ ಕೇವಲ ತನ್ನ ಅಸ್ತಿತ್ವಕ್ಕಾಗಿ ಮನ್ನಣೆ ಕೊಟ್ಟು ಪೋಷಿಸುತ್ತದೆಯೋ? ಅಥವಾ ಸತ್ವಶೀಲ ದಲಿತ-ದಮನಿತ ಬರಹಗಾರರು ತಮ್ಮ ಕೃತಿಗಳಲ್ಲಿ ಪ್ರತಿನಿಧಿಸುವ ಸಮುದಾಯದ ಪಜ್ಞೆಯನ್ನು ಹಿಗ್ಗಿಸುತ್ತಾ ಅಧಿಕಾರಕೇಂದ್ರದತ್ತ ಮುಖಮಾಡಿದ್ದಾರೋ? ಅಥವಾ ಇವೆರಡೂ ಏಕಕಾಲದಲ್ಲಿ ಘಟಿಸುತ್ತಾ ಗೊಂದಲವೇರ್ಪಡುತ್ತಿದೆಯೋ?

ದಲಿತ ಬರಹಗಾರರಾದ ದೇವನೂರರಾಗಲಿ, ಸಿದ್ದಲಿಂಗಯ್ಯನವರಾಗಲಿ ಅಥವಾ ಮೊಗಳ್ಳಿಯವರಾಗಲಿ ತಮ್ಮ ಶಿಕ್ಷಣ ಮೂಲದ ಪದವಿಗಳಿಂದಲೇ ಈಗಿರುವ ಸಾಹಿತ್ಯಕ ಸ್ಥಾನಮಾನಗಳನ್ನು ಪಡೆಯಲಿಲ್ಲ. ಹಾಗೆಂದು ಅವರ ಪ್ರತಿಭೆ-ದಲಿತಾನುಭವಗಳಿಂದಾಗಿಯೂ ಇವು ಅವರಿಗೆ ದೊರೆತಿಲ್ಲ. ಹಾಗಿದ್ದಿದ್ದರೆ ಈ ಮನ್ನಣೆಗಳೆಲ್ಲಾ ಶೈಕ್ಷಣಿಕ ಪದವಿಗಳಿಲ್ಲದ ಅವರ ಹಿರಿಯರಿಗೇ ದೊರೆಯಬೇಕಾಗಿತ್ತು. ಆದರೆ ಹಾಗಾಗಿಲ್ಲ. ಅಂದರೆ, ಶಿಷ್ಟಸಂವೇದನೆಯ ಈ ದಲಿತ ಲೇಖಕರು, ತಮ್ಮ ಹಿರಿಯರಿಂದ ಪಡೆದ ದಲಿತ-ದಮನಿತರ ನೋವು-ಅವಮಾನ ಕೇಂದ್ರಿತ ಅನುಭವವನ್ನು, ತಮ್ಮ ಕೃತಿಗಳಲ್ಲಿ, ಶಿಷ್ಟಸಂವೇದನೆಯ ಸಹೃದಯರನ್ನು

ಉದ್ದೇಶಿಸಿಯೇ ನಿರೂಪಿಸಿದ್ದಾರೆ. ಶಿಷ್ಟ ಸಹೃದಯರಿಗೆ ಇದು ಸ್ವಾಗತಾರ್ಹ ಸಂಕೇತವಾದಂತೆ, ದಲಿತ-ದಮನಿತ ಹಿರಿಯರ ಪಾಲಿಗೆ 'ತಮ್ಮ ಕುಟುಂಬದ ಮಾನವನ್ನು ಹರಾಜು ಹಾಕುವ' ಅವಮಾನಕರ ಕ್ರಿಯೆಯೆಂದು ತೋರುತ್ತದೆ. ವೈಯಕ್ತಿಕ ಸಂತೋಷ-ಸಂಭ್ರಮಗಳು ಸಾಹಿತ್ಯಕ ಅನುಭವಗಳಾಗಿ ಸಾರ್ವತ್ರಿಕವಾದಾಗ ಈ ಪ್ರಶ್ನೆ ಏಳುವುದಿಲ್ಲ. ಆದರೆ ನೋವು-ಅವಮಾನಗಳ ವಿಷಯದಲ್ಲಿ ಹೀಗಾಗುವುದಿಲ್ಲ. ಯಾವುದು ಅವರ ಹಿರಿಯರಿಗೆ ಅವಮಾನಕರವೋ ಅದು ಈ ಲೇಖಕರಿಗೆ ಪ್ರಶಸ್ತಿ-ಮನ್ನಣೆ ತಂದುಕೊಡುವ ಸೃಜನಶೀಲತೆಯಾಗುತ್ತದೆ. ಹೀಗಾಗಿ ಈ ದಲಿತ ಲೇಖಕರ 'ವರ್ಚಸ್ಸು' ಅವರ ಸಂಸ್ಕಾರ ಪಡೆದ ದಲಿತತನದ ಸೃಜನಶೀಲತೆಯಿಂದಾಗಿ ಬಂದಿದೆ ಅಲ್ಲವೆ? ಸಮುದಾಯದ ಆಶಯಗಳಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಹಿತಾಸಕ್ತಿಗಳನ್ನು ಅಧಿಕೃತಗೊಳಿಸುವ ಜಾಗತೀಕರಣದ ಈ ಸಂದರ್ಭದಲ್ಲಿ ದಲಿತ-ದಮನಿತರ ಹಿನ್ನೆಲೆಯಿಂದ ಬಂದಿರುವ ಮೊಗಳ್ಳಿಯಂಥ ಲೇಖಕರು ತಳೆಯುತ್ತಿರುವ ಧೋರಣೆಗಳ, ಅವರ ರಾಜಕೀಯ ಆಯ್ಕೆಗಳ ವರ್ಗಹಿತಾಸಕ್ತಿ ಯಾವುದು? ತನ್ನ ಸಮುದಾಯ ನನ್ನ ಮೂಲಕ ಮಾತನಾಡುತ್ತದೆ ಎನ್ನುವ ಇವರ ಬರಹಗಳಿಂದ ಕೇವಲ ವೈಯಕ್ತಿಕ ವರ್ಚಸ್ಸು, ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಮೌಲಿಕತೆ ಮೇಲೇರುತ್ತಿದೆಯೋ? ಅಥವಾ ದಲಿತ-ದಮನಿತ ಸಮುದಾಯದ ರಾಜಕೀಯಪ್ರಜ್ಞೆ-ಧೋರಣೆಗಳಲ್ಲಿ ಆಳುವವರ್ಗದ ವಿರುದ್ಧದ ಅರಿವು ವಿಸ್ತರಿಸುತ್ತಿದೆಯೋ? ಎಂಬ ಅಂಶ ಇವಕ್ಕೆ ಉತ್ತರವಾಗಬಲ್ಲದು.

ಒಂದು ಸಾಹಿತ್ಯಕೃತಿಯ ಅಧ್ಯಯನದ ಸಂದರ್ಭದಲ್ಲಿ ಸಾಹಿತ್ಯವೇ ಚರಿತ್ರೆಯಲ್ಲ ಎಂಬ ಎಚ್ಚರ ಅಗತ್ಯ. ಜೊತೆಗೆ, ಸಾಹಿತ್ಯಕೃತಿಯ ಓದಿನಲ್ಲಿ ಸಮಕಾಲೀನ ಚರಿತ್ರೆಯನ್ನು ಅರ್ಥೈಸುವ ಸಾಮಾಜಿಕ ಸಂಬಂಧಗಳು, ಜೀವನಮೌಲ್ಯಗಳು ಮತ್ತು ಮುಖ್ಯವಾಗಿ ರಾಜಕೀಯ ಧೋರಣೆಗಳು ಪರೋಕ್ಷವಾಗಿ ಸಿಗುತ್ತವೆ ಎಂಬ ಪರಿಜ್ಞಾನವೂ ಮುಖ್ಯವೆ. ಶೂದ್ರರಿಗೆ ಸಂನ್ಯಾಸದ ಅಧಿಕಾರವಿಲ್ಲ ಎಂಬ ಆಕ್ಷೇಪವನ್ನು ಸನಾತನಿಗಳಿಂದ ಎದುರಿಸಿದ ಕಾಯಸ್ಥರಾದ ವಿವೇಕಾನಂದರು ವೈದಿಕರದ್ದೆಂದು ಭದ್ರವಾಗಿ ನಂಬಿರುವ ಬ್ರಹ್ಮಜ್ಞಾನ, ವಾಸ್ತವವಾಗಿ ಕ್ಷತ್ರಿಯರಿಂದ ಬ್ರಾಹ್ಮಣರಿಗೆ ಲಭಿಸಿದ್ದೆಂದು ಪ್ರತಿಪಾದಿಸುತ್ತಾರೆ. ಉಪನಿಷತ್ತುಗಳು ಆತ್ಯಂತಿಕ ಅಸ್ತಿತ್ವ ಕುರಿತ ತಮ್ಮ ಅನುಭವವನ್ನು ನೇರವಾಗಿ ಬುದ್ಧನಿಂದ ಪಡೆದಿವೆಯೆಂದು ಅಭಿಪ್ರಾಯಪಡುತ್ತಾರೆ. ಬ್ರಾಹ್ಮಣಧರ್ಮದ ಆಧಾರಸ್ತಂಭಗಳೆಂದು ನಂಬುವ ಋಷಿ-ಮುನಿಗಳ ಮೂಲ ಪೌರಾಣಿಕ-ಪ್ರತೀತಿಗಳ ಆಧಾರದಿಂದಲೇ ಕೆದಕಿದರೆ ಪ್ರಚಲಿತ ಅರ್ಥದ ದಲಿತರು ಎದ್ದುಬರುತ್ತಾರೆ. ಹಾಗಿದ್ದರೆ ಇಂದಿನ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಬ್ರಾಹ್ಮಣ ಜಾತಿಯ ಮೂಲಪುರುಷರು, ಆಧಾರಸ್ತಂಭಗಳು ಯಾರು? ಎಂಬ ಪ್ರಶ್ನೆಯೂ ಎದುರಾಗುತ್ತದೆ. ಈ ದಲಿತ/ಬ್ರಾಹ್ಮಣ ವ್ಯಾಸ-ವಾಲ್ಮೀಕಿಯರು ರಚಿಸಿರುವ ಮಹಾಕೃತಿಗಳನ್ನು ಸನಾತನಿಗಳು ಏಕೆ ಕೀರ್ತಿಸುತ್ತಾರೆ? ಹಿಂದೊಮ್ಮೆ ದಲಿತ-ದಮನಿತರ ನೋವು, ಸಂಕಟಗಳು ಕತೆಗಳಾಗಿ ಹುಟ್ಟಿ ಕೊಂಡಿರಬಹುದಾದ ರಾಮಾಯಣ, ಮಹಾಭಾರತಗಳ ಮೂಲರೂಪಗಳು, ಕಾಲಕಳೆದಂತೆ ಆಳುವ ವರ್ಗಗಳು ಕೀರ್ತಿಸುವ, ಸಮರ್ಥಿಸುವ ಮಹಾಕಾವ್ಯಗಳಾಗಿ ರೂಪುಗೊಂಡು, ಇಂದಿಗೂ ಜನರ ಮನಸ್ಸನ್ನು ಹೇಗೆ ಆಳುತ್ತಿವೆ?


ಈ ಪ್ರಶ್ನೆಗಳನ್ನು ಎತ್ತಿಕೊಂಡು ಮಾಡಬಹುದಾದ ಚರ್ಚೆ ಪ್ರಶಸ್ತಿ ಪುರಸ್ಕೃತ ಸಾಹಿತ್ಯದ ರಾಜಕೀಯವನ್ನೂ, ಆ ಮೂಲಕ ಸಮಕಾಲೀನ ರಾಜಕೀಯದ ವಿದ್ಯಮಾನಗಳನ್ನೂ ಅರ್ಥಮಾಡಿಕೊಳ್ಳಲು ಸಹಾಯಕವಾಗಬಹುದೆಂದು ನಂಬಿದ್ದೇನೆ.

ಎಂ. ೧೨೩೭, ೨ನೇ ಮುಖ್ಯರಸ್ತೆ
ವಿವೇಕಾನಂದ ನಗರ, ಮೈಸೂರು - ೫೭೦ ೦೨೩
ಮೊಬೈಲ್ : ೯೪೪೮೨೯೩೮೨೩


ಗಲ್ಲೆಬಾನಿ

ಕೆಲವು ಟಿಪ್ಪಣಿಗಳು

ಡಾ.ಎ.ರಘುರಾಂ



ಗಲ್ಲೆಬಾನಿ, ಖಂಡಕಾವ್ಯ
ಕವಿ ... ಸಿದ್ದಯ್ಯ
ಪ್ರಕಾಶಕರು ... ಮ್ಮ ... ಕಾಶನ
ಬಿಳಿಗೆರೆ, ತಿಪಟೂರು ತಾ॥
ತುಮಕೂರು - ೫೭೨ ೧೧೪
ಪುಟಗಳು : ೬೦
ಬೆಲೆ : ರೂ. ೪೦.00
ಮುದ್ರಣ : ೨೦೦೯



ಕಾವ್ಯವೊಂದು ಸಮುದಾಯದ ಸೃಷ್ಟಿಯೇ?

ಕವಿ ಸೃಷ್ಟಿಯೇ? ಅದೊಂದು ಶುದ್ಧ ಸಾಹಿತ್ಯವೇ? ಅಥವಾ ಕಾವ್ಯ ನಿರ್ಮಾಣ ಸಾಂಪ್ರದಾಯಿಕವೇ? ಅಸಾಂಪ್ರದಾಯಿಕವೇ? ಹೀಗೆ ಅನೇಕ ಪ್ರಶ್ನೆಗಳು ಕಾವ್ಯವೊಂದರ ಓದಿನ ಸಂದರ್ಭದಲ್ಲಿ ಕಾಡುತ್ತಲೇ ಬಂದಿವೆ. ಇದುವರೆಗೂ ಕಾವ್ಯ ಮೀಮಾಂಸೆಯನ್ನು ಓದಿಕೊಂಡು ಬಂದ ನಾವು ಅಲಂಕಾರ, ರೀತಿ, ರಸ, ಧ್ವನಿ ಎಂದು ಕಾವ್ಯವನ್ನು ನೋಡಿದ್ದೇವೆಯೇ ಹೊರತು ಕಾವ್ಯವೊಂದನ್ನು ಸಮಗ್ರವಾಗಿ ನೋಡುವ ವಿಧಾನವನ್ನು ಮೀಮಾಂಸೆಯಿಂದ ಕಲಿಯಲಿಲ್ಲ. ಇಂದೂ ಕೂಡ ಕಾವ್ಯ ವಿಮರ್ಶೆಗೆ ಮೀಮಾಂಸೆ ಹೇಗೆ ಸಹಕಾರಿಯಾಗಿದೆ ಎಂದು ಪ್ರಶ್ನಿಸಿಕೊಂಡರೆ ಉತ್ತರ ಸ್ಪಷ್ಟವಿಲ್ಲ. ನಾವು ಅಧ್ಯಯನ ಮಾಡಿದ ಕ್ರಮಗಳೂ ಕೂಡ ನಮ್ಮ ಆಲೋಚನೆಗಳನ್ನು ನಿಯಂತ್ರಿಸುತ್ತಿರುತ್ತವೆ. ಕೃತಿಯನ್ನು ಸಮುದಾಯದ ಸಂದರ್ಭದಲ್ಲಿಟ್ಟು ನೋಡಬೇಕೆ? ಸಂಸ್ಕೃತಿಯ ಹಿನ್ನೆಲೆಯಲ್ಲಿಟ್ಟು ನೋಡಬೇಕೆ? ಕವಿಯ ಜೀವನ ವಿವರಗಳ ಹಿನ್ನೆಲೆಯಲ್ಲಿಟ್ಟು ಪರಿಶೀಲಿಸಬೇಕೆ? ಅಥವಾ ತನಗೆ ತಾನೇ ಕಾವ್ಯವೊಂದನ್ನು ಸ್ವತಂತ್ರವಾಗಿ ಹಾಡಿಕೊಳ್ಳಬೇಕೇ? ಇಂಥ ಅನೇಕ ಪ್ರಶ್ನೆಗಳು ಕಾಡುವುದು ಉಂಟು. ಚಾನೆಲ್ ಸಂಸ್ಕೃತಿ ಸಂಗೀತ ಲೋಕದಲ್ಲಿ ತಲ್ಲಣವನ್ನುಂಟು ಮಾಡುತ್ತಿರುವ ಈ ಹೊತ್ತಿನಲ್ಲೂ ಕೂಡ ಕಾವ್ಯವೊಂದನ್ನು ಬಗೆಯುವ ಬಗೆ ಅಥವಾ ಹಾಡಿನ ಮೂಲಕ ಕಟ್ಟಿಕೊಳ್ಳಬೇಕಾದ ಎಷ್ಟೋ ಸಂಗತಿಗಳಿವೆ ಎಂಬುದನ್ನು ಗಂಭೀರವಾಗಿ ಪರಿಶೀಲಿಸುವ ಪ್ರಯತ್ನಗಳೇನೂ ನಡೆದ ಹಾಗೆ ಕಾಣುತ್ತಿಲ್ಲ. ಕಾವ್ಯವೊಂದನ್ನು ಅದರಲ್ಲಿ ಅರ್ಥ

ಸಾಧ್ಯತೆಗಳ ದೃಷ್ಟಿಯಿಂದ ಕಟ್ಟಿಕೊಡುವುದು ಹೇಗೆ ಎಂಬುದನ್ನು ಹೊಸ ಪೀಳಿಗೆಗೆ ಗಂಭೀರವಾಗಿ ಹೇಳಿಕೊಡುವ ಕ್ರಮವನ್ನು ಅಭ್ಯಾಸ ಮಾಡಿಸಬೇಕಿದೆ. ಈ ರೀತಿ ಮಾಡದೇಹೋದರೆ ಕಾವ್ಯಕ್ಕೆ ಮುಗ ತೊಡಗಿಕೊಳ್ಳುವ ಮನಸ್ಸುಗಳನ್ನೇ ಕಳೆದುಕೊಳ್ಳಬೇಕಾಗುತ್ತದೆ. 'ಗಲ್ಲೆಬಾನಿ' ಕೃತಿಯನ್ನು ಹೇಗೆ ನೋಡಬೇಕು ಎಂಬ ಪ್ರಶ್ನೆ ಎದುರಾದುದರಿಂದ ನಮ್ಮ ಇದುವರೆಗಿನ ಓದಿನ ಕ್ರಮದ ಮೂಲಕ ನೋಡಲಾಗುವುದಿಲ್ಲವೆ ಎಂಬ ಪ್ರಶ್ನೆಯೂ ಸಹಜವಾಗಿ ಮೂಡಿತು. ನಾನು ಓದುವ ಸಂದರ್ಭದಲ್ಲಿ ನನಗನ್ನಿಸಿದ ಕೆಲ ಸಂಗತಿಗಳನ್ನು ಇಲ್ಲಿ ಟಿಪ್ಪಣಿ ಮಾಡಿದ್ದೇನೆ. ಕೃತಿಗೆ 'ಕೈಯಿಕ್ಕುವ ಮುನ್ನ' ಎಂಬ ಭಾಗದಲ್ಲಿ ಡಾ.ನಟರಾಜ ಎಸ್. ಬೂದಾಳು ಅವರು 'ನಿಶ್ಚಯಿಸಿಕೊಳ್ಳಬೇಕಾದ ಸಂಗತಿಗಳಿವೆ' ಎಂಬ ಭಾಗದಲ್ಲಿ ಹೀಗೆ ಹೇಳಿದ್ದಾರೆ.

೧. 'ಅನುಭವ ಪ್ರಮಾಣ'ವನ್ನು ಮುಂದಿಟ್ಟುಕೊಂಡು ಕಾವ್ಯ ಕಲಿಗಳನ್ನು ಎದುರಾಗುವ ನಮ್ಮನ್ನು ಅದು 'ಅಪ್ರಮಾಣವನ್ನು ಎದುರಾಗಲು ಪ್ರಮಾಣವೆ?' ಎಂದು ಕೇಳುತ್ತದೆ.

೨. ಧ್ವನಿ-ರೂಪಕ-ಪ್ರತಿಮೆಗಳ ಹತಾರುಗಳನ್ನು ಇನ್ನೊಮ್ಮೆ ಮಸೆದು ಪ್ರಯೋಗಿಸಲು ಅಣಿಯಾಗುತ್ತಿರುವ ಓದುಗನನ್ನು 'ಬೇಡ, ಬೇಡ ಹತಾರುಗಳನ್ನು ನೆಲಕ್ಕಿಟ್ಟು ನಂತನಂತೆ ಬರುವೆಯಾದರೆ ಬಾ' ಎನ್ನುತ್ತದೆ.

೩. ತಾನೆಂಬ ಓದುಗ-ಇದಿರೆಂಬ ಕಾವ್ಯದ ಭಿನ್ನದೊಡನೆ ನಿಂತವಗೆ; ಅದು ಭಂಗ, ಅದು ಭಿನ್ನ ಇದು 'ಭಿನ್ನವಳಿದ ಬೆಳಗಿನೊಳಗಿನ ಬೆಳಗು' ಎನ್ನುತ್ತದೆ.

೪. ಎಲ್ಲಿ ಕಾವ್ಯದ ಮೂಲವೊಂದುಂಟು, ನನ್ನನ್ನು ಅಲ್ಲಿಗೆ ತಲುಪಿಸಬಲ್ಲೆಯಾ? ಎಂದು ಕೇಳಿದರೆ; ಇಲ್ಲಿ ಇಲ್ಲಿ ಮೂಲವೆಂಬುದೂ ಇಲ್ಲ ತುದಿಯೆಂಬುದೂ ಇಲ್ಲ, ಇರುವುದೆಲ್ಲವೂ 'ನಡು ರಂಗವೇ', ನಾನು ಪರಿಣಮಿಸುವುದು ನಿನ್ನಲ್ಲಿಯೇ ಹೊರತು ಕವಿಯಲ್ಲಿ ಅಲ್ಲ ಎನ್ನುತ್ತದೆ.

ಈ ಟಿಪ್ಪಣಿಗಳು 'ಗಲ್ಲೆಬಾನಿ' ಕೃತಿ ಪರಿಶೀಲನೆಗಿರಬಹುದಾದ ತಾತ್ವಿಕ ಸಾಧ್ಯತೆಗಳ ಕಡೆಗೆ ಓದುಗನು ಪ್ರವೇಶಿಸಬೇಕಾದ ಮಾರ್ಗಗಳನ್ನು ಸೂಚಿಸುತ್ತಿವೆ. ಈ ವಿಚಾರಗಳನ್ನು ಓದುಗ ಪರಿಶೀಲಿಸುವಂತೆ ಹೇಳಲಾಗುತ್ತಿದೆಯಾದರೂ ಸಾಮಾನ್ಯ ಓದುಗನೋರ್ವನಿಗೆ ಕಾವ್ಯದ ಓದಿನ ಸಂದರ್ಭದಲ್ಲಿ ಇಷ್ಟೆಲ್ಲ ವಿಚಾರಗಳಿವೆಯಲ್ಲ ಇದನ್ನು ಗ್ರಹಿಸುವುದಾದರೂ ಹೇಗೆ ಎಂಬ ಪ್ರಶ್ನೆಗಳೂ ಕಾಡದಿರವು. ಇದುವರೆವಿಗೂ ಬೇರೊಂದು ದೃಷ್ಟಿಕೋನದಿಂದ ಓದಿಕೊಂಡು ಬಂದ ಓದುಗ ಏಕಾಏಕಿ ಇಂಥೆಲ್ಲ ವಿಚಾರಗಳಿಗೆ ತೆರೆದುಕೊಳ್ಳುವುದಾದರೂ ಹೇಗೆ ಎಂಬುದೂ ಕೂಡ ಮುಖ್ಯವಾಗುತ್ತದೆ. ಗಂಭೀರತೆಯನ್ನು ಬಯಸುವ ಕಾವ್ಯವನ್ನು ಕಟ್ಟಿಕೊಂಡು ತನಗೇನಾಗಬೇಕು ಎಂದು ತಿರಸ್ಕರಿಸುವ ಸ್ವಾತಂತ್ರ್ಯವೂ ಅವನಿಗಿರುವುದರಿಂದ ಕಾವ್ಯವೆಂದರೆ ದಿಗಿಲುಬಿದ್ದು ತಿರಸ್ಕರಿಸಲೂಬಹುದು. ಅವನ ಓದಿನ ಮಿತಿಯೇ ಕಾವ್ಯ ಅನಾದರಕ್ಕೂ ಕಾರಣವಾಗಬಹುದು. ಕಾವ್ಯವನ್ನು ಓದುವ ಗಂಭೀರ ಕ್ರಮವನ್ನೇ ಹೇಳಿಕೊಡುತ್ತಿಲ್ಲವಾದ ಕಾರಣ ಕಾವ್ಯದ ಬಗೆಗಿನ ತಿರಸ್ಕಾರ ಸಹಜವೂ ಆಗಿಬಿಡುತ್ತದೆ. ಕಾವ್ಯವನ್ನು ಚರ್ಚಿಸುವ ವಿಧಾನಗಳನ್ನು ಹೇಳಿಕೊಡದಿರುವ ಕೊರತೆಯೂ ನಮ್ಮ ನಡುವೆ ಇರುವುದನ್ನೂ ಕೂಡ ಗಂಭೀರವಾಗಿಯೇ ಪರಿಗಣಿಸಬೇಕಾಗುತ್ತದೆ.

೧. 'ಗಲ್ಲೆಬಾನಿ' ಸಿದ್ಧ ಮಾದರಿಯ ಓದನ್ನು ನಿರಾಕರಿಸುತ್ತಿದೆ.

೨. 'ಖಂಡಕಾವ್ಯ'ವೆಂಬ ಪ್ರಕಾರದ ಸಿದ್ಧ ಚೌಕಟ್ಟನ್ನು ಮೀರಲು ಪ್ರಯತ್ನಿಸಿದೆ.

೩. ಕ್ರಿಯೆ ಮತ್ತು ಕಥನ. (ಕಾವ್ಯ ಭಾಷೆ, ಕಾವ್ಯ ಓದು ಇವುಗಳ ಬಗೆಗಿನ ಅನುಸಂಧಾನ.)

೪. 'ಸಮಾಜೋ ಅಧ್ಯಾತ್ಮ ಪ್ರಜ್ಞಾವಸ್ಥೆ' ಯ ನಿರ್ವಚನ.

'ಗಲ್ಲೆಬಾನಿ' ಸಿದ್ಧ ಮಾದರಿಯ ಓದನ್ನು ನಿರಾಕರಿಸುತ್ತದೆ. ಈ ಕೃತಿಯ ಯಾವ ಭಾಗವನ್ನಾದರೂ, ಯಾವ

ಪುಟವನ್ನಾದರೂ ಅನುಕ್ರಮತೆಯಿಲ್ಲದೆ ಓದಬಹುದು. ಹೀಗೆ ಓದಿದಾಗ 'ಓದಿನ ವಿಘ್ನ'ವನ್ನು ಎದುರಿಸಿದೆ ಎಂಬ ಭಾವನೆ ಬರುವುದಿಲ್ಲ. ಒಂದೊಂದು ಪುಟವನ್ನು ಸ್ವತಂತ್ರವಾಗಿ ಓದಿಕೊಂಡು ಅನುಭವಿಸಬಹುದು. ಇದುವರೆಗೆ ನಂಬಿಕೊಂಡಿದ್ದ ಬಂಧ ಕಾವ್ಯಕ್ಕೊಂದು ವಸ್ತು ಇರುತ್ತದೆ, ಅದಕ್ಕೊಂದು ಕಥನ ಕ್ರಮವಿರುತ್ತದೆ ಎಂಬುದನ್ನು ಈ ಕಾವ್ಯ ಆಚೆಗಿಟ್ಟಿದೆ. (ಕೆ.ಬಿ.ಸಿದ್ದಯ್ಯನವರೇ ಈ ಕಾವ್ಯದ ಕೆಲವು ಬೇರೆ ಬೇರೆ ಭಾಗಗಳನ್ನು ಓದುಗರೆದುರಿಗೆ ಓದಿದಾಗ ಕೇಳಿಸಿಕೊಂಡ ಭಾಗಗಳೇ ಕವಿ ಹೇಳುತ್ತಿರುವ ವಿಚಾರಗಳನ್ನು ಧ್ಯಾನಿಸಲು ಸಾಧ್ಯವಾಗಿದ್ದುದನ್ನು ಗಮನಿಸುತ್ತ) ಸಿದ್ಧ ಮಾದರಿಯ ಓದು ಸಿದ್ಧ ಪ್ರಕಾರಗಳನ್ನು ಇಟ್ಟುಕೊಂಡೇ ಪ್ರವೇಶಿಸುತ್ತಿರುತ್ತದೆ. ಆ ರೀತಿಯ ಪ್ರವೇಶವನ್ನು ಈ ಕಾವ್ಯ ನಿರಾಕರಿಸುತ್ತಿದೆ. ಸಿದ್ಧ ಪ್ರಕಾರಗಳು ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ ಎಂಬ ಎರಡು ಮಾದರಿಗಳಲ್ಲಿವೆ. ಸಿದ್ಧಮಾದರಿಗಳನ್ನು ಬಿಟ್ಟು ಮುಕ್ತ ಸ್ಥಿತಿಯಿಂದ ಪ್ರವೇಶಿಸಬೇಕು ಎಂಬ ಸಂಗತಿಯೇನು ಹೊಸದಲ್ಲ. ಈಗಾಗಲೇ ಈ ವಿಚಾರವಾಗಿ ಕುವೆಂಪು ತುಂಬ ಗಂಭೀರವಾಗಿ ಹೇಳಿದುದನ್ನು ಇಲ್ಲಿ ಸ್ಮರಿಸಬಹುದು.

'ಕೊಲ್ಲು ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೆ ಬಿಟ್ಟು ಬಾ;
ಬಿಂಕಮುಕುಟಿಯನು ಕೊಂಕು ಭ್ರುಕುಟಿಯನು
ಅಲ್ಲಿ ಬಿಟ್ಟು ಬಾ;
ಮಂತ್ರ ತೊಳೆದು ಬಾ, ಕಣ್ಣು ಮುಗಿದು ಬಾ,
ಹಮ್ಮುಳಿದು ಬಾ;'

ಪಾಶ್ಚಾತ್ಯ ಚಿಂತಕ ಜಾನ್ಸನ್ ಹಿಂದೆ ಪ್ರಚಲಿತವಿದ್ದ ಎರಡು ವಿಮರ್ಶಾ ಮಾದರಿಗಳಲ್ಲಿ 'ಸಪ್ರಮಾಣ' (Inductive) ವಿಮರ್ಶೆಗೆ ಮಾನ್ಯತೆ ಕೊಡುತ್ತಾನೆ. ಇನ್ನೊಂದು ವಿಮರ್ಶೆ ನಿರ್ಣಾಯಕ ವಿಮರ್ಶೆ(Judicial). ಸಪ್ರಮಾಣ ವಿಮರ್ಶೆ ' ಕೃತಿಯ ಅವಲೋಕನಕ್ಕೆ ಪೂರ್ವಭಾವಿಯಾಗಿ ಕೆಲವು ನಿಯಮಗಳಿವೆ ಎಂಬುದನ್ನು ಒಪ್ಪುವುದಿಲ್ಲ. ಕೃತಿಯನ್ನು ನೇರವಾಗಿ ವಿಜ್ಞಾನಿ ಪ್ರಕೃತಿಯನ್ನು ಹೇಗೋ ಹಾಗೆ ಅವಲೋಕಿಸಿ ಯಾವ ನಿಯಮಗಳಿಗೆ ಅನುಸಾರವಾಗಿ ಆ ಕೃತಿ ಕಲಾವಿದನ ಪ್ರತಿಭೆಯಿಂದ ರಚಿತವಾಗಿರುವುದೋ ಆ ನಿಯಮಗಳನ್ನು ಕಂಡುಕೊಳ್ಳುತ್ತಾನೆ.'(ವಿಮರ್ಶೆಯ ಪೂರ್ವ ಪಶ್ಚಿಮ ಡಾ.ಜಿ.ಎಸ್.ಶಿವರುದ್ರಪ್ಪ,೧೯೬೯, ಪುಟ.೨೫) ಸಿದ್ಧ ಪ್ರಕಾರಗಳ ಕುರಿತ ಆಕ್ಷೇಪ ಇಂದಿನದೇನೂ ಅಲ್ಲ. 'ಕುಸುಮ ಬಾಲೆ' ಸಂದರ್ಭ ದಲ್ಲಿಯೂ ಪ್ರವೇಶಿಕೆಯ ವಿಧಾನ ಹಳೆಯದಿರಬೇಕೇ ಅಥವಾ ಯಾವುದಾದರೂ ನವೀನ ಮಾರ್ಗವನ್ನು ಅನುಸರಿಸಬೇಕೆ ಎಂಬ ಚರ್ಚೆಗಳು ನಡೆದುದನ್ನು ಸ್ಮರಿಸಬಹುದು. ಎಲ್ಲವೂ ನಿಯಮಗಳಿಂದಲೇ ರೂಪಿತವಾಗಿರುತ್ತವೆ ಎಂದು ಪ್ರವೇಶಿಸುವ ಕ್ರಮವೇ ಸಿದ್ಧಮಾದರಿಯ ಓದನ್ನು ಸೂಚಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಡಾ.ನಟರಾಜು ಅವರ ಮಾತುಗಳು ಹೊಸ ಮೀಮಾಂಸೆಯ ಸಾಧ್ಯತೆಯನ್ನಿಟ್ಟು ಪರಿಶೀಲಿಸಬಾರದೇಕೆ ಎಂಬ ಜರೂರನ್ನು ಕೂಡ ನಮ್ಮ ಮುಂದಿಡುತ್ತಿವೆ. ದೇಸಿ ಕವಿತೆಗಳ ಒಳಗಿನ ಸಂದರ್ಭಗಳನ್ನು ಸ್ಪಷ್ಟವಾಗಿ ವಿವೇಚಿಸಲು ಭಾರತೀಯ ಕಾವ್ಯ ಮೀಮಾಂಸೆಗೆ ಸಾಧ್ಯವಾಗಿಯೇ ಇಲ್ಲ. ದೇಸಿ ಮೀಮಾಂಸೆಯ ಪ್ರಯತ್ನಗಳು ಇನ್ನಾದರೂ ಹೆಚ್ಚಬೇಕು. 'ಪ್ರಕ್ರಿಯಾ ಮೀಮಾಂಸೆ'ಯ ಬಗ್ಗೆ ಅಕೃತ ವಿಚಾರಗಳನ್ನು ಮಂಡಿಸುತ್ತಿರುವ ನಟರಾಜು ಅವರು ಹೇಳುವ ಸಂಗತಿಗಳ ಮೂಲಕ ಕೃತಿ ರೂಪಿಸುತ್ತಿರಬಹುದಾದ ಹೊಸ ಸಾಧ್ಯತೆಗಳನ್ನು ಹೀಗೆ ಪರಿಶೀಲಿಸಬಹುದು.

'ಗಲ್ಲೆಬಾನಿ ನನ್ನ ನಲ್ಲೆ
ಗಲ್ಲೆಬಾನಿ ನನ್ನ ನಲ್ಲ
ಗಲ್ಲೆಬಾನಿ ಲಿಂಗಾತೀತ
ಶಿವ.. ಶಿವ.. ಶಿವ.. '

ಮೇಲಿನ ಸಾಲುಗಳಲ್ಲಿ 'ಗಲ್ಲೆಬಾನಿ' ವಸ್ತುವೊಂದು ಇವರ ಬದುಕಿನ ಸಕಲವೂ ಆಗಿರುವುದರಿಂದ ಅದು ನಲ್ಲೆ ನಲ್ಲ ಲಿಂಗಾತೀತವಾಗುವ ಪರಿ ಅನನ್ಯ. ಶೋಷಣೆಗೆ ಒಳಗಾದ ಸಮುದಾಯ ತಮ್ಮ ಬದುಕಿನ ದೈವವಾದ ಬಗೆಯನ್ನು ದೈವಿಕ ನೆಲೆಯಲ್ಲಿ ನೋಡುವಕ್ರಮ ಇದಾಗಿದೆ. ದೈವ ಎನ್ನುವುದು ಇಲ್ಲಿ ಸಂಜಿಕೆಯಾಗದೆ ಇಡೀ ಸಾಮಾಜಿಕ ಚಲನೆಯ ಸಂದರ್ಭದಲ್ಲಿ ಎಲ್ಲಕ್ಕಿಂತ ಅತೀತವೂ, ಶ್ರೇಷ್ಠವೂ ಆಗುವ ನೆಲೆ ಸಮುದಾಯದ ಶ್ರೇಣೀಕೃತ ಜಾತಿವ್ಯವಸ್ಥೆಯ ಸಂದರ್ಭದಲ್ಲಿ ಗಮನಾರ್ಹ ಅಂಶವಾಗಿದೆ. ಸಮುದಾಯದ ಕೆಲ ಘಟಕಗಳು ಅದು ದೈವ, ಇದು ದೈವ ಎಂದು ಭಾವಿಸುವ, ನಂಬಿಸುವ ಸಂದರ್ಭದಲ್ಲಿ ಚಮ್ಮಾರರು ಹಗಲೂ ಇರುಳೂ ತಮ್ಮ ತಮ್ಮ ಕಾಯಕಕ್ಕೆ ಇರಿಸಿಕೊಂಡ 'ಗಲ್ಲೆಬಾನಿ' ಶ್ರೇಷ್ಠ ಪೂಜ್ಯ ಎಂದು ಕವಿ ಹೇಳುವುದು ಗಂಭೀರ ಸಂಗತಿಯಾಗಿದೆ. ಬಸವಣ್ಣ ತನ್ನ ವಚನವೊಂದರಲ್ಲಿ ಮಡಕೆ ದೈವ, ಮರ ದೈವ, ಕಲ್ಲು ದೈವ ... ಎಂದು ಅವರವರಿಗೆ ಅನ್ನ ನೀಡುವ ಸಕಲವೂ ದೈವ ಎಂಬ ನೆಲೆಯನ್ನು ಪ್ರತಿಪಾದಿಸಿದ ಹಾಗೆ ಇಲ್ಲೂ ಒಂದು ಸಿದ್ಧಾಂತ ಮಂಡನೆಗೆ ಕವಿ ಪ್ರಯತ್ನಿಸುತ್ತಿದ್ದಾರೆ ಎನ್ನಿಸುತ್ತದೆ.

'ಇದ್ದಕ್ಕಿದ್ದಂತೆ
ಯಾವ ದಿಕ್ಕಿನಿಂದಲೋ ಕಾಣೆ
ಶರೀರವಾಣಿಯೊಂದು ಕೇಳಿಸಿತು
'ಬನ್ರೀ ಬನ್ರೀ ಕೇಬಿ ಬನ್ರೀ
ಲಂಕೇಶ್, ತೇಜಸ್ವಿ, ಎಮ್.ಡಿ.ಎನ್.
ಬೇಕೇನೂ ಇಲ್ಲೆ ಇದ್ದಾರೆ ಬನ್ರೀ
ದೇವನೂರನ್ನು ಕರ್‍ಕೊಂಡು ಬನ್ರೀ
ಅಲ್ಲೇನಿದೆ ಸುಮ್ನೆ ಇಲ್ಗೆ ಬನ್ರೀ
ಬಂದ ಮೇಲೆ ಇದು ನನಗೆ
ಗೊತ್ತಾಯ್ತು ಕಣ್ರೀ
ಕೀರಂ ಅಂತು ಬಂದೆ ಬರ್‍ತಾರೆ
ನಿಮ್ಮ ಗುರು ಅನಂತಮೂರ್ತಿ
ಮಾತ್ರ ಬಿಟ್ಟು ಬರಬ್ಯಾಡ್ರಿ
ರವಿವರ್ಮನ್ನ ಅಲ್ಲೆ ಬಿಡ್ರಿ
ಸಾಮಾಜಿಕ ನ್ಯಾಯಕೊಡ್ಲಿ
ಮಂತ್ರಿ ಸಿದ್ದರಾಮಯ್ಯ ಕೆಟ್ಟೋದನಲ್ರಿ
ಎಂಬಂಥ ಹಾಗೆ
ಅಧ್ಯಕ್ಷೀತವಿದಂದ
ಕೆ.ರಾಮದಾಸ್ ಕಳಿಸಿದ
ಕರೆಯೋಲೆ
ಪ್ರಾಣಪಕ್ಷಿಯಾಗಿ ಹಾರಿಬಂತು..
'ಈ ಪ್ರಾಣ ಹಾಣ ಹಾಣಂಥೋ...

ಕಾವ್ಯವೊಂದರಲ್ಲಿ ಕವಿ ಹೀಗೆ ನೇರ ಪ್ರವೇಶ ಮಾಡುವ ಕ್ರಮ ಸರಿಯಾದುದೇ? ಇರುವ ಹಾಗೂ ಇಲ್ಲದೇ ಇರುವವರ ಜೊತೆ ಮಾತನಾಡುವ ಬಗೆ ಹೇಗೆ? 'ಶರೀರವಾಣಿ' ಎಂಬ ಪದ ಬಳಕೆಯ ಕ್ರಮ ಎಷ್ಟು ಸರಿ ಎಂಬ ಪ್ರಶ್ನೆ ಸ್ಪಷ್ಟವಾಗಿ ಸಿದ್ಧ ಮಾದರಿಯ ಓದಿನ ಕ್ರಮವನ್ನೇ ಸೂಚಿಸುತ್ತಿರುತ್ತದೆ. ಇದುವರೆವಿಗೂ ಬಳಕೆಯಲ್ಲಿದ್ದ 'ಅಶರೀರವಾಣಿ' ಶಬ್ದವನ್ನು ಬಿಟ್ಟು 'ಶರೀರವಾಣಿ' ಎಂಬ ಪದ ಪ್ರಯೋಗ ಸಾಂಪ್ರದಾಯಿಕ ಕ್ರಮವನ್ನು ಮೀರುವ ಸೂಚನೆಯನ್ನೇ ಕಾವ್ಯ ಇರಿಸಿಕೊಂಡಿದೆ.

‘ಲೋಕ ಒಂದರಿಂದ ಉಂಟಾದುದಲ್ಲ, ಅನೇಕಗಳಿಂದ ಅನೇಕಗಳಾಗುತ್ತಾ ಹೋಗುತ್ತಿರುತ್ತದೆ’ ಎಂಬ ಪ್ರಕ್ರಿಯಾ ಮೀಮಾಂಸೆಯ ದೃಷ್ಟಿಯಿಂದ ಕಾವ್ಯವನ್ನು ಪರಿಶೀಲಿಸಿದರೆ ಕಾವ್ಯದ ಹೊಸ ಹೊಳಹುಗಳು ಗೋಚರಿಸುತ್ತವೆ. ಕಾವ್ಯದಲ್ಲಿ ಬರುವ ವಿಸರ್ಜನ ಕ್ರಿಯೆ ಇದನ್ನೇ ಹೇಳುತ್ತಿದೆ. ವಿಸರ್ಜನೆ ಎಷ್ಟು ಸುಲಭವಲ್ಲವೋ ಆಹ್ವಾನವೂ ಅಷ್ಟು ಸುಲಭವಲ್ಲ ಎಂಬುದನ್ನು ಕಾವ್ಯ ತನ್ನ ಒಡಲಲ್ಲೇ ಇರಿಸಿಕೊಂಡಿದೆ. ಕವಿ ‘ಕಾಯವನ್ನು ಕಾಯಕದಿಂದ ವಿಸರ್ಜಿಸಿದೆ ಮಲಮೂತ್ರ ವಿಸರ್ಜಿಸಿದಂತೆ’ ಎಂದು ಹೇಳಿದ ಮೇಲೂ ತಕ್ಷಣ ‘ಇಲ್ಲ ಇಲ್ಲ ಇಲ್ಲ.’ ಎಂದು ಹೇಳುವ ಕ್ರಮ ಇಲ್ಲಿನ ಕ್ರಿಯೆ ಎಷ್ಟು ಜಟಿಲವಾದುದು ಎಂಬುದನ್ನೇ ಸೂಚಿಸುತ್ತಿದೆ. ಒಂದನ್ನು ಕಡಿದುಕೊಂಡ ತಕ್ಷಣ ಇನ್ನೊಂದು ಪ್ರಾರಂಭವಾಯಿತು, ಹಿಂದಿನದು ಸಂಪೂರ್ಣ ಬಿಟ್ಟುಹೋಯಿತು ಎಂಬ ನಿಲುವೇ ನಮ್ಮನ್ನು ದಿಕ್ಕುತಪ್ಪಿಸುತ್ತಿರುತ್ತದೆ. ಕಾವ್ಯದ ಅಂತರಂಗದ ಚಲನೆಯೇ ಇದಾಗಿದೆ. ಇದುವರೆಗೂ ನಾವು ಕಾಣುತ್ತ ಬಂದಿದ್ದ ಒಂದನ್ನು ಕಡಿದು ಮತ್ತೊಂದು ಪ್ರಾರಂಭವಾಗುತ್ತದೆ ಎಂಬ ನಿಲುವು ಇಲ್ಲಿ ಪ್ರಶ್ನಾರ್ಹವಾಗುತ್ತದೆ, ಹಾಗೆ ಇರುವುದಿಲ್ಲ ಎಂಬುದನ್ನು ಕಾವ್ಯ ಸ್ಪಷ್ಟಪಡಿಸುತ್ತಿದೆ.

ಈ ಕಾವ್ಯ ಪ್ರಧಾನವಾಗಿ ಸಂದರ್ಭವಾದಿ. ಸ್ಟಡಿ ಆಫ್ ಸೋಷಿಯಲ್ ಡೈನಮಿಕ್ಸ್ ವಸ್ತುವೊಂದು ನಿರಂತರವಾಗಿ ಪ್ರಸ್ತುತಗೊಳ್ಳುವ ಪ್ರಕ್ರಿಯೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಕಾವ್ಯ ಸದಾ ವಿಸ್ತಾರಗೊಳ್ಳುತ್ತಿರುತ್ತದೆ ಕೂಡ.

ಪುಟ ೪೧ರಲ್ಲಿ ಬರುವ ‘ಈ ಪ್ರಾಣ ಪ್ರಾಣಃ ಪ್ರಾಣಂಭೋ. . .ಎಂಬ ಸಾಲುಗಳಲ್ಲಿ ಸಂಸ್ಕೃತ ಕಾವ್ಯಗಳಲ್ಲಿನ ಲಯ ಇರುವುದರಿಂದ ಸಾಮಾಜಿಕ ಕಾವ್ಯವೊಂದರಲ್ಲಿ ಈ ರೀತಿಯ ಕ್ರಮವನ್ನು ಬಳಸಿದರೆ ತಪ್ಪೇನಿಲ್ಲ ಎಂಬ ಕ್ರಮವೂ ಸಾಂಪ್ರದಾಯಿಕತೆಯನ್ನು ಮೀರುವ ಸೂಚನೆಯೇ ಆಗಿದೆ. ಆತ್ಮ-ಅನಾತ್ಮ, ನಿತ್ಯ-ಅನಿತ್ಯ, ಸತ್ಯ-ಅಸತ್ಯ, ವೈದಿಕ-ಅವೈದಿಕ, ಪ್ರಾದೇಶಿಕ-ವಿಶ್ವಾತ್ಮಕ, ಸ್ತ್ರೀ-ಪುರುಷ, ಸ್ಪೃಶ್ಯ-ಅಸ್ಪೃಶ್ಯ, ಎಂಬ ಭಿನ್ನಾಭಿನ್ನವಳಿವ ಕ್ರಿಯೆ ಕಾವ್ಯದ ಆತ್ಮಶಕ್ತಿಯಾಗಿದೆ.

‘ಮಾತು ಸತ್ತು ಮೌನ ಚಿಗುರಿತ್ತು
ಕಟ್ಟಕೇಡಿಗೆ
ಮೌನ ಸತ್ತು ಅಕ್ಷರಪ್ರಾಣ ಧರಿಸಿತ್ತು
ಪಟ್ಟಪಾಡಿಗೆ
ನಾನು ಸತ್ತು ಹುಟ್ಟಿದ್ದೆ
ಹುಟ್ಟಿ ಸತ್ತಿದ್ದೆ’

ಎಂಬ ಸಾಲುಗಳು ಹುಟ್ಟು-ಸಾವಿನ ‘ನಡುರಂಗ’ದಲ್ಲಿ ಏನೆಲ್ಲ ಸರ್ಕಸ್ಸುಗಳು ನಡೆಯುತ್ತವೆ ಎಂಬುದನ್ನು ಹಿಡಿದಿಟ್ಟಿವೆ. ಏಳು ಮಂದೆಮ್ಮಗಳು ಕೂಡಿ ‘ಬರೆದ ಬರೆ ಎಳೆದ ಗೆರೆ ಈ ಗೋಳಾಕಾರದಲ್ಲಿ ಗೋಳುಸಿರು ನಿರಾಕಾರ ಗೋಳುಸಿರು ಬಟ್ಟಂಬಯಲಿನಲ್ಲಿ ಹಸಿವು ಚಿತ್ತಲೆಸೇವೆ ನಿಟ್ಟುಸಿರು ಘನಪರಿಷೆ ನಡೆಯುತ್ತಿದೆ’ ಇಂಥ ಸಂಕೀರ್ಣ ಸಂದರ್ಭದಲ್ಲಿ ವಿಶ್ವಾತ್ಮಕವಾಗಿ ಬದುಕಬಹುದಾದ ಸಾಧ್ಯತೆಗಳು ಹೇಗೆ? ಎಲ್ಲಿ? ಎಂದು ಕಾವ್ಯ ಪ್ರಶ್ನಿಸುತ್ತಿದೆ. ಮಾತು ಸಾಯುವ, ಅಕ್ಷರ ಪ್ರಾಣವಾಗುವ ಕ್ರಿಯೆ ಏಗುವ ಬದುಕನ್ನು, ಈಸುವ ಪರಿಯನ್ನು ಸೂಚಿಸುತ್ತದೆ. ‘ಪ್ರಾಣ’ ಎಂಬ ಶಬ್ದ ಕಾವ್ಯ ಕ್ರಿಯೆಯ ಸಮಸ್ತವೂ ಆಗುತ್ತದೆ. ತಲ್ಲಣದ ಬದುಕಿನಲ್ಲಿ ಪ್ರಾಣದ ಹುಡುಕಾಟವಿರುವ ಹಾಗೆ ಪ್ರಾಣ ಸಮಸ್ತ ಪರಿಸರದ ನಡುವೆ ಸಿಗಬಹುದಾದ ಸುಖವಲ್ಲವೇ ಎಂದು ಪ್ರಶ್ನಿಸುತ್ತಲೇ ಜೀವ ವಿಶ್ವಾತ್ಮಕದ ಘಟಕವಲ್ಲವೇ ಎಂಬ ಗಂಭೀರ ಚರ್ಚೆಯನ್ನು ಒಳಗೊಂಡಿದೆ.

೨. ಮಹಾಕಾವ್ಯದ ಗಾಂಭೀರ್ಯ, ಮಾರ್ಗಶೈಲಿಗಳನ್ನು ಖಂಡಕಾವ್ಯ ಅನುಸರಿಸುತ್ತಿರುತ್ತದೆ ಎಂದು ನಂಬಲಾಗಿತ್ತು. ಗೋವಿಂದ ಪೈ ಅವರ 'ಗೊಲ್ಗೊಥಾ', ಕುವೆಂಪು ಅವರ 'ಚಿತ್ರಾಂಗದಾ' ಕೃತಿಗಳನ್ನು ಗಮನಿಸಿ 'ಗಲ್ಲೆಬಾನಿ' ಕೃತಿಯನ್ನು ನೋಡಿದಲ್ಲಿ ಸಂಪೂರ್ಣ ಹೊಸರೀತಿಯಲ್ಲಿ ಕಾವ್ಯ ಕಟ್ಟಲು ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಮಹಾಕಾವ್ಯದ ರೀತಿಯಲ್ಲಿ ಖಂಡಕಾವ್ಯಕ್ಕೂ ಸಿದ್ಧಶೈಲಿಯೊಂದು ಇರುತ್ತದೆ ಎಂಬ ನಂಬಿಕೆಯಿಂದ ಈ ಕೃತಿ ದೂರ ಉಳಿಯುತ್ತದೆ. ಕಾಲದ ತೆಕ್ಕೆಯಲ್ಲಿ ಕಾಲಾತೀತವಾಗುವ ಕಸುವೊಂದು ಇಲ್ಲಿದೆ. ಕೃತಿಯನ್ನು ಗಂಭೀರವಾಗಿ ಓದಿದ ಯಾವ ಓದುಗನಿಗೂ ಇದು ತಿಳಿಯುತ್ತದೆ.

೩. **ಕ್ರಿಯೆ ಮತ್ತು ಕಥನ:** ಇದುವರೆಗೆ ಕಾವ್ಯದಲ್ಲಿ ವಸ್ತು, ಭಾಷೆ, ತಂತ್ರ, ಶೈಲಿ ಎಂದು ಓದಿಕೊಂಡು ಬಂದದ್ದೂ ಕೂಡ ಅನ್ಯ ನೆರಳಿನ ಆಶ್ರಯದಲ್ಲಿಯೇ ನಡೆದುಬಂದುದನ್ನು ತಿಳಿಸುತ್ತದೆ. ಈ ಕೃತಿ ನಿರ್ಮಾಣದ ಹಿಂದೆ ಒಂದು 'ತುರ್ತು' ಇದ್ದೇ ಇದೆ. ಅದು ಸಾಮಾಜಿಕವಾದದ್ದೋ, ಸಾಂಸ್ಕೃತಿಕವಾದದ್ದೋ, ತಾತ್ವಿಕವಾದದ್ದೋ ಯಾವುದೋ ಒಂದಂತೂ ಕಾಡಿರಲು ಸಾಧ್ಯ. ಈ ಎಲ್ಲದರ ಪಾರ್ಶ್ವಿಕ ಅನುಸಂಧಾನವೂ ಆಗಿದ್ದಿರಬಹುದು. ಇದು ಓದುಗನನ್ನು ಅವಲಂಬಿಸಿರುತ್ತದೆ. ಒಂದು ನಿರ್ದಿಷ್ಟ ನೆಲೆಯಲ್ಲಿ ನಿಂತೂ ನೋಡುವ ಸ್ವಾತಂತ್ರ್ಯ ಓದುಗನಿಗಿರುವುದರಿಂದ ನಿರೀಕ್ಷಾ ಕ್ಷಿತಿಜ ಓದುಗನಿಂದ ಓದುಗನಿಗೆ ಭಿನ್ನವಾಗುವ ಅವಕಾಶವೂ ಇಲ್ಲದೇ ಇಲ್ಲ. ಕಾವ್ಯ ಎಂದರೆ ಶಬ್ದಗಳ ಸಂತೆ, ವಾಕ್ಯಗಳನ್ನು ಮುರಿದು ಕಟ್ಟುವ ಕಸು, ಭಾಷೆಯಲ್ಲಿ ತರುವ ಚಮತ್ಕಾರದ ಒಂದು ಕ್ರಮ ಎಂದು ಭಾವಿಸಿದರೆ ತೀರಾ ಸರಳೀಕರಣ ಆಗಿಬಿಡುವ ಅಪಾಯವೂ ಇದೆ. ಭಾಷಿಕ ರಚನೆಯ ಮೂಲಕ ಹೇಳುವ ಕೃತಿಗಳ ಬಗ್ಗೆ ಭಾಷಾ ವಿಜ್ಞಾನಿ ಎಫ್.ಡಿ.ಸಸೂರ್ ಹೇಳುವ ಹಾಗೆ 'ಪಠ್ಯವೊಂದು ವಾಕ್ಯಾರ್ಥ ವಿನ್ಯಾಸದ ಘಟಕಗಳನ್ನು ಹೊಂದಿ ಒಂದು ವಿಶಿಷ್ಟ ಆಲೋಚನೆಯನ್ನು ಮಂಡಿಸುತ್ತಿರುತ್ತದೆ' ಎನ್ನುತ್ತಾನೆ. ಲೆವಿಸ್ಟ್ರಾಸ್ ಅವರು 'ಪಠ್ಯವೊಂದು ವೈರುಧ್ಯಗಳ ಒತ್ತಡದ ಅನಿವಾರ್ಯತೆಯಲ್ಲಿ ರೂಪ ಪಡೆಯುತ್ತಿರುತ್ತದೆ' ಎಂದು ಹೇಳುವುದೂ ಕೂಡ ಈ ಕಾರಣಕ್ಕಾಗಿಯೇ. ಒಂದು ಪಠ್ಯದ ಸರಿಯಾದ ಓದು ಎಂದರೆ ಚಾರಿತ್ರಿಕ ಹುಡುಕಾಟವೇ ಎಂದರ್ಥ. ಪಠ್ಯ ನಿರ್ಮಾಣದ ಸಂದರ್ಭ, ಪಠ್ಯ ರಚಿಸಿದವರ ಆಲೋಚನಾ ವಿಧಾನ, ಆ ಹೊತ್ತಿನ ಸಾಮಾಜಿಕ ಅನಿವಾರ್ಯತೆ, ಬದುಕು ರೂಪುಗೊಳ್ಳುತ್ತಿರುವ ಹೊತ್ತಿನ ಸಂದರ್ಭದ ಸಂಘರ್ಷ ಇತ್ಯಾದಿ ಅನೇಕ ಸಂಗತಿಗಳು ಪಾಲು ಪಡೆಯುತ್ತವೆ. ಇವ್ಯಾವೂ ಇಲ್ಲದೆ ತನಗೆ ತಾನೇ ಸೃಷ್ಟಿಯಾಗುತ್ತಿರುತ್ತದೆ ಎಂದುಕೊಳ್ಳುವುದು ಮೂರ್ಖತನವಾಗುತ್ತದೆ. ಕೃತಿಯೊಂದನ್ನು ಓದುತ್ತಿರುವ ಓದುಗ ವರ್ತಮಾನದಲ್ಲಿದ್ದುಕೊಂಡೂ ಭೂತ ಮತ್ತು ಭವಿಷ್ಯತ್ತಿನ ಅನುಸಂಧಾನದಲ್ಲಿ ತೊಡಗಿರುತ್ತಾನೆ. ಇಂಥ ಅನುಸಂಧಾನದ ಕ್ರಿಯೆಯಲ್ಲಿ ಒಂದು ಶಬ್ದ ಬಂದರೆ ಸಾಕು ಅದರ ಭಿನ್ನ ಪಾತಳಿಗಳ ಸಹಾಯದಿಂದ ಕಾವ್ಯ ಗ್ರಹಿಸುವ ನೆಲೆಯನ್ನು ಓದುಗ ಕಾಣುತ್ತಿರುತ್ತಾನೆ.

'ಈ ದೇಹ ನನ್ನ ದೇಹ ಇಡೀ ದೇಹ
ಮುಟ್ಟಬಾರದೆಂದು ಕೇಳಿ
ಕೇಳಿ ಕೇಳಿ ಕಟ್ಟಕಡೆಗೆ ಮುಟ್ಟಬೇಕೆಂದು ಅರಿತು
ಕಾಯವನ್ನು ಕಾಯಕದಿಂದ ವಿಸರ್ಜಿಸಿದೆ
ಮಲಮೂತ್ರ ವಿಸರ್ಜಿಸಿದಂತೆ' (ಪು.೧)

ಕಾಯವನ್ನು ಕಾಯಕದಿಂದ ವಿಸರ್ಜಿಸಬೇಕೆಂಬ ಸಂಘರ್ಷ ನಡೆಯುತ್ತಿದ್ದರೂ ವಿಸರ್ಜಿಸಲಾರದ ಅನಿವಾರ್ಯತೆಯೂ ಕೂಡ ಇಲ್ಲಿದೆ. ವಿಸರ್ಜಿಸಬೇಕು ಎಂದ ತಕ್ಷಣ ವಿಸರ್ಜಿಸಿಬಿಡಲು 'ಮನಸ್ಸು' ಒಂದು ವಸ್ತುವೇನು ಅಲ್ಲ. ಮುಂದಿನ ಸಾಲುಗಳನ್ನು ಇದರೊಂದಿಗೆ ಇಟ್ಟರೆ ಸಂಘರ್ಷದ ಸ್ವರೂಪ ತಿಳಿಯುತ್ತದೆ.

ಚರ್ಮ ಸುಲಿದು
ಮೆಟ್ಟು ಹೊಲಿದು
ಮೆಟ್ಟಿ ಮೆಟ್ಟಿ ಮೆಟ್ಟಿ
ಬಿಟ್ಟು ಬಿಟ್ಟೆ ಮೆಟ್ಟು ಬಿಡುವ
ಜಾಗದಲ್ಲಿ.

ಮೇಲಿನ ಸಾಲುಗಳಿಂದ ಹೊರಟ ಅರ್ಥವನ್ನು ಈ ಸಾಲುಗಳು ಪೂರ್ಣಗೊಳಿಸುತ್ತವೆ. ಈ ಭಾಗ 'ಮುಟ್ಟಿನ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ಕಟ್ಟಿಕೊಡುತ್ತಿದೆ. ಹೇಸಿಹೋದ ಕಾಯದ ಬದುಕಿನ ಸಾಂಸ್ಕೃತಿಕ, ಸಾಮಾಜಿಕ ಚರಿತ್ರೆ ಇದಕ್ಕಿಂತ ಕಟಿತಾರಿಯಾಗಿ ಕಟ್ಟಲು ಸಾಧ್ಯವೇ? 'ಮುಟ್ಟು', 'ಮೆಟ್ಟು', 'ಜಾಗ'- ಈ ಶಬ್ದಗಳು ಸಂಭವಿಸುತ್ತಿರುತ್ತವೆ ಮತ್ತು ಓದುಗನೋರ್ವನ ಭಿನ್ನಾಭಿನ್ನ ವ್ಯಾಖ್ಯಾನಗಳಿಗೆ ಇಂಬುಗೊಡುತ್ತಿರುತ್ತವೆ.

'ಮುಟ್ಟಬಾರದು' ಎನ್ನುವುದು ಹೊರಗಿನ ಸತ್ಯ
'ಮುಟ್ಟಬೇಕು' ಎನ್ನುವುದು ಒಳಗಿನ ಸತ್ಯ

ಹೊರಗೂ ಮತ್ತು ಒಳಗಿನ ಸಂಘರ್ಷ ವಿಸರ್ಜಿಸುವ ಮಟ್ಟಕ್ಕೆ ಹೋದರೂ ವಿಸರ್ಜಿಸುವ ಕ್ರಿಯೆ ಅಷ್ಟು ಸುಲಭವಾದದ್ದಲ್ಲ ಎಂಬ ಸಂಗತಿಗೆ ಮತ್ತೆ ಚರಿತ್ರೆಗೇ ಹೋಗಬೇಕು. ಇದೊಂದು 'ಮುಟ್ಟಿನ ಚರಿತ್ರೆ'ಯಾಗುತ್ತದೆ. 'ವಿಸರ್ಜನೆಯೋ', 'ಮೆಟ್ಟುವುದೋ' ಎರಡರಲ್ಲಿ ಒಂದು ಆಗಬೇಕು ನಿಜ. 'ಆಗುವಿಕೆ' ಅಷ್ಟು ಸುಲಭವೇ? ಇವೆರಡರ ನಡುವಿನ ಅರ್ಥ ಓದುಗನಿಗೆ ಸಂಭವಿಸುತ್ತಿರುವಂತೆಯೇ ಸಾಮಾಜಿಕ ಚರಿತ್ರೆಯನ್ನೂ, ಸಾಮಾಜಿಕ ವೈರುಧ್ಯತೆಯನ್ನೂ, ಅಲ್ಲಿನ ಸವಾಲುಗಳನ್ನೂ ಒಟ್ಟಿಗೇ ಚಲನೆಗಿಟ್ಟಿರುತ್ತದೆ. ಒಟ್ಟಾರೆ ಅಲ್ಲೊಂದು 'ಜಾಗ'ವಿದೆ. ಅದಕ್ಕೆ 'ಕುಲ'ದ ಒಲಿಯೂ ಇದೆ. ಹೀಗಾಗಿ ಕಾಯಕ ಕುಲದೊಂದಿಗೆ ಥಳುಕುಹಾಕಿಕೊಂಡಿದೆ. ಇಲ್ಲಿ ಈ ಶಬ್ದಗಳು ಸ್ಪಷ್ಟವಾಗಿ ಸಾಮಾಜಿಕ ಚರಿತ್ರೆಯನ್ನು ಹೇಳುತ್ತಿವೆ.

ನಮ್ಮೆದುರಿನ ಅನೇಕ ಸಂಗತಿಗಳು ಕಾರಣ ಮತ್ತು ಪರಿಸ್ಥಿಗಳ ಸಂಬಂಧದಲ್ಲಿ ಉಂಟಾಗುವುದರಿಂದ ಪರಿಣಾಮಗಳೂ ಭಿನ್ನವಾಗಿರುತ್ತವೆ. ಉದಾಹರಣೆಗೆ 'ಮುಟ್ಟು', 'ವಿಸರ್ಜನೆ' ಎಂಬ ಶಬ್ದಗಳನ್ನೇ ತೆಗೆದುಕೊಂಡರೆ ಅರ್ಥವು ಸದಾ ಕಟ್ಟಲ್ಪಡುತ್ತಿರುತ್ತದೆ. ನಾವು ಕಟ್ಟಿಕೊಳ್ಳುವಿಕೆಯ ವಿಧಾನದಲ್ಲಿ ಕಾವ್ಯ ಸೂಕ್ಷ್ಮಾತಿಸೂಕ್ಷ್ಮ ಸ್ತರಗಳ ವಿವೇಚನೆಯನ್ನೊಳಕೊಂಡಿರುತ್ತದೆ.

೩. **'ಸಮಾಜೋ ಅಧ್ಯಾತ್ಮ ಪ್ರಜ್ಞಾವಸ್ಥೆ':** 'ಚಮ್ಮಾರನ ಕಾಯಕ ಕೌಶಲ್ಯ ಕೇವಲ ಚಪ್ಪಲಿ ಹೊಲೆಯುವ ವೃತ್ತಿ ಮಾತ್ರ ಆಗಿಲ್ಲ. ನಮ್ಮ ಪುರಾತನ ಹಾಗೂ ಆಧುನಿಕ ಸಮಾಜದ ಸಾಮಾಜಿಕ ಚರಿತ್ರೆಯನ್ನು ಬಿಡಿಸಿ ಹೇಳುತ್ತದೆ. ಈ ಸಾಮಾಜಿಕ ಚರಿತ್ರೆಯ ನಡೆಯನ್ನು "Socio Spiritual Travelling' ಸಮಾಜೋ ಅಧ್ಯಾತ್ಮ ಪ್ರಯಾಣವೆಂದಿದ್ದಾರೆ. ಕವಿಯ ಮಾತುಗಳನ್ನು ಗಮನಿಸಿದರೆ 'ಈ ಸ್ಥಿತಿ ಆದಿಯೂ ಅಲ್ಲ, ಮಧ್ಯವೂ ಅಲ್ಲ, ಅಂತ್ಯವೂ ಅಲ್ಲ, ಆದಿ ಮಧ್ಯಾಂತರ ರಹಿತವೂ ಅಲ್ಲ, ನಿರಂತರ ಬದಲಾಗುತ್ತಿರುವ ಪ್ರಾಣ ಪ್ರಜ್ಞೆ.' ಎಂಬ ಮಾತುಗಳು ಕಾವ್ಯದ ನಡೆಯನ್ನು ಸೂಚಿಸುತ್ತಿವೆ. ವೃತ್ತಿಗಿರಬಹುದಾದ ಸಾಮಾಜಿಕ ಚರಿತ್ರೆಯನ್ನು ಹೇಳುತ್ತಿರಬಹುದಾದರೂ ವೃತ್ತಿಯ ಸಂದರ್ಭವು ಜಾತಿ ಸಂಘರ್ಷದ ಕಥನವೂ ಆಗಿದೆ. 'ಮುಟ್ಟು' 'ಮೆಟ್ಟು' ಇವೆರಡೇ ಶಬ್ದಗಳು ಸಮಾಜಿಕ ಚರಿತ್ರೆಯ ಪ್ರಾಣ ಪ್ರಜ್ಞೆಯ ಸೂಚಕಗಳೂ, ಸಾಮಾಜಿಕ ಸಂಘರ್ಷದ ನೆಲೆಗಳೂ ಆಗಿವೆ. ಕವಿಯ ಆಲೋಚನೆಯಂತೆ ಇವೆರಡೇ ಶಬ್ದಗಳು

ಪ್ರಾಣಪ್ರಜ್ಞೆಯ ಪರಿಪಾಟವನ್ನು ಸುಡಿಯಲು ತವಕಿಸುತ್ತಿರುವ ಮೂಲದ್ರವ್ಯಗಳೂ ಆಗಿವೆ. ಅಂಬೇಡ್ಕರ್, ಗಾಂಧಿ, ಬುದ್ಧ, ಅಲ್ಲಮರ ಮಹಾಬೆಳಗು ಬೆನ್ನಿಂದಿನ ಬೆಳಗು. Spiritual Travellingನ ಶಕ್ತಿಯೂ ಆಗಿದೆ. 'ಕಾಲ ಅಕಾಲದ ಕುಲುಮೆಯಲ್ಲಿ ಕೆಂಪು ಕೆಂಪಾಗಿ ಕುದಿಸೋ ಶಬ್ದಾರ್ಥಗಳ ಬೆಸುಯೋ' ಜೀವಸತ್ವದ ಹುಡುಕಾಟಕ್ಕೆ ಕವಿ ಹಾತೊರೆಯುವ ಕ್ಷಣಗಳಿವು. 'ದೇಹ ಶವದೊಳಗೆ ಜೀವಸಂಚಾರವಾದಂತೆ ಕಂಡೂ ಕಂಡೂ ಕಾಣದುದ ಕಾಣುವಂತವನಾದರೆ ನಿರ್ಲಿಂಗದೇವಿ ಅಕ್ಕನಂತೆ' ಕಾಣದುದ ಕಾಣುವ, ಆಗದುದು ಆಗುವ, ನಡೆಯದುದು ನಡೆಯುವ ಎಲ್ಲವುಗಳನ್ನು ಅಕ್ಷರ ಚರಿತ್ರೆಯಲ್ಲಿ ದಾಖಲುಗೊಳಿಸಲಾಗುತ್ತದೆಯೇ ಎಂಬ ಪ್ರಶ್ನೆಯೇ ಕಾಜಗದ ದೋಣಿಯಾಗುತ್ತದೆ. ಅಲ್ಲಮನೇ ಹೇಳಿದಂತೆ 'ಮಾತೆಂಬುದು ಜ್ಯೋತಿರ್ಲಿಂಗ! ಸ್ವರವೆಂಬುದು ಪರತತ್ತ್ವ!' ಸಾಮಾಜಿಕ ನಡೆಯಲ್ಲಿ ಕವಿಯ ಜೀವನದ ಸಂದರ್ಭದಲ್ಲಿ ಎದುರಿಸಿದ ಎಲ್ಲ ಒತ್ತಡಗಳೂ ಕಾವ್ಯದ ಬಹುರೂಪಿ ಚಲನೆಗೆ ಕಾರಣವಾಗಿವೆ. ೧.ಅಧ್ಯಾತ್ಮ ೨.ಆಧ್ಯಾತ್ಮಿಕ ಎಂಬ ಎರಡು ಶಬ್ದಗಳಿವೆ .ಅಧ್ಯಾತ್ಮ ಎಂಬ ಪ್ರಯೋಗವೊಂದು ನಮ್ಮಲ್ಲಿ ಬಳಕೆಯಲ್ಲಿದೆಯೇ ವಿನಃ ಆಧ್ಯಾತ್ಮ ಎಂಬುದಿಲ್ಲ. ಆತ್ಮನಿಗೆ ಸಂಬಂಧಿಸಿದ್ದುದೇ ಅಧ್ಯಾತ್ಮ. ಆತ್ಮ ವಸ್ತುವಿಗೆ ಸಂಬಂಧಿಸಿದ್ದು, ಶರೀರ ಸಂಬಂಧವಾದ ವ್ಯಾಪಾರ ಮುಂತಾದ ತಾಪಗಳನ್ನು ಒಳಗೊಂಡದ್ದು ಆಧ್ಯಾತ್ಮಿಕ. ಜಗದ ಜಂಜಡಗಳಲ್ಲಿ ಆತ್ಮ ವಿನಾಶವಾಗದಹಾಗೆ ಕಾಪಾಡಿಕೊಳ್ಳುವ ಹೊಣೆಯೂ ನಮ್ಮ ಮೇಲಿರುವುದರಿಂದ ಸುತ್ತಲಿನ ಸಂಕಟಮಯ ಸನ್ನಿವೇಶಗಳು ಬಗ್ಗಡಗೊಳ್ಳದ ಹಾಗೆ ಇರಿಸುತ್ತವೆಯೇ ಎಂಬ ಪ್ರಶ್ನೆಯೂ ಇಲ್ಲಿ ಮುಖ್ಯವಾಗಿದೆ. "religious' ಎಂಬ ಶಬ್ದವನ್ನು ಕವಿ ಬಹುಸೂಕ್ಷ್ಮಸ್ತರದಲ್ಲಿ ಉಪಯೋಗಿಸಿದ್ದಾನೆ. ಪ್ರಸ್ತುತ ನಾವಿಂದು ಬಹು ಸಂಕುಚಿಸಿಕೊಂಡು ಅರ್ಥೈಸುತ್ತಿದ್ದೇವೆಯೋ ಆ ಅರ್ಥವನ್ನಂತೂ ಕವಿ ಬಳಸಿಲ್ಲ. ನಿರಾಕಾರ, ಆಧ್ಯಾತ್ಮಿಕ ಎಂಬ ಅರ್ಥವೇ ಇಲ್ಲಿ ಮುಖ್ಯವಾದಂತಿದೆ. ಕವಿಯ ಕಾವ್ಯಕೃತಿಯು ಧ್ಯಾನಸ್ಥಲೋಕದ ತುಡಿತಗಳನ್ನು ಪ್ರಸ್ತುತಪಡಿಸಲೋಸುಗವೇ ಈ ಶಬ್ದ ಬಳಕೆಯಾಗಿದೆ. ಇದು ಕನ್ನಡ ಕಾವ್ಯಲೋಕದ ಸಂದರ್ಭದಲ್ಲಿ ಕವಿಯೊಬ್ಬ ಕಂಡುಕೊಂಡ ಹೊಸ ಕ್ರಮವೂ ಆಗಿದೆ. ಈ ಕಾರಣದಿಂದಲೇ ಕಾವ್ಯ ಗಂಭೀರವೂ ಆಗಿದೆ. ಉತ್ತರಗಳನ್ನು ಹುಡುಕುವ ಮೂಲವೂ ಇದೇ ಆಗಿದೆ. ಸಮುದಾಯದ ಒಳಗೆ ಕವಿಯೊಬ್ಬ ಹೊಸ ದಾರಿಗಳನ್ನು ತೆರೆಯಲು ಹೇಗೆ ಪ್ರಯತ್ನಿಸುತ್ತಾನೆ ಎಂಬುದಂತೂ ಈ ಕಾವ್ಯದಲ್ಲಿ ತುಂಬ ಅರ್ಥವತ್ತಾಗಿ ಕಟ್ಟಲ್ಪಟ್ಟಿದೆ. 'ನೋವು' ಕಾವ್ಯದ ಮೂಲ ಸ್ಥಾಯಿಯಾಗಿದೆ. ನೋವನ್ನು ಮೀರುವ ಮಾಧ್ಯಮದ ಹುಡುಕಾಟವೇ ಇಲ್ಲಿ 'socio spiritual travelling' ಆಗಿದೆ. ನಮ್ಮೆದುರಿನ ಸಾಮಾಜಿಕ ವ್ಯವಸ್ಥೆ ಕುದಿಯುತ್ತಿರುವ ಕುಲುಮೆಯಂತೆ ಕಂಡರೂ ಕವಿಯೊಬ್ಬ ಉತ್ತರ ಹುಡುಕುವ ಪ್ರಯಾಸಕರ ಹಾದಿಯನ್ನೂ ಅದು ಸೂಚಿಸುತ್ತಿದೆ. ಈ ಕಾವ್ಯದ ಮಟ್ಟಿಗೆ ಹೇಳಬೇಕೆಂದರೆ ಪ್ರಾಯೋಗಿಕ ವಿಮರ್ಶೆ, ಸಂಸ್ಕೃತಿ ನಿಷ್ಠ ವಿಮರ್ಶೆ ಹಾಗೂ ಆತ್ಮಕೇಂದ್ರಿತ ವಿಮರ್ಶಾ ಮಾದರಿಗಳನ್ನು ಮರೆತು ವಿವೇಚಿಸಲು ಕಾವ್ಯವನ್ನು ಆಳಕ್ಕಿಳಿದು ನೋಡುವ ತಾಳ್ಮೆ, ಕಾವ್ಯವನ್ನು ಸಹಾನುಭೂತಿಯಿಂದ ಪರಿಶೀಲಿಸುವ ಧೈರ್ಯಗಳೆರಡೂ ಓದುಗನಿಗೆ ಅವಶ್ಯಕ.

ಅತಿಥಿ ಕನ್ನಡ ಉಪನ್ಯಾಸಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ದಂಡಿನಶಿವರ, ತುಮಕೂರು ಜಿಲ್ಲೆ.
ಮೊಬೈಲ್ : [illegible]

ಎಕೋ ಕ್ರಿಟಿಸಿಸಂ

ECO-CRITISISM

ಮೂಲ: ಪೀಟರ್ ಬೆರಿ
ಕನ್ನಡಕ್ಕೆ: ವಿಜಯ ರಾಘವನ್
ಕೆ.ಸಿ. ಶಿವಾರೆಡ್ಡಿ



ಸರಳವಾಗಿ ಹೇಳಬೇಕೆಂದರೆ ಎಕಾಕ್ರಿಟಿಸಿಸಂ ಎನ್ನುವುದು ಸಾಹಿತ್ಯಕ್ಕೂ ಭೌತಿಕ ಜಗತ್ತಿಗೂ ಇರುವ ಸಂಬಂಧದ ಅಧ್ಯಯನ. ಆದರೆ ಇಲ್ಲಿನ ಪ್ರಶ್ನೆ ನಾವು ಅದನ್ನು ಹಾಗೆ ಕರೆಯಬೇಕೋ, ಹಸಿರು ಓದು ಎಂದು ಕರೆಯಬೇಕೋ ಎನ್ನುವುದು. ನಮ್ಮ ನಡುವೆ ಎರಡೂ ಶಿರೋನಾಮೆಗಳು ಬಳಕೆಯಲ್ಲಿ ಇವೆ. ಅಮೆರಿಕದಲ್ಲಿ ೧೯೮೦ರ ದಶಕದ ಕೊನೆಯಲ್ಲಿ ಹಾಗೂ ಬ್ರಿಟನ್ನಿನಲ್ಲಿ ೧೯೯೦ರ ದಶಕದ ಪ್ರಾರಂಭದಲ್ಲಿ ಇವು ಬಳಕೆಗೆ ಬಂದವು. ಆಗ ತೆರೆದುಕೊಳ್ಳುತ್ತಿದ್ದ ವಿಮರ್ಶಾತ್ಮಕ ಗ್ರಹಣ ಪ್ರಕ್ರಿಯೆಯ ಮಾರ್ಗವನ್ನು ಸೂಚಿಸಲು, ಗುರುತಿಸಲು ಹುಟ್ಟಿಕೊಂಡ ಶಿರೋನಾಮೆಗಳು ಅವು. ಈ ಚಳವಳಿ ಇನ್ನೂ ಪ್ರಾದುರ್ಭಾವ ಸ್ಥಿತಿಯಲ್ಲಿ ಇರುವುದರಿಂದ ಇದರ ಈವರೆಗಿನ ಸಾಂಸ್ಥಿಕ ಚರಿತ್ರೆಯನ್ನು ಹೇಳಿ ಮುಂದುವರಿಯುವುದು ಉಚಿತ. ಅಮೆರಿಕದಲ್ಲಿ ಚೆರಿಲ್ ಗ್ಲಾಟ್‌ಫಾಲ್‌ಟಿಯನ್ನು ಇದರ ಸಂಸ್ಥಾಪಕಿಯೆಂದು ಅಧಿಕೃತವಾಗಿ ಒಪ್ಪಿಕೊಳ್ಳಲಾಗಿದೆ. ತುಂಬ ಉಪಯುಕ್ತವೂ ಖಚಿತವೂ ಆದ ವಿಚಾರಗಳನ್ನು ಒಳಗೊಂಡಂತಹ ಪ್ರಬಂಧಗಳ ಸಂಕಲನ The Eco criticism Reader: Landmarks in Literary Ecology-(University of Georgia Press-1996) ವನ್ನು ಹೆರಾಲ್ಡ್ ಫ್ರಾಂ ಜೊತೆ ಸಹಸಂಪಾದನೆ ಮಾಡಿದ್ದವಳು ಈಕೆ. ASLE - The Association for the Study of Literature and Environment- ನ ಸಹ ಸ್ಥಾಪಕಿಯಾದವಳು. ಇದನ್ನು ಅಝ್‌ಲೀ ಎಂದು ಉಚ್ಚರಿಸಬೇಕು. ಅಝ್‌ಲೀ ತನ್ನದೇ ಆದ ಗೃಹ ಪತ್ರಿಕೆಯೊಂದನ್ನು ಹೊರಡಿಸುತ್ತದೆ. ಅದರ ಹೆಸರು ಇಝ್‌ಲೀ (Interdisciplinary Studies in Litera-



ture and Environment) ಇದು ೧೯೯೩ರಲ್ಲಿ ಆರಂಭವಾದ ಪತ್ರಿಕೆ. ಹಾಗಾಗಿ ೧೯೯೦ರ ದಶಕದ ಆದಿಯಲ್ಲೇ ಅಮೆರಿಕನ್ ಇಕಾಕ್ರಿಟಿಸಿಸಂ ಅನ್ನುವುದು ಬಹಳ ಸಮೃದ್ಧವಾಗಿ ಬೆಳೆದ ಅಕೆಡೆಮಿಕ್ ಚಳವಳಿಯಾಗಿ ನಳನಳಿಸುತ್ತಿತ್ತು ಮತ್ತು ಅದು ಅಧಿಕೃತ ಸಾಂಸ್ಥಿಕ ಸ್ವರೂಪವನ್ನು ಹೊಂದುವ, ತುಂಬ ನಿರ್ದಿಷ್ಟವಾದ ಜರ್ನಲ್‌ಗಳನ್ನು ಹೊರತರುವ ಕೆಲಸಕ್ಕೆ ಮೊದಲಿಟ್ಟಿತ್ತು. ಆದರೆ, ಅವು ಕೂಡ ಅಕಡೆಮಿಕ್ ಸ್ವರೂಪದಲ್ಲಿಯೇ ರೂಪು ಗೊಂಡಂತಹವು. ಲಭ್ಯವಿರುವ ಬಹಳಷ್ಟು ವಾಚಿಕೆಗಳು ಮತ್ತು ಸಾಹಿತ್ಯ ಸಿದ್ಧಾಂತ ಪ್ರವೇಶಿಕೆಗಳಿಗಿಂತ, ಇಕಾಕ್ರಿಟಿಸಿಸಂ ಅನ್ನು ಮೊದಲು ಪ್ರಸ್ತಾಪಿಸಿದ್ದು ಈ ಪುಸ್ತಕವೆ. ಈ ಚಳವಳಿಗೆ ಈತನಕ ಸ್ಪಷ್ಟವಾದ ಬಹುಶ್ರುತ ಸಂಚಿಕೆಗಳಾಗಲಿ, ತತ್ವಗಳಾಗಲಿ, ಮಾರ್ಗ ಅಥವಾ ವಿಧಾನಗಳಾಗಲಿ ಇಲ್ಲ. ಅಮೆರಿಕದಲ್ಲಿ ಪಶ್ಚಿಮದ ವಿಶ್ವವಿದ್ಯಾಲಯಗಳಲ್ಲಿ ಇಕಾಕ್ರಿಟಿಸಿಸಂ ಪ್ರಬಲವಾಗಿದೆ. ಅಂದರೆ ಪ್ರಮುಖ ನಗರಗಳಿಂದ ದೂರ, ಪೂರ್ವ ಮತ್ತು ಪಶ್ಚಿಮ ಕಡಲ ತೀರಗಳ ಮುಖ್ಯವಾದ ಅಕಡೆಮಿಕ್ ಶಕ್ತಿಕೇಂದ್ರಗಳಿಂದ ದೂರವಿರುವ ವಿಶ್ವವಿದ್ಯಾಲಯಗಳಲ್ಲಿ. ಹಾಗಾಗಿ ನಾವು ಈ ತೆರನಾದ ವಿಕೇಂದ್ರೀಕರಣ ಪರವಾದ ಆದರ್ಶವೊಂದನ್ನು ಅದು ಒಳಗೊಳ್ಳುವುದೆಂದು ಅರಿಯಬಹುದಾಗಿದೆ.

ಒಂದು ಚಿಂತನೆಯ ವಿಚಾರವಾಗಿ ಎಕಾಕ್ರಿಟಿಸಿಸಂ ಹೊರಬಿದ್ದುದು ೧೯೭೦ರ ದಶಕದ ಕೊನೆಯಲ್ಲಿ. WLA (The western Literature Association ಎಂಬ ಪಶ್ಚಿಮ ಅಮೆರಿಕದ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಸಂಸ್ಥೆ) ಸಭೆಯೊಂದರಲ್ಲಿ. ಎಕಾಕ್ರಿಟಿಸಿಸಂ ಅಂದರೆ ಏನು ಎಂಬ ವಿಕರೂಪಿ ಶೀರ್ಷಿಕೆಯ ಅಭಿಪ್ರಾಯ ಸೂಚಕ ಮಂಡನೆಗಳಿಗೆ ಪ್ರಸ್ತಾವನೆಯನ್ನು ಒದಗಿಸುತ್ತ ಮೈಕೇಲ್ ಪಿ ಬ್ರಾಂಚ್, ಎಕಾಕ್ರಿಟಿಸಿಸಂ ಎನ್ನುವ ಪದದ ಹುಟ್ಟನ್ನು ವಿಲಿಯಂ ರ್ಯೂಕರ್ಟ್ ೧೯೭೮ರಲ್ಲಿ ಬರೆದ ನಿಬಂಧ- Literature and Ecology: An Experiment in Eco criticism - ದಲ್ಲಿ ಹುಡುಕಿ ತೆಗೆಯುತ್ತಾರೆ. ಸಾಹಿತ್ಯ ವಿಮರ್ಶೆಯಲ್ಲಿ ಇದಕ್ಕೆ ಸಂಬಂಧಿಸಿದ ಪದ 'ಇಕಾಲಜಿ'ಯನ್ನು ಮೊದಲು ಬಳಸಿದವರು ಅಮೆರಿಕದ ಪ್ರಮುಖ ಪರಿಸರ ವಿಮರ್ಶಕ ಕಾರ್ಲ್ ಕ್ರೂಬರ್. ಅವರ ಲೇಖನ 'Home at Grasmere: Ecological Holiness' PMLA ಜರ್ನಲ್‌ನಲ್ಲಿ (ಸಂ. ೮೯, ೧೯೭೪, ಪುಟ ೧೩೨-೧೪೮ರಲ್ಲಿ) ಪ್ರಕಟವಾಯಿತು. ೧೯೯೪ರಲ್ಲಿ ನಡೆದ WLA (Coeur d' alene. USA -A town in the northern panhandle of Idaho: popular resort area) ಸಮ್ಮೇಳನದಲ್ಲಿ, ಅಲ್ಲಿಯವರೆಗೂ ಸುಪ್ತವಾಗಿದ್ದ Ecocritism ಮತ್ತು Ecology ಎಂಬ ಎರಡೂ ಪರಿಭಾಷೆಗಳು (ಬ್ರಾಂಚ್ ಹೇಳುವಂತೆ ಅವು ವೈಮರ್ಶಿಕ ಪರಿಭಾಷೆಗಳು) ಮೊದಲ ಬಾರಿಗೆ ಬಹಿರಂಗವಾಗಿ ಮತ್ತು ಜಾಗೃತವಾಗಿ ಪ್ರಸ್ತಾಪಿಸಲ್ಪಟ್ಟವು. ಅಲ್ಲಿ ಆ ಪರಿಭಾಷೆಯನ್ನು ಮುನ್ನೆಲೆಗೊಳಿಸಿದ್ದು ಆಗ ಪದವೀಧರ ವಿದ್ಯಾರ್ಥಿನಿಯಾಗಿದ್ದ ಚೆರಿಲ್ ಗ್ಲಾಟ್‌ಫೆಲ್ಟಿ. (ಆಕೆ ಬಳಿಕ ರೆನೋನಲ್ಲಿನ ನೆವಡ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಮತ್ತು ಪರಿಸರ ವಿಭಾಗದ ಸಹಾಯಕ ಪ್ರೊಫೆಸರ್ ಆದರು.) ಅಷ್ಟೇ ಅಲ್ಲ, ಆ ಪರಿಭಾಷೆಯನ್ನು ಹಿಂದೆ ಪರಿಸರ ಸಾಹಿತ್ಯವೆಂದು ತಿಳಿದಿದ್ದ ವಿಸ್ತೃತ ಸಾಹಿತ್ಯ ಪ್ರಕಾರಕ್ಕೆ ಅನ್ವಯಿಸಬೇಕೆಂದು ಚೆರಿಲ್ ಗ್ಲಾಟ್‌ಫೆಲ್ಟಿ ಒತ್ತಾಯಿಸಿದಳು ಕೂಡ.

ಇಂದು ಅಮೆರಿಕದಲ್ಲಿ ಅಸ್ತಿತ್ವದಲ್ಲಿ ಇರುವಂತಹ ಎಕಾಕ್ರಿಟಿಸಿಸಂ ತನ್ನ ಸಾಹಿತ್ಯಕ ನಿಲುವನ್ನು ಸ್ಥಾಪಿಸಿಕೊಂಡಿದ್ದು ೧೯ನೇ ಶತಮಾನದ ಮೂವರು ಲೇಖಕರಿಂದ. ಆ ಮೂವರೂ ಪ್ರಕೃತಿ, ಜೀವನಶಕ್ತಿ ಮತ್ತು ಅಂದಿನ ಅಮೆರಿಕದ ರುದ್ರರಮಣೀಯತೆಯನ್ನು ಆರಾಧಿಸಿದವರು. ಇವರೆಂದರೆ, ರಾಲ್ಫ್ ವಾಲ್ಡೊ ಎಮರ್ಸನ್(೧೮೦೩-೧೮೮೨), ಮಾರ್ಗರೆಟ್ ಫುಲ್ಲರ್(೧೮೧೦-೧೮೫೦) ಮತ್ತು ಹೆನ್ರಿ ಡೇವಿಡ್ ಥೋರೋ(೧೮೧೭-೧೮೬೨). ಈ ಮೂವರೂ, ಒಟ್ಟಿಗೆ, ಟ್ರಾನ್ಸೆಂಡೆಂಟಲಿಸ್ಟ್ (ಅತೀಂದ್ರಿಯ ತತ್ವಶಾಸ್ತ್ರಜ್ಞರು) ಎಂದು ಖ್ಯಾತರಾದ ನ್ಯೂ ಇಂಗ್ಲೆಂಡಿನ ಲೇಖಕರು, ಪ್ರಬಂಧಕಾರರು ಮತ್ತು ತತ್ವಜ್ಞಾನಿಗಳು. ಯೂರೋಪಿನ ಮಾದರಿಗಳಿಂದ ಸಾಂಸ್ಕೃತಿಕ ಬಿಡುಗಡೆ ಪಡೆಯಲು ನಡೆದ ಮೊದಲ ಸಾಹಿತ್ಯ ಚಳವಳಿ ಇದು. ಲಾರ್ಝರ್ ಝಿಫ್‌ನ ಸಂಪಾದಕತ್ವದಲ್ಲಿ ಪೆಂಗ್ವಿನ್ ಪ್ರಕಾಶನ ೧೯೮೨ರಲ್ಲಿ ಹೊರತಂದ ರಾಲ್ಫ್ ವಾಲ್ಡೊ ಎಮರ್ಸನ್‌ನ ಆಯ್ದ ಪ್ರಬಂಧಗಳ ಪುಸ್ತಕದಲ್ಲಿ. ಎಮರ್ಸನ್ ೧೮೩೬ರಲ್ಲಿ ಅನಾಮಿಕವಾಗಿ ಪ್ರಕಟಿಸಿದ ಕಿರು ಹೊತ್ತಿಗೆ ನೇಚರ್ ಕೂಡಾ ಸೇರಿದೆ. ಇದು ಆತನ ಧ್ಯಾನಸ್ಥ ಕೃತಿ; ಸ್ವಾಧ್ಯಾಯ ಮೂಲದ್ದು, ತಾತ್ವಿಕವಾದದ್ದು. ಇದು ಪ್ರಾಕೃತಿಕ ಜಗತ್ತು ಆತನ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಹಲವೆಡೆ ನೇರವಾದ, ಶಕ್ತಿಯುತವಾದ ನಾಟಕೀಯತೆಯಿಂದ ಸಮ್ಮಿಳಿತಗೊಳಿಸಿ ಬರೆದ ಕೃತಿ.

'ಸಮಷ್ಟಿಗೆ ಸೇರಿದ ನೆಲದಲ್ಲಿ, ಹಿಮಪಾತ ನಿರ್ಮಿಸಿದ ಕೆಸರುಹೊಂಡಗಳನ್ನು ದಾಟಿ, ಆ ಮೇಘಾಚ್ಛಾದಿತ ಬೈಗಿನಲ್ಲಿ ಮನದಲ್ಲಿ ಯಾವುದೋ ವಿಶೇಷವಾದ ಭಾಗ್ಯ ನನ್ನದಾಗುವುದೆಂಬ ಭಾವನೆಯೊಂದೂ ಮನದಲ್ಲಿಲ್ಲದೆ ನಡೆದಾಗ, ನಾನು ಪರಮಾನಂದವನ್ನು ಅನುಭವಿಸಿದ್ದೇನೆ. ನನಗೆ ಎಷ್ಟು ಸಂತೋಷವಾಗಿದೆಯೆಂದರೆ ಹೆದರಿಕೊಳ್ಳುವಷ್ಟು.'

ಫುಲ್ಲರಳ ಮೊದಲ ಪುಸ್ತಕ Summer on the Lakes, During 1843 ಎಂಬುದು. The Portable

Margaret Fuller. Viking/Penguin, 1994 ಎಂಬ ಗ್ರಂಥದಲ್ಲಿ ಇದು ಸೇರಿದೆ. ತುಂಬ ಸತ್ವಪೂರ್ಣ ಬರೆಹವಿದು. ಆಕೆ ಮುಖ್ಯವಾಗಿ ಅಮೆರಿಕದ ಭೂದೃಶ್ಯ ವೈಭವವನ್ನು ಇದರಲ್ಲಿ ದಾಖಲಿಸಿದ್ದಾಳೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಮೊದಲ ವಿದ್ಯಾರ್ಥಿನಿಯಾದ ನಂತರದಲ್ಲಿ ಕೆಲಕಾಲ ಕಳೆದ ಬಳಿಕ ಬರೆದದ್ದು ಇದು. ಆಕೆ ನಯಾಗರಾವನ್ನು ಕುರಿತು ಬರೆದದ್ದನ್ನು ಗಮನಿಸಿ:

'ಇಲ್ಲಿ ನಿರಂತರ ಸೃಷ್ಟಿಯ ಭಾರದಿಂದ ಬಿಡುಗಡೆಯಿಲ್ಲವಾಗಿ ಎಲ್ಲ ಆಕೃತಿಗಳು ಮತ್ತು ಚಲನೆಗಳು ಹುಟ್ಟುತ್ತವೆ, ಹೋಗುತ್ತವೆ. ಅಲೆ ಉಬ್ಬುತ್ತದೆ, ಇಳಿಯುತ್ತದೆ. ಗಾಳಿ ತನ್ನ ಸಾಮರ್ಥ್ಯದುತ್ತುಂಗದಲ್ಲಿ ರಭಸದಿಂದ ನೂಕುತ್ತದೆ, ನುಗ್ಗುತ್ತದೆ. ಆದರೂ ನಿಜವಾಗಲೂ ಇಲ್ಲೊಂದು ದಣಿಯದ ಚಲನೆಯಿದೆ. ಎಚ್ಚರಿರಲಿ, ನಿದ್ದೆಯಲ್ಲಿರಲಿ ಇದರಿಂದ ಬಿಡುಗಡೆಯಂತೂ ಇಲ್ಲ. ನಿನ್ನ ಸುತ್ತ ಮತ್ತು ನಿನ್ನೊಳಗೆ ಈ ಪ್ರವಾಹವಿದೆ. ಹೀಗೆ ನಾನು ಅದರ ವೈಭವವನ್ನು ನೋಡಿದ್ದೇನೆ. ಅನಂತವಲ್ಲದಿದ್ದರೂ ಚಿರಂತನವಾದದ್ದು.' (ಪುಟ ೭೧)

ಥೋರೋನ ವಾಲ್ಡೆನ್ (Walden, Oxford University Press, Worlds Classics, 1999) ಅವನು ೧೮೪೫ರಿಂದ ಎರಡು ವರ್ಷಗಳ ಕಾಲ ವಾಲ್ಡೆನ್ ಕೊಳದ ತಟದಲ್ಲಿ ಗುಡಿಸಲು ಹಾಕಿಕೊಂಡು ಕಳೆದಿದ್ದ ಕಾಲದ ವೃತ್ತಾಂತ. ವಾಲ್ಡೆನ್ ಕೊಳ ಅವನ ಸ್ವಂತ ಊರು ಮ್ಯಾಸಚೂಸೆಟ್ಸ್‌ನ ಕಾನ್ಕರ್ಡ್‌ಗೆ ಕೆಲವು ಮೈಲಿ ದೂರದಲ್ಲಿತ್ತು. ಪ್ರಾಯಶಃ ಅದು ನಾಗರಿಕ ಬದುಕಿನಿಂದ ಓಡಿಹೋಗಿ ಪ್ರಕೃತಿಗೆ ಮರಳಿ ಹೊಸ ಮನುಷ್ಯನಾಗುವುದನ್ನು ಬಯಸುವ ಮನಸ್ಸಿನ ಉತ್ಕೃಷ್ಟ ಮಾದರಿ. ಓದುಗರ ಸ್ವಭಾವದ ಮೇಲೆ ಯಾವತ್ತೂ ಬಹಳ ತೀವ್ರವಾದ ಪ್ರಭಾವ ಬೀರಿದ ಕೃತಿ ಇದು. ಈ ಮೂರೂ ಪುಸ್ತಕಗಳನ್ನು ಅಮೆರಿಕದ ಪರಿಸರಕೇಂದ್ರಿತ ಸಾಹಿತ್ಯದ ನೆಲೆಗಟ್ಟು ಎಂದು ಭಾವಿಸಲಾಗುತ್ತದೆ.

ಇದಕ್ಕೆ ಹೋಲಿಸಿದರೆ ಬ್ರಿಟನ್ನಿನ ಎಕಾಕ್ರಿಟಿಸಿಸಂ ಅಥವಾ ಹಸಿರು ಓದಿನ ಹುಟ್ಟನ್ನು ೧೮೨೦ರ ದಶಕದ ಬ್ರಿಟಿಷ್ ರೊಮ್ಯಾಂಟಿಸಿಸಂಗೆ ಥಳುಕು ಹಾಕಬಹುದೇ ಹೊರತು ೧೮೪೦ರ ದಶಕದ ಅಮೆರಿಕದ ಅತೀಂದ್ರಿಯ ತತ್ತ್ವಶಾಸ್ತ್ರಕ್ಕಲ್ಲ. ಬ್ರಿಟಿಷ್ ಕಡೆಯ ಎಕಾಕ್ರಿಟಿಸಿಸಂನ ನಿರ್ಮಾತೃ ಜೊನಾಥನ್ ಬೇಟ್. ಈತ Romantic Ecology: Wordsworth and the Environmental Tradition- Routledge, 1991 ಕೃತಿಯ ಲೇಖಕ. ಬ್ರಿಟಿಷ್ ಪರಿಸರವಾದಿ ವಿಮರ್ಶಕರು ತಮ್ಮ ಹಲವಾರು ಆಲೋಚನೆಗಳು ರೇಮಾಂಡ್ ವಿಲಿಯಂಸ್‌ನ The Country and the City (Chatto & Windus, 1973) ಕೃತಿಯಲ್ಲಿ ಎಕಾಕ್ರಿಟಿಸಿಸಂ ಎಂಬ ಮಾತು ಹುಟ್ಟುವ ಮೊದಲೇ ಬಿಂಬಿತವಾಗಿದ್ದವು ಎನ್ನುತ್ತಾರೆ. ಎಕಾಕ್ರಿಟಿಸಿಸಂಗೆ ಬ್ರಿಟನ್ನಿನಲ್ಲಿ ಇದ್ದ ಮೂಲಸೌಲಭ್ಯಗಳು ಅವಕ್ಕೆ ಅಮೆರಿಕದಲ್ಲಿ ಇದ್ದುದಕ್ಕಿಂತ ಕಡಿಮೆ. ಬ್ರಿಟನ್ನಿನಲ್ಲಿ ಅಸ್ಲೆಯ ಶಾಖೆಯೊಂದು ಇದೆ. ಆದರೂ ಅಲ್ಲಿ ಸ್ವದೇಶಿ ಪತ್ರಿಕೆಯಾಗಲಿ, ಪರಿಸರವಾದಿ ವಿಮರ್ಶಕರು ಸದಸ್ಯರಾಗಲು ಔಪಚಾರಿಕವಾದ ಸಂಸ್ಥೆಯಾಗಲಿ ಇಲ್ಲ. ಆದರೂ ಪದವಿ ಮಟ್ಟದಲ್ಲಿ, ವಿಶೇಷವಾಗಿ ಹೊಸ ವಿಶ್ವವಿದ್ಯಾಲಯಗಳಲ್ಲಿ ಮತ್ತು ಉನ್ನತ ವಿದ್ಯಾಭ್ಯಾಸದ ಕಾಲೇಜುಗಳಲ್ಲಿ, ಸಾಂಸ್ಕೃತಿಕ ಪರಿಸರವಾದಕ್ಕೆ ಪ್ರಸ್ತುತವಾದ ವಿಷಯಗಳ ಅಭ್ಯಾಸಕ್ಕೆ ಅವಕಾಶಗಳು ಹೆಚ್ಚುತ್ತಿವೆ. ಸಾಂಸ್ಥಿಕ ಸಹಯೋಗಗಳು ಬದಲಾಗುತ್ತವೆ, ನಿಜ. ಆದರೆ ಈ ಲೇಖನ ಬರೆಯುವ ಕಾಲದಲ್ಲಿ ಲಿವರ್‌ಪೂಲ್ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದ ಬೇಟ್ ಅವರಲ್ಲದೆ ಎಕಾಕ್ರಿಟಿಸಿಸಂನ ಸಕ್ರಿಯ ಬ್ರಿಟಿಷ್ ಪ್ರತಿಪಾದಕರಲ್ಲಿ ಬಹಳ ಮಂದಿ (ಮ್ಯಾಂಚೆಸ್ಟರ್ ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯದ ಲಾರೆನ್ಸ್ ಕೂಪ್, ಬಾಥ್ ಸ್ಪಾ ವಿಶ್ವವಿದ್ಯಾಲಯ ಕಾಲೇಜಿನ ರಿಚರ್ಡ್ ಕೆರ್ರಿಜ್ ಮತ್ತು ಗ್ರೆಗ್ ಗರಾರ್ಡ್, ಮೊದಲು ಚೆಲ್ಟೆನ್

ಬಾಲ್ ಕಾಲೇಜು ಎಂಬುದು ಈಗ ಲೀಡ್ಸ್ ವಿಶ್ವವಿದ್ಯಾಲಯದ ಭಾಗವಾಗಿರುವ ಸಂಸ್ಥೆಯಲ್ಲಿನ ಟೆರ್ರಿ ಗಿಫರ್ಡ್ ಮುಂತಾದವರೆಲ್ಲ) ಅಂತಹ ಸಂಸ್ಥೆಗಳಲ್ಲೇ ಇದ್ದವರು. ಅಮೆರಿಕದ ಚೆರಿಲ್ ಗ್ಲಾಟ್‌ಫೆಲ್ಟಿ ಮತ್ತು ಫ್ರಾಂರವರ ಸಂಕಲನದಷ್ಟೇ ಮಹತ್ವದ ಕೃತಿ ಲಾರೆನ್ಸ್ ಕೂಪ್‌ರ The Green studies Reader: From Romanticism to Ecocriticism (Routledge. 2000) ರಾಷ್ಟ್ರಗಳ ಮಟ್ಟದಲ್ಲಿ ನಿರ್ದಿಷ್ಟವೂ ಭಿನ್ನವೂ ಆದ ಎರಡು ಪರಿಸರವಾದಿ ಮಾರ್ಗಗಳು ಅಸ್ತಿತ್ವದಲ್ಲಿವೆ. ಬ್ರಿಟಿಷ್ ಸಾಂಸ್ಕೃತಿಕ ಉಪಭೋಗವಾದವೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟನೆಗಳೆಲ್ಲವನ್ನು ಚರಿತ್ರೆಯೇ ನಿರ್ಧರಿಸುವುದೆಂಬ ಅಮೆರಿಕದ ನವಚರಿತಾವಾದವೂ ಅವುಗಳ ಮಾರ್ಗ ಮತ್ತು ಧ್ಯೇಯವನ್ನು ಕುರಿತಂತೆ ಬಹಳ ಸ್ಪಷ್ಟವಾದ ಸಂಬಂಧ ಹೊಂದಿವೆ. ಆದರೆ ತಮ್ಮ ಒತ್ತು ಹಾಗೂ ಹುಟ್ಟಿನ ವಿಚಾರದಲ್ಲಿ ಅವು ಭಿನ್ನವಾಗುತ್ತವೆ. ಅಮೆರಿಕನ್ನರ ಆಯ್ಕೆ ಎಕಾಕ್ರಿಟಿಸಿಸಂ ಎಂಬ ಪರಿಭಾಷೆ. ಹಸಿರು ಓದು ಎನ್ನುವ ಪರಿಭಾಷೆ ಬ್ರಿಟನ್ನಿನಲ್ಲಿ ಹೆಚ್ಚು ಪ್ರಚಲಿತವಾಗಿದೆ. ಅಮೆರಿಕನ್ನರ ಬರವಣಿಗೆಯು ಉತ್ಸವದ ದಾರಿ ಹಿಡಿಯುವುದನ್ನು ಕಾಣಬಹುದು, ಎಷ್ಟೆಂದರೆ ಒಮ್ಮೊಮ್ಮೆ ಎಡಪಂಥೀಯರ ವಿರೋಧಿಗಳು ಮಾಡುವ 'ಮರವ ತಬ್ಬುವ ಜನ' ಎಂಬ ವ್ಯಾಖ್ಯಾನದಂತೆ. ಅದೇ ಬ್ರಿಟಿಷ್ ಮಾದರಿಯು ಬೆದರಿಸುವ ಹಾದಿ ಹಿಡಿಯುತ್ತದೆ. ಅದು ಸರ್ಕಾರದ, ಕೈಗಾರಿಕೆಯ, ವಾಣಿಜ್ಯೀಕರಣದ, ಮತ್ತು ನವವಸಾಹತುಶಾಹಿಗಳಿಂದ ಪರ್ಯಾವರಣದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ಕೊಡುತ್ತದೆ. ಉದಾಹರಣೆಗೆ ಬೇಟ್‌ರ ಇತ್ತೀಚಿನ ಪುಸ್ತಕ The Song of the Earth (Picador. 2000). ವಸಾಹತೀಕರಣವೂ, ಅರಣ್ಯನಾಶವೂ ಬಹಳ ಸಲ ಕೈಕೈಹಿಡಿದು ಸಾಗುತ್ತವೆ ಎಂದು ವಾದಿಸುತ್ತದೆ*.

ಸಂಸ್ಕೃತಿ ಮತ್ತು ಪರಿಸರ

ರಾಷ್ಟ್ರಮೂಲ ಮಾದರಿಗಳು, ವೈವಿಧ್ಯಗಳು ಏನೇ ಇರಲಿ, ಯಾವ ಮನೋಧರ್ಮ ಎಕಾಕ್ರಿಟಿಸಿಸಂನ ಪ್ರಮುಖ ಗುಣವಾಗಿದೆ? ನಾವಿಲ್ಲಿ ಎಕಾಕ್ರಿಟಿಸಿಸಂನ ಒಳಗೇ ನಡೆಯುತ್ತಿರುವ ಸಂಸ್ಕೃತಿ ಮತ್ತು ಪರಿಸರದ ನಡುವಣ ಸಂಬಂಧವನ್ನು ಕುರಿತ ಚರ್ಚೆಯ ವ್ಯಾಪ್ತಿಯ ಬಗ್ಗೆ ಚಿಂತಿಸಲಿದ್ದೇವೆ. ಇಲ್ಲಿ ಗಮನಿಸಬೇಕಾದ, ಪ್ರಾಯಶಃ ಅತ್ಯಂತ ಮೂಲಭೂತವಾದ ವಿಚಾರವೆಂದರೆ, ಪರಿಸರವಾದಿ ವಿಮರ್ಶಕರು ಎಲ್ಲವೂ ಸಾಮಾಜಿಕವಾಗಿ ಮತ್ತು/ಅಥವಾ ಭಾಷಿಕವಾಗಿ ರಚನೆಗೊಂಡಿದ್ದು ಎಂಬ ಅಭಿಪ್ರಾಯವನ್ನು ತಳ್ಳಿಹಾಕುತ್ತಾರೆ. ಪರಿಸರವಾದಿ ವಿಮರ್ಶಕನಿಗೆ ಈ ಪರಿಸರದ ಅಸ್ತಿತ್ವ ಸತ್ಯ; ಅದು ಇದೆ ಅಲ್ಲಿ, ಹೊರಗೆ, ನಮ್ಮಿಂದ ಆಚೆಗೂ, ನಮ್ಮನ್ನು ಮೀರಿ; ಅದೊಂದು ಮನೋಭೂಮಿಕೆ ಎಂಬ ವಿಶೇಷ ಸೂಚಿಗಳಲ್ಲಿ ಬಂಧಿಸಿದ ವಿಶ್ಲೇಷಣೆಯ ಅಗತ್ಯವಿಲ್ಲದ; ಸತ್ಯವಾದ, ನಮ್ಮ ಮೇಲೆ ಪರಿಣಾಮ ಬೀರುವ, ಅದನ್ನು ತಪ್ಪಾಗಿ ಕಂಡದ್ದೇ ಆದರೆ ಪ್ರಾಯಶಃ ಅದರ ಅಂತ್ಯವನ್ನೇ ತರುವಷ್ಟು ಪರಿಣಾಮವನ್ನು - ಅದರ ಮೇಲೆ ನಾವು - ಬೀರಬಹುದಾದ ಒಂದು ಅಸ್ತಿತ್ವವಾಗಿ. ಹಾಗಾಗಿ ಪರಿಸರವೆನ್ನುವುದು ನಾವು ನಮ್ಮ ಸಾಂಸ್ಕೃತಿಕ ಆಚರಣೆಗಳ ಭಾಗವೆಂದು (ನಾವು ದೇವತೆಯೊಂದನ್ನು ಕಲ್ಪಿಸಿಕೊಂಡು ಅದನ್ನು ವಿಶ್ವದೊಳಕ್ಕೆ ಬಿಟ್ಟುಕೊಳ್ಳುವ ಹಾಗೆ) ಭಾವರೂಪಕ್ಕೆ ಇಳಿಸಿಬಿಡಬಹುದಾದದ್ದಲ್ಲ. ಸಾಮಾನ್ಯವಾಗಿ ಸಿದ್ಧಾಂತವು ಬಾಹ್ಯ ಪ್ರಪಂಚವನ್ನು ಸಾಮಾಜಿಕವಾಗಿ ಮತ್ತು/ಅಥವಾ ಭಾಷಿಕವಾಗಿ ರಚನೆಗೊಂಡಿದ್ದು ಎಂದು ಪರಿಭಾವಿಸುವ

* ಬೇಟ್ ಬರೆಯುತ್ತಾರೆ, 'ರಾಬರ್ಟ್ ಪೋಗ್ ಹ್ಯಾರಿಸನ್ ತಮ್ಮ ಗಮನಾರ್ಹ ಕೃತಿ Forests: The Shadow of Civilisation ನಲ್ಲಿ ನಿರೂಪಿಸಿರುವಂತೆ ವಸಾಹತೀಕರಣವೂ, ಅರಣ್ಯನಾಶವೂ ಬಹಳ ಸಲ ಕೈಕೈಹಿಡಿದು ಸಾಗುತ್ತವೆ.

ಪ್ರವೃತ್ತಿಯಲ್ಲಿರುತ್ತದೆ. ಇದು ಈಗಾಗಲೆ ಸಾಬಿತ್ತವಾಗಿದೆ ಮತ್ತು ವ್ಯಾಖ್ಯಾನಿಸಲ್ಪಟ್ಟಿದೆ. ಆದರೆ ಎಕಾಕ್ರಿಟಿಸಿಸಂ ಈ ಬಹುಕಾಲ ಕಂಡ ಸೈದ್ಧಾಂತಿಕ ಮಡಿವಂತಿಕೆಯನ್ನು ಕೆಲವೊಮ್ಮೆ ಸಹನೆ ಕಳೆದುಕೊಂಡು ಪ್ರಶ್ನಿಸುತ್ತದೆ. ಉದಾಹರಣೆಯಾಗಿ ನಾವು ಕೇಟ್ ಸಾಫರ್‌ಳ ಬಹು ಉಲ್ಲೇಖಿತ ಮಾತನ್ನು ಗಮನಿಸಬಹುದು. ಆಕೆಯ ಮೌಲಿಕ ಗ್ರಂಥ What is Nature? (p. 151) ನಲ್ಲಿ ಆಕೆ ಹೇಳುತ್ತಾಳೆ, 'ಓಝೋನ್ ಪದರದ ತೂತಿರುವುದು ಭಾಷೆಯಲ್ಲಿ ಅಲ್ಲ' ಎಂದು. ಎಕಾಕ್ರಿಟಿಸಿಸಂ, ಹಾಗಾಗಿ, ಸಾಹಿತ್ಯ ಸಿದ್ಧಾಂತದ ಬಹುಮುಖ್ಯ ಅಂಶವಾದ ರಾಚನಿಕತೆ (constructedness) ಎನ್ನುವ ಸಂಜಿಕೆಯ ಬುನಾದಿಯನ್ನೆ ತಿರಸ್ಕರಿಸುತ್ತದೆ. ಸಾಮಾಜಿಕ ರಾಚನಿಕತೆಯ ಸಾರ್ವತ್ರಿಕತೆಯ ಮೇಲಿನ ನಂಬಿಕೆ, ಅದು ನಿಜವಾಗಿದ್ದರೆ ಅದು ಅರಿಯಲಾಗದ್ದೆ ಆಗಿರುತ್ತಿತ್ತು ಎಂಬ ಆಕ್ಷೇಪಕ್ಕೆ ಯಾವಾಗಲೂ ಒಳಗಾಗಿದೆ. ಏಕೆಂದರೆ ಎಲ್ಲವೂ ಎನ್ನುವ ಪದವೇ ತನ್ನಲ್ಲಿ ಎಲ್ಲವೂ ಸಾಮಾಜಿಕವಾಗಿ ಮತ್ತು/ಅಥವಾ ಭಾಷಿಕವಾಗಿ ರಚನೆಗೊಂಡಿದ್ದು ಎಂಬ ನಂಬಿಕೆಯನ್ನು ಒಡಲಲ್ಲಿ ಇರಿಸಿಕೊಂಡಿದೆ. ೧೯೮೦ರ ದಶಕದಲ್ಲಿ ಸಾಮಾಜಿಕ-ರಚನಕಾರರ ಪಟಾಲಂಗಳು ಎಲ್ಲೆಡೆ ಅಕಡೆಮಿಕ್ ಕಾಲುದಾರಿಗಳನ್ನು ಅಗೆದು ಬದಲಾಯಿಸುವ ದಂಧೆಯಲ್ಲಿ ತೊಡಗಿಕೊಂಡಿದ್ದರು. ಅವರ ಕಾಯಕದ ಬಹುಪಾಲು ಮಾನವಶಾಸ್ತ್ರದಲ್ಲಿ ಪಾಂಡಿತ್ಯದ ಸಾರ್ವಜನಿಕ ಮಾರ್ಗಗಳಾಗಿ ಇನ್ನೂ ಆಯಾ ಜಾಗಗಳಲ್ಲಿ ಇವೆ. ಆದ್ದರಿಂದ ಎಲ್ಲವೂ ಸಾಮಾಜಿಕವಾಗಿ ಮತ್ತು/ಅಥವಾ ಭಾಷಿಕವಾಗಿ ರಚನೆಗೊಂಡಿದ್ದು ಎಂಬ ದೃಷ್ಟಿಕೋನವನ್ನು ಪರಿಶೀಲಿಸಲು ಅಥವಾ ಸುಳ್ಳೆಂದು ಸಾಧಿಸಲು ಕಷ್ಟವಾದರೂ ಸಾಹಿತ್ಯ ಸಿದ್ಧಾಂತ ಕುರಿತ ಅನುದಿನದ ಚರ್ಚೆಯ ಮೇಲಿನ ಅದರ ಹಿಡಿತವನ್ನು ಸಡಿಲಗೊಳಿಸಲಾಗಿಲ್ಲ. ಇದ್ದರೂ ಸಾಹಿತ್ಯ ಸಿದ್ಧಾಂತಕ್ಕೆ ಎಕಾಕ್ರಿಟಿಸಿಸಂನ ಪ್ರವೇಶದ ಧ್ಯೇಯ ಅದಕ್ಕೆ ಸವಾಲೊಡ್ಡುವುದೇ ಆಗಿದೆ.

ಈ ನಿರ್ಣಾಯಕ ಅಂಶವನ್ನು ಗಮನಿಸಿ ಪರಿಸರವಾದಿ ವಿಮರ್ಶಕರು ಪರಿಸರದ ಬಗ್ಗೆ ಮುಗ್ಧ 'ಸಿದ್ಧಾಂತಪೂರ್ವ' ನಂಬಿಕೆಯನ್ನು ಹೊಂದಿದ್ದರು ಎಂದು ಪರಿಗಣಿಸಲು ಬಳಸಲಾಗುವುದಿಲ್ಲ. ಇದೇ ವಿಷಯವನ್ನು ಕುರಿತಂತೆ ಹಲವಾರು ಭಿತ್ತಿರೂಪಿ ಮುಖಾಮುಖಿಗಳು ನಡೆದಿದ್ದವು. ಅವು ಅಧ್ಯಯನಕ್ಕೆ ಪ್ರತಿಫಲದಾಯಕವೂ ಪ್ರಾಮುಖ್ಯತೆಯಲ್ಲಿ ಸಾಹಿತ್ಯ ಸಿದ್ಧಾಂತದ ಮೂಲಭೂತ ವಿಚಾರಗಳನ್ನು ಕುರಿತ ಮುಖ್ಯ ಜಿಜ್ಞಾಸೆಗಳಿಗೆ ಸಮವೂ ಆಗಿದ್ದವು. ೧೯೩೦ರ ದಶಕದಲ್ಲಿ ಎಫ್. ಆರ್. ಲಿವೀಸ್ ಮತ್ತು ರೆನೆ ವೆಲ್ಲೆಕ್‌ರ ನಡುವೆ ನಡೆದ ವಾಗ್ವಾದ ಹಾಗೂ ಎಫ್. ಡಬ್ಲ್ಯು. ಬೇಟಸ್ ಮತ್ತು ರಾಜರ್ ಫಾಲ್ಲರ್ ನಡುವೆ ೧೯೬೦ರ ದಶಕದಲ್ಲಿ ನಡೆದ ಭಾಷಾಶಾಸ್ತ್ರ ಮತ್ತು ಸಾಹಿತ್ಯ ವಿಮರ್ಶೆಯನ್ನು ಕುರಿತ ಚರ್ಚೆಗಳು ಉಲ್ಲೇಖಾರ್ಹ. ಎಕಾಕ್ರಿಟಿಸಿಸಂ ವಿಚಾರದಲ್ಲಿ ನಡೆದ ಬಿಸಿಬಿಸಿ ಚರ್ಚೆಗಳಲ್ಲಿ ಬಿರುಸಿನದು ಅಮೆರಿಕದ ವರ್ಡ್ಸ್‌ವರ್ಥ್ ವಿಮರ್ಶಕ ಅಲಾನ್ ಲಿಯು ಮತ್ತು ಜೊನಾಥನ್ ಬೇಟ್ (Romantic Ecology), ಕಾರ್ಲ್ ಕ್ರೂಬರ್ (Ecological Literary Criticism) ಟೆರಿ ಗಿಫರ್ಡ್ (ಮೂಲತಃ ISLE 1966ರಲ್ಲಿ) ಕೂಡಿದಂತೆ ಹಲವಾರು ಪರಿಸರವಾದಿ ವಿಮರ್ಶಕರ ನಡುವೆ ನಡೆದದ್ದು. ಇದು ಕೂಪ್‌ರ The Green Studies Reader, pp.173-76 ಕೃತಿಯಲ್ಲಿ ಮರುಮುದ್ರಣಗೊಂಡಿದೆ. ಲಿಯು ಅವರ ನಿಲುವಿನ ಮುಖ್ಯ ಅಂಶವೆಂದರೆ ಯಾವುದೋ ಒಂದನ್ನು ಪರಿಸರ ಎಂದು ಕರೆಯುವುದು, ಅದನ್ನು ಸರಳವಾಗಿ ತಮಗೆ ಕೊಡಮಾಡಿದ್ದು ಎಂದು ನೋಡುವುದು - ಇವು ಪರಿಸರವನ್ನು ಹಾಗೆ ಮಾಡಿಟ್ಟ ರಾಜಕಾರಣದಿಂದ ತಪ್ಪಿಸಿಕೊಳ್ಳುವುದು. ಅದು ಹಾಗೂ ಇರಬಹುದು. ಹತ್ತೊಂಬತ್ತನೆಯ ಶತಮಾನದ ಬಹಳ ಪ್ರಸಿದ್ಧವಾಗಿದ್ದ ಸಿ. ಎಫ್ ಅಲೆಕ್ಸಾಂಡರ್ ಬರೆದ ಶಿಶುಗೀತೆ (All things bright and beautiful)ಯಲ್ಲಿ ಮೂಲದಲ್ಲಿ ಕೆಳಗಿನ ಸಾಲುಗಳಿದ್ದವು. (ಅವುಗಳನ್ನು ನಂತರದ ಬಹಳ ಆವೃತ್ತಿಗಳಲ್ಲಿ ಕೈಬಿಡಲಾಗಿದೆ.)

ಸಾಹುಕಾರನು ಬಂಗಲೆಯಲ್ಲಿ
ಬಡಮನುಷ್ಯನು ಗೇಟಿನ ಮುಂದೆ
ಅವನು ಮಾಡಿದನು ಅವರಿಬ್ಬರ ಹಾಗೆ
ಕೊಟ್ಟನು ತಕ್ಕುದ ಅವರಿಬ್ಬರಿಗೆ

ಅಸಮಾನತೆಯನ್ನು ಪರಿಸರೀಕರಣಗೊಳಿಸಿರುವುದನ್ನು ನಾವಿಲ್ಲಿ ಸ್ಪಷ್ಟವಾಗಿ ಕಾಣಬಹುದು. ಅದು ಶಾಬ್ದಿಕವಾಗಿ ಪರಿಸರವೆಂಬ ಛದ್ಮವೇಷ ಧರಿಸಿದೆ. ವಾಸ್ತವವಾಗಿ ಅಸಮಾನತೆಯು ನಿರ್ದಿಷ್ಟವಾದ ರಾಜಕೀಯ ಮತ್ತು ಆರ್ಥಿಕ ವಿನ್ಯಾಸವಾಗಿದ್ದರೂ ಅದನ್ನು ದೇವರು ಕೊಟ್ಟದ್ದೆಂದು, ಅಪರಿಹಾರ್ಯವೆಂದು ನೋಡಲಾಗಿದೆ. ಕಾರ್ಲ್ ಮಾರ್ಕ್ಸರು ತಮ್ಮ Critique of the Hegelian Philosophy of rightನಲ್ಲಿ ೧೮೪೪ರಲ್ಲಿ ಧರ್ಮವು ಜನರಿಗೆ ಅಫೀಮಿನ ಹಾಗೆ ಎಂದು ಹೇಳಿದಾಗ ಅವರ ಮನಸ್ಸಿನಲ್ಲಿ ಇಂತಹ ಭಾವಾತಿರೇಕವಿತ್ತೇನೋ? ಪರಿಸರವನ್ನು ಯಾವುದೇ ಬಗೆಯಲ್ಲಿ ಅವಾಹಿಸಿದರೂ ಅದು ಪರಿಸರದ ಛದ್ಮವೇಷ ಧಾರಣೆ ಮಾಡುತ್ತದೆ ಮತ್ತು ಅಸಮಾನತೆಯನ್ನೂ ಅನ್ಯಾಯವನ್ನೂ ಸಮರ್ಥಿಸುತ್ತದೆ. ಇದು ಅದರ ಪಾರ್ಶ್ವಪರಿಣಾಮ ಎಂಬುವುದು ಎಡಪಂಥೀಯರ ಬಹುಕಾಲದ ಭಾವನೆ. ಹಾಗಾಗಿ ಲಿಯು ಅವರಿಗೆ (ಪೇಟ್ ಆ ನಿಲುವಿನ ಬಗ್ಗೆ ಕೊಟ್ಟ ಅರ್ಥವಿಸ್ತರಣೆ) ಪರಿಸರವೆಂಬುದು ಇಲ್ಲ. ಅದನ್ನೇ ಅನ್ಯಪದಗಳಲ್ಲಿ ಇಡುವುದೆಂದರೆ, ಪರಿಸರವು ವರ್ಡ್ಸ್‌ವರ್ಥ್ ಮತ್ತಿತರರು ಅವರದೇ ಕಾರಣಗಳಿಗಾಗಿ ಮಾಡಿಕೊಂಡ ಮನುಷ್ಯರೂಪಾರೋಪಣೆ. (ಕೂಪ್ ಪು. ೧೭೭) ಲಿ ಯುರ ಈಗ ಕುಖ್ಯಾತವಾಗಿರುವ ಟೀಕೆಯು ಪರಿಸರವಾದಿ ವಿಮರ್ಶೆಯಲ್ಲಿ ಪದೇ ಪದೇ ತೀಕ್ಷ್ಣ ಪ್ರತಿಕ್ರಿಯೆಗಳಿಗೆ ಗುರಿಯಾಗುತ್ತಿದೆ. ವಿರೋಧಾಭಾಸವೆಂದರೆ ಅದೇ ಟೀಕೆಯು ಪರಿಸರವಾದಿ ವಿಮರ್ಶೆಗೆ ತನ್ನ ನಿಲುವನ್ನು ವಿವರಿಸಲು ಮತ್ತು ಅದಕ್ಕೊಂದು ಸ್ಪಷ್ಟ ಸ್ವರೂಪವನ್ನು ಕೊಡಲು ಅಗತ್ಯವಾದ ಅಮೂಲ್ಯ ಚೈತನ್ಯವನ್ನು ಕೊಟ್ಟಿದೆ. ಉದಾಹರಣೆಗೆ ಕ್ರೋಬರ್‌ರ ಪುಸ್ತಕದ Surprised by Nature: Ecology and Cold War Criticism ಎಂಬ ಅಧ್ಯಾಯವನ್ನು ಗಮನಿಸಬಹುದು. 'ಪರಿಸರವೆನ್ನುವುದು ಒಂದು ಹೆಸರು. ನಾವು ಮನುಷ್ಯನನ್ನು ಪ್ರಸ್ತುತಗೊಳಿಸಲು ಮತ್ತು ಮನುಕುಲಕ್ಕೆ ತನ್ನ ಜೊತೆ ತಾನು ನಿರಾತಂಕವಾಗಿರಲು ಅನುವು ಮಾಡಲೋಸುಗ -ಮನುಷ್ಯನಲ್ಲದ- ಅದನ್ನು ನಡುವೆ ನಿಲ್ಲಿಸುತ್ತೇವೆ; ಅದರ ಮಧ್ಯಸ್ಥಿಕೆಯನ್ನು ಬಳಸುತ್ತೇವೆ' ಎಂದ ಲಿ ಯು.(ಕೂಪ್ ಪು. ೧೭೭) ಅವರನ್ನು ನೇರವಾಗಿ ಉಲ್ಲೇಖಿಸುತ್ತಾ ಗಿಫರ್ಡ್ ಪ್ರತಿಕ್ರಿಯಿಸುವುದು ಹೀಗೆ, 'ಪರಿಸರವನ್ನು ಮಧ್ಯಸ್ಥಿಕೆಗೆ ಒದಗುವ ಒಂದು ಹೆಸರು' ಎಂದ ಲಿ ಯು ಸರಿಯಾದದನ್ನೇ ಹೇಳಿದ್ದಾರೆ. ಆದರೆ ಆ ಮಧ್ಯಸ್ಥಿಕೆಯು ಇನ್ನೊಂದು ಪಾರ್ಶ್ವದಲ್ಲಿ ಭೌತಿಕವಾಗಿ ಅಸ್ತಿತ್ವದಲ್ಲಿರುವುದನ್ನು ನಿರಾಕರಿಸುವುದು ಅವರು ಮಾಡಿದ ತಪ್ಪು. ನಿಜಕ್ಕೂ ಪರಿಸರವೆನ್ನುವ ಪದದ ಅರ್ಥ ಸಂಘರ್ಷದ ಪ್ರಮುಖ ಕೇಂದ್ರ ಎಂದು. ರೇಮಾಂಡ್ ವಿಲಿಯಂಸ್‌ರ ಪ್ರಭಾವಶಾಲಿ ಪುಸ್ತಕ- ಸಾಂಸ್ಕೃತಿಕ ಪದಗಳ, ಸಂಸ್ಕೃತಿ ಚರಿತ್ರೆಯ ಚಿಂತನೆಗಳ ಪದಸೂಚಿ 'ಕೀ ವರ್ಡ್ಸ್'-ನಲ್ಲಿ ಸೇರಿರುವ ಪದಗಳಲ್ಲೆಲ್ಲ ಇದು ಅತ್ಯಂತ ದೀರ್ಘವಾದುದು.

ವಾಸ್ತವದ ಸಾಮಾಜಿಕ ಮತ್ತು ಭಾಷಿಕ ರಾಚನೀಕರಣ ಎಂಬ, ಕೆಲವೊಮ್ಮೆ ವಾಸ್ತವದ ಸಮಸ್ಯೆ ಎಂದು ಕರೆಯಲಾಗುವ ವಿಷಯವು ಸಿದ್ಧಾಂತದ ಶೋಧನೆಯಲ್ಲಿ ಗೊಂದಲವನ್ನು ಸೃಷ್ಟಿಸುವ ವಿಚಾರಗಳಲ್ಲಿ ಒಂದಾಗಿದೆ. ಪರಿಸರದ ಬಗೆಗಿನ ದೃಷ್ಟಿ ಭಿನ್ನವಾಗಿರುತ್ತದೆ, ನಿಜ. ಭಿನ್ನ ಮಾದರಿಗಳಲ್ಲಿ ಹಲವು ಸಾಂಸ್ಕೃತಿಕವಾಗಿ ನಿರ್ಧಾರಿತವಾಗಿರುತ್ತವೆ. ಒಂದು ಸಂಗತಿಯು ಬೇರೆ ಬೇರೆ ಸಂಸ್ಕೃತಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಗಮನಿಸಲ್ಪಟ್ಟಿರುತ್ತದೆ ಎನ್ನುವ ವಾಸ್ತವವು ಆ ಸಂಗತಿಯ ಇರುವಿಕೆಯನ್ನು ಪ್ರಶ್ನಿಸುವುದಿಲ್ಲ. ಟೆರ್ರಿ ಗಿಫರ್ಡ್(ಕೂಪ್ ಪು.೧೭೭) ಮಾಡುವಂತೆ ನಾನು ಕೂಡಾ ನನ್ನ ಬಕ್ಕತಲೆಯನ್ನು ನಮ್ಮನ್ನು

ವಾರ್ಧಕ್ಯ, ಪ್ರಬುದ್ಧಮಾನ, ಮತ್ತು ವಿಲಯದ ವೃತ್ತದಲ್ಲಿ ಅಡಕಗೊಳಿಸುವ ನಿಸರ್ಗದ ಮಹಾನ್ ವೃತ್ತಾಂತಕ್ಕೆ ಉದಾಹರಣೆಯಾಗಿ ತೋರಬಹುದಾಗಿದೆ. ನನ್ನಲ್ಲಿ ಸಾಕಷ್ಟು ಲಿಯೋಟಾರ್ಡಿಯನ್ ಅಪನಂಬುಗೆಗಳು ಈ ವೃತ್ತಾಂತಗಳ ಬಗ್ಗೆ ಇದ್ದಾವೆ. ಇದ್ದರೂ, ಅವೇನೂ ಅಷ್ಟು ವ್ಯತ್ಯಾಸವನ್ನು ಉಂಟುಮಾಡುವುದಿಲ್ಲ. ಆದರೂ ಮಾಗುವುದನ್ನು ಒಂದು ವಾಸ್ತವವಾಗಿ ಮತ್ತು ಒಂದು ಮನೋಭಾವವಾಗಿ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಿರೂಪಿಸಲಾಗಿದೆ. ಕೆಲವು ಸಂಸ್ಕೃತಿಗಳಲ್ಲಿ ಅದನ್ನು ಅವಮಾನವಾಗಿ ಕಾಣಲಾಗಿದೆ. ಅಲ್ಲಿ ಅಪರವಯಸ್ಕರು ಯುವಕರ ಮಾತು, ವೇಷಭೂಷಣ, ಅಭಿರುಚಿ ಮತ್ತು ವರ್ತನೆ ಈ ಎಲ್ಲ ವಿಚಾರಗಳಲ್ಲಿಯೂ ಯುವಕರ ಮೇಲೆ ಪ್ರಭಾವ ಬೀರುತ್ತಾರೆ. ಬೇರೆ ಸಂಸ್ಕೃತಿಗಳು ಹಾಗೂ ಬೇರೆ ಕಾಲಮಾನಗಳು ಅದನ್ನು ಜ್ಞಾನ ಮತ್ತು ಅರಿವಿನ ಸೂಚಕವೆಂದು, ಅಂತೆಯೇ ಗೌರವಾನ್ವಿತವೂ, ಮೆಚ್ಚುಗೆಗೆ ಪಾತ್ರವೂ ಆದದ್ದೆಂದು ಕೊಂಡಾಡಿದವು. ಆದ್ದರಿಂದ ಸಾಕ್ರೆಟೀಸನ, ತಂದೆಯಾದ ದೇವರ ಪ್ರಾತಿನಿಧಿಕ ರೂಪವು ಝಗಮಗಿಸುವ ವಸ್ತ್ರವಿನ್ಯಾಸದ, ಎಳೆ ವಯಸ್ಸಿನ ಹೆಣ್ಣು ಗಂಡುಗಳಾಗಿರದೆ ವಯಸ್ಸಾದವರೂ ಉದ್ದ ಬಿಳಿಯ ಗಡ್ಡ ಬಿಟ್ಟವರೂ, ಕೋಮಲ ವಿನ್ಯಾಸದ ಬಟ್ಟೆ ತೊಟ್ಟವರೂ ಆದ ಪುರುಷಾಕೃತಿಯಾದವು; ಅದೇನೋ ವಯಸ್ಸು ಮತ್ತು ಪೌರುಷ ಎರಡೂ ಅನಾದಿ ಕಾಲದ ಜ್ಞಾನ ಮತ್ತು ಅರಿವು ತೊಟ್ಟ ನೈಸರ್ಗಿಕ ಮಾಂಸದ ಬಟ್ಟೆ ಎನ್ನುವಂತೆ. ಆದರೆ ಮಾಗುವ ಕ್ರಿಯೆಯನ್ನು ಕುರಿತ ಈ ಭಿನ್ನವಾದ, ಸಾಂಸ್ಕೃತಿಕವಾಗಿ ನಿರ್ಧರಿಸಲ್ಪಟ್ಟ ಮಾರ್ಗಗಳು ಇದು 'ಸಾಮಾಜಿಕವಾಗಿ ಸಂರಚನೆಗೊಂಡದ್ದು' ಅಥವ ನಿಸರ್ಗದ ರೀತಿಯಲ್ಲ, ಬದಲಿಗೆ ಸಂಸ್ಕೃತಿಯ ಭಾಗ ಎನ್ನುವ ಮಾತುಗಳನ್ನು ಅನುಸರಿಸುವುದಿಲ್ಲ. ಅಂತಹ ಮಾತುಗಳೇನಾದರೂ ಇದ್ದರೆ ಅವನ್ನು ರೂಪಕಗಳಾಗಿ, ಅತ್ಯುಕ್ತಿಯಾಗಿ ಪರಿಭಾವಿಸಬೇಕು. ಅವು ಸತ್ಯದ ಒಂದು ಅಂಶದ ಕಡೆಗೆ ದೃಷ್ಟಿಯನ್ನು ಕೊಂಡೊಯ್ಯುತ್ತವೆ. ಹಾಗೆಂದು ಅವನ್ನು ಅಕ್ಷರಶಃ ಸತ್ಯವೆಂದೇ ಪರಿಭಾವಿಸಬಾರದು. ಅವು ಸಿನಿಮಾ ಪ್ರಚಾರಕ್ಕೆಂದು ನಟರ ಬಗ್ಗೆ ಆಡಿದ ಹೇಳಿಕೆಗಳಾಗಬಾರದು. ಮರ್ಲನ್ ಬ್ರ್ಯಾಂಡೋನನ್ನು ಗಾಡ್‌ಫಾದರ್ ಎಂದು ಕರೆದ ಹಾಗೆ. ಸಾಹಿತ್ಯ ಸಿದ್ಧಾಂತವನ್ನು ಬೋಧಿಸುವಾಗ ನಾವು ಬಹುಶಃ ಹೀಗೆ ಮಾಡುವುದಿಲ್ಲ. ನಾವು ಅಲ್ಲಿ ನಮ್ಮ ಕರ್ತವ್ಯವಂತೆ ಸತ್ಯ ಮತ್ತು ಸಾದೃಶ್ಯಗಳನ್ನು ನಿರ್ದಿಷ್ಟಪಡಿಸಿರುತ್ತೇವೆ. ಏಕಾಕ್ರಿಟಿಸಿಸಂನ ಒಂದು ಸ್ವಾಗತಾರ್ಹ ಪಾರ್ಶ್ವ ಪರಿಣಾಮವೆಂದರೆ ಅದು ಈ ಅತಿಮುಖ್ಯ ವಿಚಾರವನ್ನು ಮುಂದೆ ತರುತ್ತದೆ. ಹಾಗಾಗಿ ಅದನ್ನು ಕುರಿತ ನಮ್ಮ ಆಲೋಚನೆಗಳಲ್ಲಿರುವ ಗೊಂದಲ ಅಸ್ಪಷ್ಟತೆಗಳನ್ನು ತಡವಾಗಿಯಾದರೂ ಪರಿಹರಿಸಿಕೊಳ್ಳಲು ಅವಕಾಶ ಒದಗಿಸುತ್ತದೆ.

ಇದಕ್ಕೆ ಸಂಬಂಧಿಸಿದ ಇನ್ನೊಂದು ವಿಚಾರವೆಂದರೆ ಭೇದವು ತಾನು ಯಾವಾಗಲೂ- ಪರಿಸರ/ಸಂಸ್ಕೃತಿಯ ಭಿನ್ನತೆಯಂತೆ- ಸ್ಪಷ್ಟವೂ ಸಂಪೂರ್ಣವೂ ಆಗಿಲ್ಲ. ಅದ್ದರಿಂದಲೇ ಅದು ಸ್ವಯಂ ವಿರೋಧಾಭಾಸವಾಗಿ ನಿರಚನಗೊಳ್ಳುತ್ತದೆಯೇ ಎನ್ನುವುದು. ಏಕಾಕ್ರಿಟಿಸಿಸಂ ಇದಕ್ಕೂ ಪರಿಹಾರ ನೀಡುತ್ತದೆ. ಒಂದು ನೆಲೆಯಿಂದ ಇದನ್ನು ಸರಳವಾಗಿ ಉತ್ತರಿಸಬಹುದು. ಒಂದೇ ಕಾಲದಲ್ಲಿ ಬಹು ಬಗೆಯ ಮಧ್ಯಂತರ ಅವಸ್ಥೆಗಳು ಅಸ್ತಿತ್ವದಲ್ಲಿದ್ದರೂ ಅವು ಈ ಭೇದವನ್ನು ನಿಕೃಷ್ಟಗೊಳಿಸುವುದಿಲ್ಲ ಎಂಬುದು ಸತ್ಯ. ಆದರೆ ಅದು ಬಿಳಿ ಮತ್ತು ಕಪ್ಪಿನ ನಡುವೆ ಇರುವ ವ್ಯತ್ಯಾಸವನ್ನು ಅಸ್ಥಿರಗೊಳಿಸುವುದಿಲ್ಲ. ಇದನ್ನು ಏಕಾಕ್ರಿಟಿಸಿಸಂಗೆ ನೇರವಾಗಿ ಸಂಬಂಧಿಸಿದ ವಿಷಯವೆಂದು ಪರಿವರ್ತಿಸಿದ್ದೇ ಆದರೆ ನಾವು, ಈ ಪರಿಸರ ಮತ್ತು ಸಂಸ್ಕೃತಿ ಹಾಗೂ ಅವೆರಡನ್ನೂ ಪಾಲುಮಾಡಿಕೊಳ್ಳುವ ವ್ಯವಸ್ಥೆ ಈ ಮೂರೂ ಸತ್ಯವೆಂದು ಹೇಳಬಹುದು. ಉದಾಹರಣೆಗೆ, ನಾವು ಹೊರಗಿನ ಪರ್ಯಾವರಣವೆಂದು ಕರೆಯುವ ಅದು ನಿಜಕ್ಕೂ ಒಂದರ ಮೇಲೊಂದು ಹರಡಿಕೊಂಡು ಹೋಗುವ ಪ್ರದೇಶಗಳಾಗಿದ್ದು ಕ್ರಮೇಣ ಪರಿಸರದಿಂದ ಸಂಸ್ಕೃತಿಗೆ ಹೀಗೆ ಚಲಿಸುತ್ತದೆ:

ಪ್ರದೇಶ ೧ : ಕಾಡು(ಉದಾ: ಮರುಭೂಮಿ, ಸಾಗರಗಳು, ವಾಸವಿಲ್ಲದ ಖಂಡಗಳು)

ಪ್ರದೇಶ ೨ : ಸುಂದರ ಮಹೋನ್ನತ ದೃಶ್ಯಗಳು (ಅರಣ್ಯಗಳು, ಕೊಳಗಳು, ಪರ್ವತಗಳು, ಕಡಿದಾದ ಗಿರಿಶಿಖರಗಳು, ಜಲಪಾತಗಳು)

ಪ್ರದೇಶ ೩ : ಹಳ್ಳಿಗಳು (ಬೆಟ್ಟಗಳು, ಹೊಲಗಳು, ವನಗಳು)

ಪ್ರದೇಶ ೪ : ಮನೆಗಳ ಚಿತ್ತಾಕರ್ಷಕ ನೋಟಗಳು (ಉದ್ಯಾನಗಳು, ತೋಟಗಳು ಮತ್ತು ರಸ್ತೆಗಳು)

ನಾವು ಮಾನಸಿಕವಾಗಿ ಈ ಪ್ರದೇಶಗಳಲ್ಲಿ ಸುತ್ತಲು ಹೊರಟಾಗ ಮೊದಲಿನ ಶುದ್ಧ ಪರಿಸರದಿಂದ ಮೊದಲಿಟ್ಟು ಯಾವುದು ಪ್ರಮುಖವಾಗಿ ಸಂಸ್ಕೃತಿ ಎಂದಾಗುವುದೋ ಅಲ್ಲಿಗೆ ತಲುಪುತ್ತೇವೆ. ಕಾಡು ಭೂಗೋಳವು ಚಿಕ್ಕದಾಗುತ್ತಿರುವುದರಿಂದ ಅಪಾಯವನ್ನೆದುರಿಸುತ್ತದೆ. ಇದು ಸಂಸ್ಕೃತಿಯ ಪ್ರಭಾವ. ತೋಟಗಳು ನೈಸರ್ಗಿಕ ಶಕ್ತಿಯಾದ ಸೂರ್ಯರಶ್ಮಿಯನ್ನು ಅವಲಂಬಿಸುತ್ತವೆ, ಆದರೆ ಮಾನಸರೂಪಿಯಾಗಿರುವಂತಹ ಪರಿಸರ ಅಥವಾ ಸಂಸ್ಕೃತಿಗಳು ಅದರಿಂದ ಅನೂರ್ಜಿತವಾಗುವುದಿಲ್ಲ. ಅಲ್ಲದೆ ಮಧ್ಯದಲ್ಲಿರುವ ಎರಡು ಪ್ರದೇಶಗಳು ಪರಿಸರದ ಹಾಗೂ ಸಂಸ್ಕೃತಿಯ ಅಂಶಗಳನ್ನ ಬೇರೆ ಬೇರೆ ಪ್ರಮಾಣದಲ್ಲಿ ಒಳಗೊಂಡಿರುತ್ತವೆ. ಅವುಗಳೊಳಗಿನ ಘಟಕಗಳನ್ನು ನಾವು ಹೇಗೆ ವರ್ಗೀಕರಿಸಬೇಕು? ಪರ್ವತಗಳು ಪ್ರದೇಶ ೧ಕ್ಕೆ, ಬೆಟ್ಟಗಳು ಪ್ರದೇಶ ೨ಕ್ಕೆ ಸಲ್ಲಬಹುದೇ? ಪರಿಸರ ಹಾಗೂ ಸಂಸ್ಕೃತಿ ಮೂಲಭೂತವಾಗಿ ಭಿನ್ನವಾಗಿವೆ ಎಂಬ ನಂಬಿಕೆಯನ್ನು ಇಂತಹ ವಿಚಾರಗಳು ಅಲುಗಾಡಿಸುತ್ತದೆ ಎಂದು ಭಾವಿಸಬಾರದು. ಮೇಲೆ ಉಲ್ಲೇಖಿಸಿದ ನಾಲ್ಕೂ ಪ್ರದೇಶಗಳು ನಿಜಕ್ಕೂ ಬೇರೆ ಬೇರೆ ಪ್ರಮಾಣದಲ್ಲಿ ಅಥವಾ ಬಗೆಯಲ್ಲಿ ಸಂಸ್ಕೃತಿಯೇ ಎಂದು ತೋರಿಸಲು ಸಾಧ್ಯವಾದರೂ ಸಹ ಅದರಿಂದ ಪರಿಸರವೇ ಇಲ್ಲವೆಂದು ಸಾಧಿಸಲಾಗದು. ಅಂತೆಯೇ, ತುಂತುರು ಹನಿಯು ಒಂದು ಬಗೆ ಮಳೆಯೇ ಎನ್ನುವುದು ತುಂತುರು ಹನಿಯು ಮಳೆಯಲ್ಲ ಎಂದಾಗಲಿ, ನಾವು ಅದನ್ನು ಮಳೆ ಎಂದೋ ತುಂತುರು ಹನಿ ಎಂದೋ ಕರೆದರೆ ಅದರಲ್ಲಿ ಯಾವುದೇ ವ್ಯತ್ಯಾಸವಾಗದು ಎಂದಾಗಲಿ ಅರ್ಥವಲ್ಲ.

ನಾಲ್ಕು ಪರ್ಯಾವರಣ ಪ್ರದೇಶಗಳಿಗೆ ಮರಳಿ ನೋಡಿದರೆ ಪರಿಸರ ಸಾಹಿತ್ಯವೆನ್ನುವುದರ ಬಹುಭಾಗ ನಡುವಣ ಎರಡನ್ನು ಹೆಚ್ಚಿಗೆ ಗಮನಿಸಿದೆ ಎನ್ನುವುದು ಅರ್ಥವಾಗುತ್ತದೆ. ೧೮ನೆಯ ಶತಮಾನದ ಭೂ ಪ್ರದೇಶದ ವರ್ಣನೆಯನ್ನು ಗಮನಿಸಬಹುದು. ಜೇಮ್ಸ್ ಥಾಮ್ಸನ the seasons, 1730, ಥಾಮಸ್ ಗ್ರೇನ Elegy in a Country Churchyard 1785, ವಿಲಿಯಂ ಕೌಪರ್‌ನ The Task 1785, ಇವರು ಪ್ರದೇಶ ೩ನ್ನು ತಮ್ಮ ಮೆಚ್ಚಿನ ತಾಣಗಳಾಗಿ ಸ್ವೀಕರಿಸಿದ್ದರು. ಅದೇ ಬ್ರಿಟಿಷ್ ರೊಮ್ಯಾಂಟಿಕ್ ಸಾಹಿತ್ಯ, ವರ್ಡ್ಸ್‌ವರ್ತ್‌ನ ಪ್ರಿಲ್ಯೂಡ್(೧೮೦೫)ನಂತೆ, ಪ್ರದೇಶ ೨ರ ಮೇಲೆ ಕೇಂದ್ರೀಕೃತವಾಗಿತ್ತು. ಆದರೆ ಅಮೆರಿಕದ ೧೯ನೇ ಶತಮಾನದ ಅತೀಂದ್ರಿಯ ತತ್ತ್ವಜ್ಞಾನಶಾಖೆಯ ಸಾಹಿತ್ಯವು ಪ್ರಮುಖವಾಗಿ ಪ್ರದೇಶ ೧ರಲ್ಲಿ ಮನ ನೆಟ್ಟಿತ್ತು (ಪರ್ವತ ಶ್ರೇಣಿಗಳು, ಹುಲ್ಲುಗಾವಲುಗಳು, ಮಹತ್ತರ ಜಲಪಾತಗಳು, ಆಕಾಶವೂ ಸಹ) ಥೋರೋನ ಪ್ರಬಂಧ ವಾಕಿಂಗ್ ಈ ವಿಚಾರಗಳನ್ನು ಕುರಿತು ಚರ್ಚಿಸುತ್ತದೆ. 'ಕಾಡುಮೇಡುಗಳ ಕುರಿತ ಅದಮ್ಯ ಹಂಬಲವನ್ನು ಸಮರ್ಪಕವಾಗಿ ಅಭಿವ್ಯಕ್ತಿಸಿರುವ ಯಾವುದೇ ಕಾವ್ಯವಿರುವುದು ನನಗೆ ಗೊತ್ತಿಲ್ಲ' ಎಂದು ಆತ ಬರೆಯುತ್ತಾನೆ. ಪ್ರದೇಶ ೩ ಮತ್ತು ೪ ಬಹುಪಾಲು ಕೌಟುಂಬಿಕ ಕಥೆ ಕಾದಂಬರಿಗಳಿಗೆ ಮತ್ತು ಗೇಯ ಕಾವ್ಯಕ್ಕೆ ಭಿತ್ತಿಯಾಗಿವೆ. ಆ ಎರಡೂ ಪ್ರಕಾರಗಳು ಮನುಷ್ಯ ಸಂಬಂಧವನ್ನು

ಕೇಂದ್ರವಾಗಿರಿಸಿಕೊಂಡಿದ್ದರೆ ಮೊದಲಿನೆರಡು ಪ್ರದೇಶಗಳು ಮಹಾಕಾವ್ಯಗಳಿಗೂ ವೀರಗಾಥೆಗಳಿಗೂ ಭಿತ್ತಿಗಳಾದವು. ಅವು ಮನುಷ್ಯರ? ಶಕ್ತಿಗಳ ನಡುವಿನ ಸಂಬಂಧವನ್ನು ಕೇಂದ್ರವಾಗಿರಿಸಿಕೊಂಡಿವೆ. (ವಿಧಿ, ಅದೃಷ್ಟ, ಅರ್ಚನಾದೇವ-ದೇವತೆಗಳು) ಹಾಗೆಯೇ ಪ್ರೊಮೀಥಿಯಸ್ ಶೌರ್ಯಗಾಥೆಗಳೂ. ಇವುಗಳಲ್ಲಿ ಮನುಷ್ಯ ತನ್ನ ಮಿತಿ ಮತ್ತು ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡುತ್ತಾನೆ. ಉದಾಹರಣೆಗೆ ಮಿಲ್ಟನ್ ಕವಿಯ ಪ್ಯಾರಡೈಸ್ ಲಾಸ್ಟ್, ಮೇರಿ ಶೆಲ್ಲಿಯ ಫ್ರಾಂಕೆನ್‌ಸ್ಟೈನ್ ಮತ್ತು ಹರ್ಮನ್ ಮೆಲ್ವಿಲ್ಲೆಯ ಮೋಬಿ ಡಿಕ್ ಮುಂತಾದವು. ತಮ್ಮನ್ನು ತಾವು ಅರಸುವ ಇವರು ಗೊಂಡಾರಣ್ಯವನ್ನು ಸಹಜ ಪ್ರವೃತ್ತಿಯಂತೆ ಪ್ರವೇಶಿಸುತ್ತಾರೆ. ಮೋಸೆಸ್ ಪರ್ವತವನ್ನೇರಿ ಹತ್ತು ಕಟ್ಟಾಜ್ಞೆಗಳನ್ನು ಸ್ವೀಕರಿಸುತ್ತಾನೆ. ಕ್ರಿಸ್ತ ಪ್ರಾರ್ಥಿಸಲು ಗೊಂಡಾರಣ್ಯವನ್ನು ಹೊಗುತ್ತಾನೆ. ಆದಿಯಲ್ಲಿ ದೀಕ್ಷೆ ಪಡೆದಾತನು ಪೊದೆಗಳಲ್ಲಿ [Austral] Nomadic excursions into the bush made by an Abongine) ಅಲೆದಾಡುವುದು, ಹಕ್ ಫಿನ್ ದೇಶದೇಶಗಳಿಗಾಗಿ ಬೆಳಕನ್ನು ಹಿಡಿಯುವುದು, ಹೀಗೆಯೆ. ಈ ಜಾಗಗಳು ನಮಗಾಗಿ ಒಂದು ವಿಶೇಷ ಕರ್ತವ್ಯ ನಿರ್ವಹಿಸುವಂತೆ ತೋರುತ್ತದೆ. ಅದು ನಮಗೆ, ನಮ್ಮ ಸುಖ ಸಂತೋಷಕ್ಕೆ ಅತ್ಯಗತ್ಯವಾದವು. ಹಾಗೆನ್ನುವಾಗ ನಾವು ಅದನ್ನು ಮನುಷ್ಯಕೇಂದ್ರಿತ ದೃಷ್ಟಿಯಲ್ಲಿ ನೋಡುತ್ತಿದ್ದೇವೆ; ಅದು ನಮಗಾಗಿಯೇ ಇರುವುದು ಎನ್ನುವಂತೆ. ಈ ಅಭಿಪ್ರಾಯವನ್ನು ಸಮಗ್ರ ಜೀವಪರಿಸರಶಾಸ್ತ್ರವು ವಿರೋಧಿಸುತ್ತದೆ. ಪರಿಸರವಾದಿ ವಿಮರ್ಶಕರು ಮತ್ತೆ ಮತ್ತೆ ಹೇಳುವ ವಿಚಾರವೆಂದರೆ, ಮಾನವಕುಲದ ಇತಿಹಾಸದಲ್ಲಿ ಮೊದಲ ಬಾರಿಗೆ ಭೂಗ್ರಹದ ಮೇಲೆ ನಿಜವಾದ ಅರಣ್ಯವೆನ್ನುವುದು ಇಲ್ಲವಾಗಿದೆ ಎನ್ನುವುದು. ಏಕೆಂದರೆ ಭೂಮಿಯ ಮೇಲಿನ ಎಲ್ಲ ಪ್ರದೇಶಗಳೂ ಬಿಸಿಯೇರುವಿಕೆಯಿಂದ ಮತ್ತು ವಿಷವಸ್ತು ತ್ಯಾಜ್ಯ, ಅಣುಶಕ್ತಿಯ ಬಳಕೆಯ ಪರಿಣಾಮ ಮುಂತಾದ ಮಾನವ ನಿರ್ಮಿತ ಸಮಸ್ಯೆಗಳಿಂದಾಗಿ ತೊಂದರೆಗೀಡಾಗಿವೆ. ಇವುಗಳ ಕುರಿತ ನಮ್ಮ ಗ್ರಹಣಶಕ್ತಿ ಬೇರೆ ಬೇರೆ ಮಟ್ಟದ್ದಾಗಿರಬಹುದು. ಆದರೆ ನಾವು ಕನಿಷ್ಠ ಒಂದನ್ನು ಒಪ್ಪಿಕೊಳ್ಳಲೇಬೇಕು. ಲಿಂಗ, ಕುಲ, ಮತ್ತು ವರ್ಗ ಇವೆಲ್ಲ ಸಾಹಿತ್ಯ ಮತ್ತು ವಿಮರ್ಶೆಗಳಿಗಿರುವ ಜರೂರುಗಳನ್ನು, ಕಾಳಜಿಗಳನ್ನು ಮೀರಲಾರವು. ಸಾಮಾಜಿಕ ಪರಿಸರವಾದಿಗಳು (Social ecologists) ಮತ್ತು ಪರಿಸರ ಸ್ತ್ರೀವಾದಿಗಳು (eco feminists) ಪರಿಸರ ವಿಜ್ಞಾನದಿಂದ ಪ್ರೇರಿತವಾದ ಮುನ್ನೋಟ ಮತ್ತು ಕಾರ್ಯಕ್ರಮಗಳ ಜೊತೆ ಇಂತಹ ಕಾಳಜಿಗಳನ್ನು ಬೆಸೆಯಲು ಬಯಸುತ್ತಾರೆ. ಅದು ಸರಿಯಾಗೇ ಇದೆ. ಲಿಂಗ, ಕುಲ, ವರ್ಗದಂತಹ ಎಡೆಗಳಲ್ಲಿ ಆಗುವ ಅನ್ಯಾಯವನ್ನು ಸರಿಪಡಿಸಲು ವಿಮರ್ಶಕರು ಮತ್ತು ಸೈದ್ಧಾಂತಿಕರು ಹೊಂದುವ ದೇಣಿಗೆ ಕೊಡುವ ಆಕಾಂಕ್ಷೆಯು ಹೊಗಳಿಕೆಗೆ ಅರ್ಹವಾದದ್ದು. ಆದರೆ, ಇವುಗಳಲ್ಲಿ ಭಿನ್ನತೆಯನ್ನು ಕಾಣುವುದು ನಾಶ ಪರ್ಯಾವರಣಕ್ಕೆ ಒದಗಲಿರುವ ದುರಂತವನ್ನು ಸಂಭಾಳಿಸಬಲ್ಲೆವು ಎಂಬ ಭ್ರಮೆಯನ್ನು ಒಳಗೆ ಇರಿಸಿಕೊಂಡಿರುತ್ತದೆ. ಮತ್ತು ಇದೇ ಅಸೂಕ್ಷ್ಮ ಮತ್ತು ವಿವೇಕತನವಿಲ್ಲದ್ದು. ಅನ್ಯತಃ ಇದು ಹಡಗು ಮಂಜುಗಡ್ಡೆಯತ್ತ ಧಾವಿಸುತ್ತಿರುವಾಗ ಸಿಬ್ಬಂದಿಗೆ ಕೆಲಸ ಮಾಡಲು ಒಳ್ಳೆಯ ವಾತಾವರಣವನ್ನು ನಿರ್ಮಿಸಿಕೊಡಲು ಚಿಂತಿಸುವಂತೆ.

ವಿಮರ್ಶೆಯ ಒಳಗನ್ನು ಹೊರಗು ಮಾಡುವುದು

ಒಂದು ಸಾಹಿತ್ಯ ಕೃತಿಯನ್ನು ಪರಿಸರ ವಿಮರ್ಶೆಯ ನೆಲೆಯಿಂದ ಓದುವ ಕ್ರಿಯೆ, ಕೆಲವು ಬಗೆಯಲ್ಲಿ ನಾವು ಇಲ್ಲಿಯವರೆಗೂ ಚರ್ಚಿಸುತ್ತಿದ್ದ ವಿಚಾರಗಳನ್ನು ಕಾಳಜಿಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡಿರುತ್ತದೆ. ಆದರೆ, ನಾವು ಸರಳವಾಗಿ ಕಲಿತು ಆಚರಣೆಗೆ ತರುವಂತಹ ಸಾರ್ವತ್ರಿಕ ಮಾದರಿ ಯಾವುದೂ ಇಲ್ಲ. ಬಹುಮಟ್ಟಿಗೆ ಪರಿಚಿತ ಪಠ್ಯವನ್ನು ಹೊಸ ಎಚ್ಚರ ಮತ್ತು ಹೊಸ ಆಯಾಮಗಳೊಂದಿಗೆ ಪ್ರವೇಶಿಸುವುದಷ್ಟೆ

ಪ್ರಾಯಶಃ, ಈ ಆಯಾಮವು ಸದಾ ಪಠ್ಯದ ಸುತ್ತಲು ಸುತ್ತುತ್ತಿತ್ತು. ನಾವು ಅದನ್ನು ಸರಿಯಾಗಿ ಗಮನಿಸದೇ ಹೋಗಿದ್ದೆವು. ರಾಲ್ ಡಬ್ಲ್ಯು ಬ್ಲ್ಯಾಕ್ What we talk about when we talk about ecocriticism ಎಂಬ ಹೆಸರಿನ ಕಿರುಲೇಖನದ ಪ್ರಾರಂಭದಲ್ಲಿ ಬರೆದ ಮಾತುಗಳನ್ನು ಇದಕ್ಕೆ ದೃಷ್ಟಾಂತವಾಗಿ ನೀಡಬಹುದು.

'ಕೆಲವು ದಿನಗಳ ಹಿಂದೆ ನಾನು ಕಿಂಗ್ ಲಿಯರ್ ನಾಟಕವನ್ನು ಪುನಃ ನೋಡಿದೆ, ಪೊಲಿವಿಯರ್ ಮಾಡಿದ ಲಿಯರ್. ಎಂದಿನಂತೆ ನಾನು ಲಿಯರ್‌ನ ತೀವ್ರ ಕೋಪೋದ್ರೇಕವನ್ನೂ ಮತ್ತೂ ತೀವ್ರವಾದ ದುಃಖವನ್ನೂ ನೋಡಿ ಬೆರಗಾದೆ. ಅವನು ಕಾರ್ಡೀಲಿಯಾಳ ದೇಹವನ್ನು ಹೊತ್ತು ರಂಗದ ಆ ಬದಿಗೆ ಹೋಗುವಾಗ ಎಂದಿನಂತೆಯೇ ಅತ್ತೆ. ಆದರೆ ನಾನು ಮೊದಲ ದೃಶ್ಯ ನೋಡಿಯೇ ಅವಾಕ್ಕಾಗಿದ್ದೆ: ಸಾಮ್ರಾಜ್ಯದ ನಕಾಸೆಯನ್ನು ಇಳಿಬಿಡಲಾಯಿತು. ಅದನ್ನು ಜಿಂಕೆಗಳ ಚಿಕ್ಕ ಹಿಂಡಿನ ಹಿನ್ನೆಲೆಯ ಚಿತ್ರದಗಲಕ್ಕೂ ಬಿಡಿಸಲಾಗಿತ್ತು. ಮುದುಕ ಅರಸ ತನ್ನ ಮಕ್ಕಳಿಗೆ ಸಾಂಕೇತಿಕವಾಗಿ ಸಾಮ್ರಾಜ್ಯವನ್ನು ಹಂಚಲು ಕತ್ತಿಯನ್ನು ಬಳಸುತ್ತಾನೆ. ಮಕ್ಕಳು ತಮ್ಮ ಪ್ರೀತಿಯ ಉತ್ಕಟತೆಯನ್ನು ತೋರುವುದಕ್ಕೆ ಅಥವಾ ನಿರಾಕರಿಸುವುದಕ್ಕೆ ಮೊದಲೇ. ಇದೊಂದು ಅತಿಕ್ರಮಣ. ಸರಕಿನಂತೆ ಆಗಿಹೋದ ಭೂಪ್ರದೇಶವನ್ನು ತುಂಡು ಮಾಡಿ ಅತಿ ಹೆಚ್ಚು ಕರೆದ ವಾಗ್ಮಿ ಸವಾಲುದಾರನಿಗೆ ಮೂಟೆಕಟ್ಟಿ ಕಳುಹಿಸುತ್ತಿದ್ದಾನೆ. ಒಂದು ಕ್ಷಣ ನಾನು ಅರ್ಥಮಾಡಿಕೊಂಡ ರೀತಿಯನ್ನು ಕುರಿತು ನನಗೇ ಆಶ್ಚರ್ಯವಾಯಿತು. ಅದೆಂತಹ ದುರಹಂಕಾರದ ನಡೆ ಲಿಯರ್‌ನ ಪತನಕ್ಕೆ ಕಾರಣವಾಯಿತು ಎನ್ನುವುದು. ನಾಟಕದಲ್ಲಿ ಇರುವ ನೈಸರ್ಗಿಕ ಪ್ರಪಂಚ, ಹೊರಗೆ ಘಟಿಸುವುದು ಅನ್ನಿಸುತ್ತಿದ್ದ ಆ ಕ್ಷಣಗಳ ನಷ್ಟತೆ ?ಬಿರುಗಾಳಿಯಲ್ಲಿ, ಲಂಗರಿನ ಮೇಲೆ, ಸಾಗರತಡಿಯಲ್ಲಿ.'

ಈ ಪ್ರಾಸ್ತಾವಿಕ ಮಾತುಗಳು ಒಂದು ವಿಚಾರದತ್ತ ನಮ್ಮ ಗಮನ ಬೇಡುತ್ತವೆ. ಲಿಯರ್ ನಾಟಕದ ಈ ಓದು ಸ್ಪಷ್ಟವಾಗಿ ಎಲ್ಲದಕ್ಕಿಂತ ಬೇರೆಯೇ ಆದ ರುಚಿ ಹೊಂದಿದೆ. ಅದನ್ನು ಪರಿಸರದ ನೆಲೆಯಲ್ಲಿ ಪರಿಭಾವಿಸಲಾಗಿದೆ ಎನ್ನುವ ಕಾರಣದಿಂದಾಗಿ ಅಲ್ಲ. ಬದಲಿಗೆ ನಾಟಕದಲ್ಲಿ ಇದುವರೆಗೆ ನೋಡಲಾಗಿರುವ ಎಲ್ಲ ಮಿಕ್ಕ ವಿಚಾರಗಳ ಸಾಂಪ್ರದಾಯಿಕ ಮಾರ್ಗದ ಜೊತೆಗೆ ಮೊಟ್ಟಮೊದಲಿಗೆ ಇದನ್ನು ಸೇರಿಸಲಾಗಿದೆ ಎನ್ನುವ ಕಾರಣಕ್ಕೆ. ಈ ಓದು ನಮಗೆ ನೆನಪಿಸುವುದೇನೆಂದರೆ ಕಾರ್ಡೀಲಿಯಾಗೆ, ಆಕೆ ಅವಳ ತಂದೆ ಅವಳಿಂದ ಬಯಸುವುದನ್ನು ನುಡಿದಿದ್ದರೆ, ಅವಳಿಗೆ ಲಭ್ಯವಿರುವ ಸಾಮ್ರಾಜ್ಯದ ತುಂಡು (ಅತಿ ಸಿರಿವಂತವಾಗಿರುವುದರಲ್ಲಿ ಮೂರನೆಯದು) ನಿಜವಾಗಲು ಜನರಿರುವ ನೆಲ- ಬೆಟ್ಟಗಳು, ಹೊಲಗಳು, ನದಿಗಳು, ಜನ ಸಮುದಾಯಗಳು- ತಮಗೆ ತಮ್ಮದೆನ್ನುವ ಯಾವುದೇ ಹಕ್ಕಿಲ್ಲದೆ, ತಮ್ಮದೆನ್ನುವ ಯಾವುದೇ ಸ್ವರೂಪವಿಲ್ಲದೆ ಚಕ್ರವರ್ತಿಯ ಕ್ಷಣದ ನಿರ್ಧಾರದಲ್ಲಿ ಹರಿದು ಚಿಂದಿಯಾಗುವವು ಅವು. ಹಾಗೆಯೇ ಲಿಯರ್ ತನ್ನ ಹುಚ್ಚುತನವನ್ನು ಅಭಿನಯಿಸುವ ನಾಶವಾದ ಬರಡುನೆಲ -blasted heath- ಅಲ್ಲೇ ಆ ಸಾಮ್ರಾಜ್ಯದಲ್ಲಿಯೇ ಎಲ್ಲೋ ಇರುವಂತಹ ನಿಜವಾದ ತಾಣ. ಲಿಯರ್‌ನ ಅವಿವೇಕದ ಆಡಳಿತದ ಅಸಡ್ಡೆ ಮತ್ತು ಅದು ತಂದ ವಿನಾಶ ಆ ಬರಡುತನದ ರೂಪಕದಲ್ಲಿ ನಿಕ್ಷೇಪವಾಗಿರುವುದನ್ನು ಕಾಣಬಹುದು. ಬಿರುಗಾಳಿಯೂ ಲಿಯರ್‌ನ ಹುಚ್ಚಿಗೆ ಪ್ರತೀಕವಷ್ಟೇ ಅಲ್ಲ, ಅದು ನಿಜವಾದ ಹವಾಮಾನ ಕೂಡ. ಅದು ಅವನ ಅಸ್ವಾಭಾವಿಕ ನಡವಳಿಕೆಯು ಹೊಂದಾಣಿಕೆಗೆ ಬರಲು ಸಾಧ್ಯವಾಗದ ಸ್ವಾಭಾವಿಕ ಪ್ರಕ್ರಿಯೆಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ಅವನ ಮುಪ್ಪು, ಅದರಿಂದಾಗಿ ಅವನನ್ನು ಕಡೆಗಣಿಸುತ್ತಿರುವ ಅವನ ನಂತರದ ಪೀಳಿಗೆ ಎಲ್ಲ ಮುದುಕರೂ ಲಿಯರ್‌ಗಳೇ ಎಂದು ಟಾಲ್‌ಸ್ಟಾಯ್ ಹೇಳಿದ್ದರು. ಫ್ರಾಯ್ಡ್ ಕೂಡಾ ಲಿಯರ್ ನಾಟಕವನ್ನು ಕೌಟುಂಬಿಕ ನಾಟಕದ ಮೂಲಮಾದರಿಯಂತೆ ನೋಡಿದ್ದ) ಧಾರ್ಮಿಕ ಕೃತಿಗಳನ್ನು ಪರಿಸರವಾದಿ ವಿಮರ್ಶೆಯ ನೆಲೆಯಿಂದ ಓದುವುದು ಅದಕ್ಕೆ ಪ್ರಾರಂಭಕ್ಕೇ ಬೇರೆ ಒಂದು

ಆಯಾಮವನ್ನು ಸೇರಿಸುತ್ತದೆ. ಅದು ಹೊರನೋಟಕ್ಕೆ ಪರಿಸರವನ್ನು ಕುರಿತದ್ದು ಎಂದು ತಿಳಿದುಬರುವ ಕೃತಿಗಳಿಗಷ್ಟೇ ಸೀಮಿತವಲ್ಲ.

ಇಲ್ಲಿ ಪ್ರಸ್ತಾಪಿಸಿರುವ ಲಿಯರ್ ನಾಟಕದ ಓದನ್ನು ಕುರಿತ ಅಭಿಪ್ರಾಯಕ್ಕೆ ಮೌಲಿಕವಾದ ಇನ್ನೊಂದು ಗುಣವೂ ಇದೆ. ಅದೆಂದರೆ ಇದು ಓದಿನ ಸಾಂಪ್ರದಾಯಿಕ ರೀತಿಯ ಒಳಗನ್ನು ಹೊರಕ್ಕೆ ಸೆಳೆದುಬಿಡಲು (ಮಾತಿಗೆ ಹೇಳುವುದೆಂದರೆ) ಪ್ರಯತ್ನಿಸುತ್ತದೆ. ಈ ಮಾತಿನ ಅರ್ಥ ಇದರ ಹಂಚಿಕೆ ವಿಮರ್ಶೆಯ ಗಮನವನ್ನು ಅಂತರಂಗದಿಂದ ಬಾಹ್ಯಕ್ಕೆ ಸೆಳೆಯುವುದು. ಇದರಿಂದ ಯಾವುದು ಖಾಲಿ ನೆಲೆಯಲ್ಲಿ ನಿಂತುಬಿಟ್ಟಿತ್ತೋ ಅದನ್ನು ವಿಮರ್ಶೆಯ ಗಡಿಯಿಂದ ವಿಮರ್ಶೆಯ ಕೇಂದ್ರಕ್ಕೆ ಬಿಟ್ಟುಕೊಳ್ಳುವುದು (ಅದರಿಂದ ಬಿರುಗಾಳಿಯು ಬಿರುಗಾಳಿಯಾಗಿಯೇ ಇರುತ್ತದೆ, ಲಿಯರ್‌ನ ತಲೆಯಲ್ಲಿ ನಡೆಯುತ್ತಿದ್ದ ತುಮುಲಕ್ಕೆ ರೂಪಕವಾಗುವುದಿಲ್ಲ). ಈ ಮುಖ್ಯವಾದ ನಡೆಯನ್ನು-ಒಳಗಿನದಕ್ಕೆ ಹೊರಗಿನದಕ್ಕಿಂತ ಹೆಚ್ಚು ಪ್ರಾಶಸ್ತ್ಯ ಕೊಡಲು ಒಪ್ಪದಿರುವುದನ್ನು-ನಾನು ಇನ್ನೊಂದು ಪಠ್ಯವನ್ನು ಉದಾಹರಣೆಯಾಗಿ ಇಟ್ಟುಕೊಂಡು ಸ್ವಲ್ಪ ದೀರ್ಘವಾಗಿಯೇ ವಿವರಿಸಲು ಬಯಸುತ್ತೇನೆ. ಇದರ ಉದ್ದೇಶ ನಿಮ್ನಗೊಳಿಸುವ ಕೆಲಸವಲ್ಲ: ನಮ್ಮ ಸಾಹಿತ್ಯ ವಿಮರ್ಶೆಯ ಧಾತುವಾದ ಸಂಕೀರ್ಣತೆ ಅದರಿಂದ ಫಲವತ್ತಾಗುತ್ತದೆಯೆ ವಿನಃ ದುರ್ಬಲಗೊಳ್ಳುವುದಿಲ್ಲ ಎನ್ನುವುದನ್ನು ಸಾರಿಹೇಳುವುದು. ನಾನು ಇಲ್ಲಿ ಈ ಉದ್ದೇಶಕ್ಕೆ ಬಳಸುತ್ತಿರುವ ಪಠ್ಯ ಎಡ್ಗರ್ ಅಲನ್ ಪೋ ಅವರ ಪ್ರಖ್ಯಾತ ಕಥೆ The Fall of the House of Usher ಈ ಕಥೆಯಲ್ಲಿ ರಾಡೆರಿಕ್ ಅಶರ್ ಮತ್ತು ಅವನ ಸೋದರಿ ಮ್ಯಾಡೆಲಿನ್ ಪುರಾತನವಾದ, ಕುಸಿಯುತ್ತಿರುವ, ಜನವಸತಿಯಿಂದ ಬಹು ದೂರವಿರುವ ಅಶರ್‌ನ ಮನೆಯಲ್ಲಿ ಒಂದು ಬಗೆಯ ಸ್ವ ಪ್ರೇರಣೆಯಲ್ಲಿ ಗೃಹಬಂಧನದಲ್ಲಿ ಕಳೆಯುತ್ತಾರೆ. ಆ ಮನೆ ಒಂದು ಕೊಳದ ಬದಿಯಲ್ಲಿದೆ. ಆ ಕೊಳ ನೋಡಲು ಅನಿಷ್ಟದಂತಿದೆ. ಕಪ್ಪಗೆ, ಹಾವಿನ ಬಣ್ಣ ಅದರದು. ನಿಶ್ಚಲ ಹೊಳೆವ ನೀರು. ಆ ಮನೆಯ ಪಕ್ಕದಲ್ಲಿದೆ ಆ ಕೊಳ. ಅವನ ಸೋದರಿಗೆ ವಿಚಿತ್ರವಾದೊಂದು ನವೆಯುಹೋಗುವ ರೋಗ ತಗುಲುತ್ತದೆ. ಸ್ವತಃ ಉದಾತ್ತನೂ ಧಾರ್ಮಿಕನೂ ಆದ ಅಶರ್‌ನ ಇಂದ್ರಿಯಗಳಿಗೆ ತೀವ್ರತೆಯ ಗೀಳು ಹಿಡಿಯುತ್ತದೆ, ಅದರಿಂದ ಅವನು ನಿಸರ್ಗದತ್ತವಾದ ಯಾವುದರ ಸಂಪರ್ಕವನ್ನೂ ಸಹಿಸಲಾರ. ಎಲ್ಲ ಹೂಗಳ ಪರಿಮಳವೂ ಹಿಂಸಿಸುತ್ತದೆ. ಕ್ಷೀಣವಾದ ಬೆಳಕೂ ಕಣ್ಣು ಚುಚ್ಚುತ್ತದೆ. ಅವನಾಚೆಗಿನ ವಿಶ್ವದ ಜೊತೆ ಅವನ ಸಂಪರ್ಕವೇನಿದ್ದರೂ ಕಲೆಯ ಮೂಲಕ. ನಿರೂಪಕ ಅವನನ್ನು ಮೊದಲು ಕಂಡಾಗ 'ಅನೇಕ ಪುಸ್ತಕಗಳು, ಸಂಗೀತ ವಾದ್ಯಗಳು ಚೆಲ್ಲಾಪಿಲ್ಲಿ ಬಿದ್ದಿದ್ದವು. ಆದರೆ ಅವು ಆ ಸ್ಥಳಕ್ಕೆ ಯಾವುದೇ ಚೈತನ್ಯ ಕೊಡಲು ಸೋತಿದ್ದವು.'

ಈ ಕಥೆಯನ್ನು ಸಾಮಾನ್ಯವಾಗಿ ಓದುವುದು ಅಶರ್‌ನ ಮನಸ್ಸಿನ ರೋಗಗ್ರಸ್ತತೆಯ ಮೇಲೆ ಹಾಗೂ ನಿರೂಪಕನ ಆಗಮನದ ನಂತರ ಮ್ಯಾಡೆಲಿನ್ ಹೇಗೆ ಪತನಗೊಳ್ಳುತ್ತಾಳೆ ಎನ್ನುವುದರ ಮೇಲೆ ಗಮನವಿಟ್ಟು. ಅವಳು ಅಕಾಲಿಕವಾಗಿ ಸಾಯುವುದನ್ನು, ಅವಳ ಸಮಾಧಿ ನೇರವಾಗಿ ನಿರೂಪಕನ ಕೋಣೆಯ ಕೆಳಗೆ ಇರುವುದನ್ನು ನಿರೂಪಕ ವಿವರವಾಗಿ ಹೇಳುತ್ತಾನೆ. ಹಾಗೆಯೇ ಅವಳ ಪುನರಾವತಾರವನ್ನೂ ವರ್ಣಿಸುತ್ತಾನೆ. (ಅವನು ಅಶರ್‌ನಿಗೆ ಒಂದು ಭಯಂಕರ ಕಾದಂಬರಿಯ ಪುಟಗಳನ್ನು ಓದಿ ಹೇಳುತ್ತಾನೆ. ಆ ಕಥಾನಕವು ಅವನ ಕೋಣೆಯ ಕೆಳಗೇ ನಡೆಯುತ್ತಿರುವ ಸಾವು ಮತ್ತು ಪುನರುಜ್ಜೀವನದ ರುದ್ರನಾಟಕದ ಕಥೆಗೆ ಸಾದೃಶ್ಯ ಹೊಂದಿದೆ. ಪುನರುಜ್ಜೀವನಗೊಂಡ ಸೋದರಿಯನ್ನು ಕಂಡಾಗ ಮಾನಸಿಕವಾಗಿ ರೋಗಗ್ರಸ್ತನಾಗಿದ್ದ ಅಶರ್‌ನಿಗೆ ಆದ ಆಘಾತ ಅವನನ್ನು ಕೊಲ್ಲುತ್ತದೆ. ಅನಾಮಧೇಯ ನಿರೂಪಕನ ಉಪಸ್ಥಿತಿಯಲ್ಲಿ ಇವೆಲ್ಲ ಘಟಿಸುವುದರಿಂದ ಅಶರ್ ಮತ್ತು ಮ್ಯಾಡ್ಲಿನ್ ನಿರೂಪಕನ ಭಾಗವೇ

ಆಗಿದ್ದಾನೆಂದು, ಅಂದರೆ ಅವನ ವ್ಯಾಪಾರಿಕತೆಯ ಒಳಗಿದ್ದ ಸುಪ್ತಪ್ರಜ್ಞೆಯಾಗಿರುವುದೆಂದು ಗ್ರಹಿಸುವುದು ಸಾಮಾನ್ಯ. ಇದೊಂದು ಸಾಮಾನ್ಯವಾದ ಸಾಹಿತ್ಯ-ವಿಮರ್ಶೆಗಳ ಹೂಟ. ಇಲ್ಲಿ ಹೊರಗಿನದನ್ನು (ಪಾತ್ರಗಳು, ವಸ್ತುಗಳು, ಸನ್ನಿವೇಶಗಳು ಅಥವಾ ಘಟನೆಗಳು) ಒಳಗಿನದಾಗಿ (ಸುಪ್ತಪ್ರಜ್ಞೆಯ ಘಟಕಗಳು) ಗ್ರಹಿಸಲಾಗುತ್ತದೆ.

ಪರಿಸರ ಕೇಂದ್ರಿತ ಓದು, ಹೋಲಿಕೆಯಲ್ಲಿ ಮನೆ ಮತ್ತು ಪರಿಸರವೇ ಮುಂತಾದ ಬಾಹ್ಯ ವಿಚಾರಗಳ ಮೇಲೆ ಲಕ್ಷ್ಯವಿರಿಸುತ್ತದೆ; ಮನೆಯ ಮಾಲಿಕ ಮತ್ತು ಅವನ ಮನಸ್ಸು ಮುಂತಾದ ಆಂತರಿಕ ವಿಚಾರಗಳ ಮೇಲಲ್ಲ. ಅದು ಚೈತನ್ಯ, ಜಡತೆ, ಮತ್ತು ಸಹಜೀವನ(ಪರಸ್ಪರ ಪೂರಕವಾದ, ಜೊತೆಯಲ್ಲಿ ಬಾಳುವ ವ್ಯವಸ್ಥೆ)ದಂತಹ ವಿಚಾರಗಳನ್ನು ಬಳಸಿಕೊಳ್ಳುತ್ತದೆ. ಆದ್ದರಿಂದ ಮನೆ ಎನ್ನುವುದು ಜಡವಾದ ವ್ಯವಸ್ಥೆಯಾಗಿ ಪ್ರತ್ಯೇಕವಾಗಿ ಇರುತ್ತದೆ. ಅದಕ್ಕೆ ವಿಸ್ತಾರವಾದ ಜೀವಗೋಳದ ಜೊತೆ ಸಹಬಾಳ್ವೆಯ ಸಂಬಂಧಗಳು ಇರುವುದಿಲ್ಲ. ನಿಶ್ಚಲ ನಿಂತ ಕೊಳವು ಆ ಮನೆಯ ಅಚೇತನ ರೂಪವನ್ನು ಪ್ರತಿಫಲಿಸುತ್ತದೆ. ಆ ಮನೆ ವಾತಾವರಣದಲ್ಲಿನ ತನ್ನದೇ ಅವಸಾನದ ಗಾಳಿಯನ್ನು ಉಸಿರಾಡುತ್ತದೆ. ಆ ಅವರದೇ ವಾತಾವರಣ. ಕ್ರಮೇಣ ಆದರೆ ವಿಚಿತ್ರವಾಗಿ ನೀರಿನ ಮತ್ತು ಗೋಡೆಗಳ ಸುತ್ತಲು ನಿಂತು ಹೆಪ್ಪುಗಟ್ಟುವಂಥದು. ಅದಕ್ಕೆ ಅವರದೇ ಆದ, ಪ್ರವೇಶರಹಿತ ಸೂಕ್ಷ್ಮ ಹವಾಗುಣವಿದೆ. ಪರಾಕಾಷ್ಠೆ ಸಮೀಪಿಸುತ್ತಿದ್ದಂತೆ ಅದು ಅವರದ್ದೇ ಆದ, ಬಂಧಿಸಿಟ್ಟಿದ್ದ ಹಾಗೂ ಭಂಗಗೊಂಡ ಶಕ್ತಿಗಳ ಹಂಡೆಯಲ್ಲಿ ಕುದಿಯುತ್ತಿರುವಂತೆ ತೋರುತ್ತದೆ. ಅಶರ್ ಮತ್ತು ನಿರೂಪಕ ಕಿಟಕಿಯಾಚೆ ನೋಡಿದಾಗ ಕಾಣುವುದು ಸಾಂದ್ರತೆ ಮಿತಿಮೀರಿದ ಮೋಡಗಳು. (ಅವು ಎಷ್ಟು ಕೆಳಗೆ ತೇಲುತ್ತಿದ್ದವೆಂದರೆ ಅವರ ಮನೆಯ ಉಪ್ಪರಿಗೆಯನ್ನು ಅವು ಅಮುಕುತ್ತಿದ್ದವು.) ಅವು ಒಂದನ್ನೊಂದು ನಾನಾ ದಿಕ್ಕುಗಳಿಂದ ಎದುರಾಗಿ, ರಭಸದಿಂದ ಜೀವಸದೃಶ ವೇಗದಲ್ಲಿ ಮುತ್ತುತ್ತಿದ್ದವು. ಆದರೂ ಅವು ಬಹುದೂರವೇನೂ ಸಾಗಿ ಹೋಗುತ್ತಿರಲಿಲ್ಲ. ಆ ಮೋಡಗಳ ಸಾಂದ್ರತೆ ಮತ್ತು ವೇಗವನ್ನು ಗ್ರಹಿಸಿಕೊಳ್ಳಲು ನಮಗೆ ಅಡ್ಡಿಯೇನೂ ಆಗಿರಲಿಲ್ಲ. ಅಶರ್‌ನ ಮನೆ ಹಾಗಾಗಿ ಬದುಕಿರುವ ವ್ಯವಸ್ಥೆಯ ಭಾಗವಾಗಿ ಇರಲಿಲ್ಲ, ಅದಕ್ಕೆ ಚೈತನ್ಯ ತರುವ ಮತ್ತು ತನ್ಮೂಲಕ ಅನ್ಯ ವ್ಯವಸ್ಥೆಗಳಿಗೆ ಅದು ಯಾವ ಕೊಡುಗೆಯನ್ನಾದರೂ ಕೊಡುವಂತೆ ಮಾಡುವ ಹೊರಗಿನ ಯಾವುದೇ ಧಾತುಗಳು ಅವರ ಒಳಕ್ಕೆ ಪ್ರವೇಶಿಸುತ್ತಿರಲಿಲ್ಲ. ಅದು ಬೆಳಗಲು ವಿಫಲವಾದ ಬೆಳಕು, ಹರಿವು ಮರೆತ ತೊರೆ, ಉರಿಯಲು ಏನೂ ಇಲ್ಲದ ಕೊರಡು, ಸುವಿಶಾಲವಾದ ಜೀವಶಕ್ತಿಗೆ ವಿಮುಖವಾದ ಅವರ ಆತ್ಮನಿರತ ತಾಟಸ್ಥ್ಯ ಅವನ್ನು ಒಂದು ಬಗೆಯ ಕಪ್ಪು ರಂಧ್ರವನ್ನಾಗಿ ಮಾಡಿಟ್ಟಿದೆ. ಆ ಕಪ್ಪು ರಂಧ್ರ ಒಂದು ರಭಸದಿಂದ ಸುತ್ತುವ ಸುಳಿಯಾಗಿ ಮಾರ್ಪಟ್ಟಿದೆ. ಅದರೊಳಕ್ಕೆ ಅದರಲ್ಲಿ ಶಕ್ತಿಗಳೂ ಸೆಳೆಯಲ್ಪಟ್ಟು ನಾಶಗೊಂಡಿವೆ. ಕಿಟಕಿಯಿಂದಾಚೆ ನೋಡಿದ ನಿರೂಪಕ 'ಸ್ಪಷ್ಟವಾಗಿ ತೋರುತ್ತೆ ಸುಂಟರಗಾಳಿಯೊಂದು ನಮ್ಮ ಸನಿಹದಲ್ಲೇ ಶಕ್ತಿಯನ್ನು ಸಂಚಯಿಸಿಕೊಂಡಿದೆ' ಎಂದು ಹೇಳುತ್ತಾನೆ. ನಮ್ಮ ಮುಂದೆ ಕೊನೆಗೆ ಆ ಕಪ್ಪು ಕೊಳದೊಳಕ್ಕೆ ಕುಸಿದು ಕರಗಿಹೋಗುವ ಮನೆಯಿದೆ. ಎಲ್ಲಕ್ಕಿಂತ ಭಯಂಕರ ಅಶರ್‌ನ ಮನಸ್ಸು. ಅದರಿಂದ ಸಹಜವೂ ಧನಾತ್ಮಕವೂ ಆದ ಗುಣದಂತೆ ಕತ್ತಲು ಹರಿದುಬಂತು. ಅದು ಅಖಂಡವಾದ ಅಂತ್ಯಕಾಣದ ಮಬ್ಬಿನ ಪ್ರಭಾವಳಿಯಂತೆ ಹೊಮ್ಮಿ ನೈತಿಕ ಮತ್ತು ಭೌತಿಕ ವಿಶ್ವಗಳ ಎಲ್ಲ ಕಾಯಗಳ ಮೇಲೂ ಥಟ್ಟನೆ ಕವಿದುಬಿಟ್ಟಿತು. ಹಾಗಾಗಿ ಅಶರ್ ಪ್ರಸರಿಸುವುದು ಶಕ್ತಿಯನ್ನಲ್ಲ, ಜಡತ್ವವನ್ನು. ಸಿಡಿದ ತಾರೆಯೊಂದು ತನ್ನ ಅಂತ್ಯದ ಕಡೆಗೆ ತಾನೇ ಧಾವಿಸುವಂತೆ. ಹೆದರಿಕೆಯ ವಿಚಾರವೆಂದರೆ ಅವನು ಇಡೀ ಸಂಸ್ಕೃತಿ, ಪ್ರಕೃತಿಯಲ್ಲ; ಅವನು ಬೆಳಕಿಗೆ ಅಂಜುವವನು. ನೈಸರ್ಗಿಕ ಬೆಳಕನ್ನು ಅವನು ತಾಳಿಕೊಳ್ಳಲಾರ. ಬದಲಿಗೆ ವರ್ಣಚಿತ್ರಗಳಲ್ಲಿನ ಬಿಂಬಿತ ಬೆಳಕನ್ನು ಅವನು ಇಚ್ಛಿಸುತ್ತಾನೆ. ಅವನು

ಸಹಜವಾದ ಸದ್ದನ್ನೂ ತಾಳಲಾರ; ಅವನಿಗೆ ಸಂಗೀತದ ಸಂಸ್ಕರಿತ ಸದ್ದು ಬೇಕು. ಇಲ್ಲಿ ಅನಾವರಣಗೊಂಡಿದ್ದೇನು, ಹಾಗಾದರೆ? ಅದು ಸರಿಪಡಿಸಲಾಗದಷ್ಟು ವಿನಾಶಗೊಂಡ ಪರಿಸರ ಜಗತ್ತು, ನಿಸರ್ಗ ವ್ಯವಸ್ಥೆ. ಅದಿಲ್ಲಿ ಸಾವಿನ ಹೊಸ್ತಿಲಲ್ಲಿದೆ, ತಣ್ಣಗಾಗುತ್ತಿರುವ ಗ್ರಹವದು. ತಾನೇ ಪುಡಿಯಾಗಿ ಅದರಲ್ಲೇ ಸಿಲುಕಿಕೊಂಡದ್ದು. ಅದು ಭಾವಶುದ್ಧಿಯ ಅಥವಾ ಪುನರುಜ್ಜೀವನದ ಎಲ್ಲ ಸಾಧ್ಯತೆಗಳೂ ಮುಚ್ಚಿಹೋದದ್ದು. ಈ ಓದಿನ ಬಳಿಕ ಕಥೆಯ ತಿರುಳು ಆತ್ಮವೊಂದರ ಕಾರಿರುಳಲ್ಲ; ಅದು ಒಳಗೊಳ್ಳುವ ವಿವೇಕದ ಪ್ರಶ್ನೆಗಳೂ ಅಲ್ಲ. ಬುದ್ಧಿಪೂರ್ವಕವಾಗಿ ತಂದುಕೊಂಡ ಪರಿಸರ ದುರಂತದ ಕೊನೆಗಾಣದ ಇರುಳು, ಅಣು ಚಳಿಗಾಲ ಅಥವಾ ಸೌರ ಬಳಲಿಕೆ. ಇದು ಸಾಂಪ್ರದಾಯಿಕ ಓದು ಸೃಷ್ಟಿಸುವ ತಲ್ಲಣಗಳಿಗಿಂತ ಹೆಚ್ಚು ಭಯಭೀತಗೊಳಿಸುವ ಕಥೆ. ಏಕೆಂದರೆ ನಿರೂಪಕ ಕುಸಿಯುತ್ತಿರುವ ಮನೆಯಿಂದ ಓಡಲು ಪ್ರಾರಂಭಿಸುವಾಗ ಅವನಿಗೆ ಹೋಗಲು ಜಾಗವೇ ಇರುವುದಿಲ್ಲ.

ನಿಲ್ಲು, ಯೋಚಿಸು

ನಾನು ಕೆಲಸ ಮಾಡುವ ಕಾಲೇಜಿನಲ್ಲಿ ವಿಭಾಗಗಳ ಕಚೇರಿಗಳಿಗೆ ಹಾಕಿರುವ ಡೋರ್‌ಲಾಕ್‌ಗಳು ಅಂತರ್ಬೋಧ ವಿರೋ ರಚನೆಗಳು. ಬೀಗ ತೆಗೆಯಲು ಕೀಲಿಯನ್ನು ಬಾಗಿಲ ಕಂಬದ ಕಡೆ ತಿರುಗಿಸಬೇಕು, ಆಚೆಗಲ್ಲ. ಇದರ ಪರಿಣಾಮವೆಂದರೆ ಪ್ರತಿಬಾರಿ ಬಾಗಿಲ ಬೀಗ ತೆರೆಯುವಾಗಲು ನೀವು ಜಾಗರೂಕರಾಗಿದ್ದು ಅಂತರ್ಬೋಧೆಯ ಅನುಸಾರ ಮಾಡಬೇಕಿರುವ ಕೆಲಸವನ್ನು ಅದಕ್ಕೆ ವಿರುದ್ಧವಾಗಿ ಮಾಡಬೇಕು. ಪರಿಸರವಾದಿ ವಿಮರ್ಶೆಯು ನಮಗೆ ಬಾಗಿಲು ತೆರೆಯಲು ಬೇಕಾದ ಕೀಲಿಗಳನ್ನು ಒದಗಿಸಿದೆ. ಆದರೆ ಅವುಗಳಲ್ಲಿ ಬಹಳ ಅಂತರ್ಬೋಧ ವಿರೋ ತಳಹದಿಯವು. ನಾನು ಈ ಮೂಲಕ ಹೇಳಲಿರುವುದು ಏನೆಂದರೆ ನಾವು ನಮ್ಮ ಅನುದಿನದ ಬದುಕಿನಲ್ಲಿ ಸರಿ ಅಥವಾ ಸತ್ಯ ಎಂದು ಭಾವಿಸುವ ವಿಚಾರಗಳನ್ನೇ ವಿರೋಸುವಂತೆ ಕಾಣುವ ಸ್ಥಾನಗಳಲ್ಲಿ ಅವುಗಳನ್ನು ಸ್ಥಾಪಿಸಲಾಗಿರುತ್ತದೆ. ಏಕಾಕೃತಿಟಿಸಿನಂತೆ ವಿಚಾರದಲ್ಲಿ ನಾವು ವಿರೋಸಬೇಕಾಗಿರುವುದು ಬಹಳ ಕಾಲದಿಂದಲೂ ಇರುವ, ಅಕವಾಗಿ ನಮ್ಮ ಪ್ರಜ್ಞೆಯಲ್ಲಿ ಬೇರೂರಿರುವ ಪಶ್ಚಿಮ ಸಂಸ್ಕೃತಿ ಪರಂಪರೆಯ ಮನುಷ್ಯಕೇಂದ್ರಿತ ಧೋರಣೆಗಳನ್ನು. ಅವು ಧಾರ್ಮಿಕವೂ, ಮನುಷ್ಯಪರವೂ ಆಗಿವೆ. ಅವುಗಳನ್ನು ಬಹುಪಾಲು ಸರ್ವೇ ಸಾಧಾರಣವಾದ ಮಾತು ಮತ್ತು ಉಲ್ಲೇಖಗಳನ್ನು ಹೊದಿಸಿ ಪ್ರತಿಮೆಯಂತೆ ಸ್ಥಾಪಿಸಲಾಗಿದೆ. ಅದರಿಂದಲೇ ಕ್ರಿಸ್ತಪೂರ್ವ ೫ನೇ ಶತಮಾನದ ಗ್ರೀಕ್ ತತ್ತ್ವಜ್ಞಾನಿ ಪ್ರೋತಾಗೊರಾಸ್ ಬಹಳ ಪ್ರಸಿದ್ಧ ಮಾತೊಂದನ್ನು ಹೇಳಿದ: ಮನುಷ್ಯ ಎಲ್ಲದಕ್ಕೂ ಮಾಪಕ ಎಂದು. ನಮ್ಮನ್ನು ಈ ಮಾತು ತುಂಬ ಭರವಸೆಯಿಂದ ಎಲ್ಲದರ ಕೇಂದ್ರದಲ್ಲಿ ನಿಲ್ಲಿಸಿಬಿಡುತ್ತದೆ. ಬೈಬಲ್‌ನ ಬುಕ್ ಆಫ್ ಜೆನೆಸಿಸ್‌ನಲ್ಲಿ ಹೇಳುವಂತೆ ಮನುಷ್ಯನಿಗೆ ಸಾಗರದ ಮೀನಿನ ಮೇಲೆ, ಆಕಾಶದ ಹಕ್ಕಿಯ ಮೇಲೆ ಮತ್ತು ನೆಲದ ಮೇಲೆ ಸರಿಯುವ ಎಲ್ಲ ಜೀವರಾಶಿಗಳ ಮೇಲೆ ಅಧಿಕಾರ ನೀಡಲಾಗಿದೆ. ಹಾಗೆಯೇ ಲಿಯನಾರ್ಡೋ ದ ವಿನ್ಸಿಯ ಪ್ರಖ್ಯಾತ ಕೃತಿ The Virtuous Man -ಶೀಲವಂತ ಮನುಷ್ಯ- ಚಿತ್ರ. ಇದು ಮನುಷ್ಯ ದೇಹದ ಪ್ರಮಾಣವೇ ಎಲ್ಲ ಜ್ಯಾಮಿತಿಯ ಆಕಾರಗಳಿಗೆ ಮೂಲವೆಂದು ನೋಡುತ್ತದೆ. ಹಾಗಾಗಿ, ಊಹಿಸಬಹುದಾಗಿ, ಕಣ್ಣು ತಣಿಸುವ ಎಲ್ಲ ಆಕಾರಗಳು ಮಾನವರೂಪಿಯಾಗಿಯೇ ಇರುತ್ತವೆ. (ಚಿತ್ರದಲ್ಲಿ ನಗ್ನ ಮನುಷ್ಯನೊಬ್ಬನನ್ನು ಚೌಕ ಹಾಗೂ ವೃತ್ತದ ಒಳಗೆ ಚಿತ್ರಿಸಲಾಗಿದೆ. ಅವನ ಕೈಗಳನ್ನು ಅವನ ತಲೆಯ ಮೇಲೆ ನೇರವಾಗಿ ಮತ್ತು ಲಂಬವಾಗಿ ಚಾಚಲಾಗಿದೆ.) ಹದಿನೆಂಟನೆಯ ಶತಮಾನದ ಕವಿ ಅಲೆಕ್ಸಾಂಡರ್ ಪೋಪ್ ತನ್ನ An Essay on Man ಪ್ರಬಂಧದಲ್ಲಿ ಬರೆಯುತ್ತಾನೆ, 'ಹಾಗಾಗಿ ತಿಳಿ ನಿನ್ನನ್ನು ನೀ/ದೇವರು ನಿನ್ನ ತಿದ್ದುವನು ಎಂದು ಭಾವಿಸದಿರು/ ಮನುಷ್ಯ

ಕುಲದ ಸರಿಯಾದ ಅಧ್ಯಯನವೆಂದರೆ ಮನುಷ್ಯನೇ'. ಇವು ಮತ್ತು ಇಂತಹ ಹಲವು ಚಿತ್ರಗಳು ಮತ್ತು ಹೇಳಿಕೆಗಳು ನಾವು ಪರಿಸರ ಕೇಂದ್ರಿತವಾಗದೆ ಮನುಷ್ಯ ಕೇಂದ್ರಿತವಾಗಲು ನಮಗೆ ಬಲು ದೊಡ್ಡ ಸಾಂಸ್ಕೃತಿಕ ಪರವಾನಗಿಯನ್ನು ನೀಡುತ್ತವೆ.

೧೯ನೇ ಶತಮಾನದಲ್ಲಿ ಮಹಾನ್ ವಿಕ್ಟೋರಿಯನ್ ಕಲಾವಿಮರ್ಶಕ ಜಾನ್ ರಸ್ಕಿನ್ ತನ್ನ ಆಧುನಿಕ ಚಿತ್ರಕಾರರು, ಸಂ.೩. (೧೮೫೬) Pathetic fallacy ಎಂಬ ಒಂದು ಮಾತನ್ನು ಪೋಣಿಸಿದ. ಅದು ನಮ್ಮೊಳಗಿನ ಭಾವನೆಗಳನ್ನು ನಮ್ಮ ಪರಿಸರದಲ್ಲಿ ಕಾಣುವ ಸಹಜ ಪ್ರವೃತ್ತಿಯನ್ನು ಸೂಚಿಸುತ್ತದೆ ಹಾಗೂ ಎಲ್ಲವೂ ನಮ್ಮನ್ನು ಸುತ್ತುವರಿದಿರುವಂತೆ ಭಾವಿಸುತ್ತದೆ. ಆತ ಹೇಳುತ್ತಾನೆ: 'ಎಲ್ಲ ಹಿಂಸಾತ್ಮಕ ಭಾವನೆಗಳೂ ಒಂದೇ ಪರಿಣಾಮವನ್ನು ಉಂಟುಮಾಡುತ್ತವೆ. ಅವು ನಮ್ಮಲ್ಲಿ ಬಾಹ್ಯವಸ್ತುಗಳ ಬಗೆಗಿನ ನಮ್ಮ ಅಭಿಪ್ರಾಯವನ್ನು ಕುರಿತಂತೆ ಒಂದು ಅಸತ್ಯತೆಯನ್ನು ಹುಟ್ಟುಹಾಕುತ್ತವೆ. ಅದನ್ನೆ ನಾನು Pathetic fallacy ಎಂದು ವಿವರಿಸುತ್ತೇನೆ. ಆದ್ದರಿಂದ ಕ್ರೂರ ಸಮುದ್ರ ಎಂಬ ನುಡಿಗಟ್ಟು ತನ್ನಲ್ಲಿ ಮನುಷ್ಯ ಸ್ವಭಾವವಾದ ಕ್ರೌರ್ಯವನ್ನು ನೈಸರ್ಗಿಕವಾದ ಸಮುದ್ರಕ್ಕೆ ಅನ್ವಯಿಸುವ ಗುಣವನ್ನು ಹೊತ್ತುಕೊಂಡಿದೆ.' ರಸ್ಕಿನ್ ಆಳವಾದ ಪರಿಸರ ಸಂವೇದಿಯಾಗಿದ್ದ. ಪ್ರಾಯಶಃ ಅವನು ನಿಸರ್ಗದ ಶಕ್ತಿ ಅನಂತವಾದದ್ದಲ್ಲ ಮತ್ತು ಉತ್ಪಾದನೆ ಮತ್ತು ಉಪಭೋಗದ ಆಧುನಿಕ ರೂಪಗಳು ಪರಿಸರದ ಮೇಲೆ ಮಾರಣಾಂತಿಕ ಪರಿಣಾಮವನ್ನು ಬೀರಬಲ್ಲವು ಎಂಬ ಅನುಮಾನವನ್ನು ದಾಖಲಿಸಿದ ಮೊದಲ ಬ್ರಿಟಿಷ್ ಲೇಖಕ. ತನ್ನ ಉಪನ್ಯಾಸಗಳಲ್ಲಿ ಆತ ತಾನು ಯಾವುದನ್ನು ಹತ್ತೊಂಬತ್ತನೆಯ ಶತಮಾನದ ಚಂಡಮಾರುತವೆಂದು, ಆಧುನಿಕ ಪ್ಲೇಗ್ ಮೋಡಗಳು ಎಂದು ಕರೆದನೋ ಅವುಗಳ ಬಗ್ಗೆ, ವಾತಾವರಣವು ಕೈಗಾರಿಕಾ ಪ್ರದೂಷಣೆಯಿಂದಾಗಿ ಶಾಶ್ವತವಾಗಿ ಹಾನಿಗೀಡಾಗುತ್ತಿರುವುದರ ಬಗ್ಗೆ ಅತೀವ ಆತಂಕವನ್ನು ವ್ಯಕ್ತಪಡಿಸಿದ್ದ. ಇದು ನಾವು ನಿಸರ್ಗದಮೇಲೆ ನಮ್ಮ ಅಹಂಕಾರವು ಸೀಮಾತೀತವಾದದ್ದು ಎಂದು ಭಾವಿಸಿದ್ದರ ಫಲವಾಗಿ ಬಂದು ಒದಗಿದ ಪರಿಸರ ದುರಂತ ಎನ್ನಬಹುದು. ಈ ಗುಮ್ಮ ರಸ್ಕಿನ್ ತಾನು ಆ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಇಪ್ಪತ್ತು ವರ್ಷಗಳ ಬಳಿಕ ತನ್ನ ಮಾತು ನಿಜವಾದದ್ದು ಕಂಡ. ಮೋಡಗಳು ರೂಪತಳೆಯುವುದು, ವಾತಾವರಣದಲ್ಲಿ ಆದ ಬದಲಾವಣೆಗಳು, ಹವಾಮಾನದ ಸ್ವರೂಪ ಎಲ್ಲವೂ ಆ ಅವಧಿಯಲ್ಲಿಯೇ ಮಾರ್ಪಟ್ಟು ಹೋಗಿದ್ದವು.

ಕುತೂಹಲದ ವಿಚಾರವೆಂದರೆ ರಸ್ಕಿನ್‌ಗೆ ಹೋಲಿಸಿದರೆ ಎಮರ್ಸನ್‌ನಲ್ಲಿ Pathetic fallacy ಅಂತಹ ಚಿಂತೆಗಳು ಯಾವುವೂ ಇದ್ದಿರಲಿಲ್ಲ. ತನ್ನ ನೇಚರ್ ಕೃತಿಯ ಮೊದಲನೆಯ ಅಧ್ಯಾಯದಲ್ಲಿ ಅವನನ್ನುವುದು 'ನಿಸರ್ಗವು ಸದಾ ಚೈತನ್ಯದ ವರ್ಣಗಳನ್ನು ಧರಿಸುತ್ತದೆ' ಎಂದು. ಅವನ ಹೇಳಿಕೆಯ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸದೆ ಇರುವುದಾದರೂ ಹೇಗೆ? ಒಂದೇ ವಿಚಾರದಲ್ಲಿ ಇವರಿಬ್ಬರ ಮಾತುಗಳಲ್ಲಿನ ಭಿನ್ನತೆ ಮೊದಲು ಪ್ರಸ್ತಾಪಿಸಿದ ಅಮೆರಿಕ ಮತ್ತು ಬ್ರಿಟಿಷ್ ಎಕಾಕ್ರಿಟಿಸಿಸಂಗಳಲ್ಲಿನ ಭಿನ್ನತೆಯನ್ನು ಧ್ವನಿಸುತ್ತದೆಯೇ? ಇವೆರಡನ್ನೂ ಪರಿಸರ ಆಶಾವಾದ ಅಥವ ಪರಿಸರ ನಿರಾಶಾವಾದದ ಚಿಹ್ನೆಗಳು ಎಂದು ಹೇಳಿದರೆ ಅತಿಯಾಗಿ ಸರಳಗೊಳಿಸಿದಂತೆ ಆಗುವುದೆ? ಕಿಕ್ಕಿರಿದ ದ್ವೀಪ ದೇಶಗಳಾದ ಬ್ರಿಟನ್ ಮತ್ತು ಜಪಾನ್‌ಗಳಿಗೆ ಸಂಸ್ಕೃತಿಯು ನಿಸರ್ಗವನ್ನು ಗಬಗಬನೆ ನುಂಗುತ್ತಿದೆ ಎಂಬ ತಳಮಳವನ್ನು ಹುಟ್ಟುಹಾಕಲು ಸಾಧ್ಯವಾದೀತೆ? ಓಝೋನ್ ಪದರ ಮತ್ತು ಜಾಗತಿಕವಾಗಿ ಹೆಚ್ಚುತ್ತಿರುವ ಉಷ್ಣತೆಗಳನ್ನು ಕುರಿತು ಎಂಥದೇ ಸಾಕ್ಷ್ಯಾಧಾರಗಳಿರಲಿ ವಿಶಾಲ ಭೂಪ್ರದೇಶ ಹೊಂದಿರುವ ಅಮೆರಿಕ ಮತ್ತು ಆಸ್ಟ್ರೇಲಿಯಾ ಖಂಡಗಳು ಅವುಗಳ ಪರ್ಯಾವರಣದಿಂದಾಗಿಯೇ ಈ ಭೂಮಿ ಬದುಕುತ್ತದೆ ಎಂಬ ನಂಬಿಕೆಯನ್ನು ಹುಟ್ಟುಹಾಕುತ್ತಿವೆಯೇ. ಯಾವ ಕಡೆ

ನಮ್ಮ ಮನ ಸ್ವಭಾವಕ್ಕನುಗುಣವಾಗಿ ಒಲಿವುದೋ ಒಲಿಲಿ. ಸಮಸ್ಯೆಯನ್ನು ಸರಿಯಾಗಿಯೇ ಗ್ರಹಿಸಿರುವ ನಮ್ಮ ಜ್ಞಾನದಿಂದ ಇಲ್ಲಿ ಏನಾದರೂ ವ್ಯತ್ಯಾಸವಾದೀತೆ? ಈ ಸನ್ನಿವೇಶದಲ್ಲಿ ಸಮಸ್ಯೆಗೆ ಪರಿಹಾರ ಒದಗಿಸಲು ಜಾಗತಿಕ ವ್ಯವಸ್ಥೆಯಲ್ಲಿ ಯಾವ ರೀತಿಯ ಬದಲಾವಣೆಯ ಅಗತ್ಯವಿದೆ. ಆ ಬದಲಾವಣೆಗಳು ಅನಿವಾರ್ಯವಾಗಿ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವವೇ? ಬೇರೆ ಬಡಜೀವಗಳು ಬದುಕಲೋಸುಗ ಬೆವರು ಸುರಿಸುತ್ತಿರುವಾಗ ರಸ್ಕಿನ್‌ಗೆ ಕೈಗಾರಿಕಾ ಪ್ರದೂಷಣೆಯ ಬಗ್ಗೆ ಚಿಂತಿಸಲು, ಬರೆಯಲು ಸ್ವಾತಂತ್ರ್ಯವನ್ನು ಕೊಟ್ಟಿದ್ದು ಏನು? ಅದು ಅಂತಿಮವಾಗಿ ಕುಟುಂಬದ ಶ್ರೀಮಂತಿಕೆ. ಅದು ಶೆರ್ರಿಯ ಆಮದು. ಈ ಉದ್ಯೋಗ ಸಹ ಜಗತ್ತಿನ ವಾತಾವರಣವನ್ನು ಕಲುಷಿತಗೊಳಿಸುವ ತ್ಯಾಜ್ಯ ವಸ್ತುಗಳನ್ನು ಬಿಡುಗಡೆ ಮಾಡುವ ಕೈಗಾರಿಕೆಗಳಲ್ಲಿ ಒಂದರ ಮೇಲೆ ಅವಲಂಬಿತವಾದ್ದು. ಪುಸ್ತಕಗಳ, ವ್ಯಾಸಂಗ ವಿಷಯಗಳ, ಇಂಟರ್ನೆಟ್/ವೆಬ್ ತಾಣಗಳ ನಮ್ಮದೇ ಬದುಕಿನ ಮೇಲೆ ಹೊರಿಸಲಾಗುವ ಆರೋಪ ಇದಕ್ಕಿಂತ ಕಡಿಮೆಯಾಗಿರುವುದೆ?

ಪರಿಸರವಾದಿ ವಿಮರ್ಶಕರು ಏನು ಮಾಡುತ್ತಾರೆ?

೧. ಅವರು ಪ್ರಮುಖ ಸಾಹಿತ್ಯ ಕೃತಿಗಳನ್ನು ಪರಿಸರಕೇಂದ್ರಿತ ದೃಷ್ಟಿಕೋನದಿಂದ, ನೈಸರ್ಗಿಕ ಪರಿಸರವನ್ನು ಪ್ರತಿನಿಧಿಸುವತ್ತ ವಿಶೇಷ ಗಮನವಿಟ್ಟು, ಪುನರ್ ವ್ಯಾಸಂಗ ಮಾಡುತ್ತಾರೆ.

೨. ಪರಿಸರಕೇಂದ್ರಿತ ಪರಿಕಲ್ಪನೆಗಳ ಶ್ರೇಣಿಯನ್ನೇ ಅವರು ವಿಸ್ತರಿಸುತ್ತಾರೆ. ಅದನ್ನು ಅವರು ಪರಿಸರದಲ್ಲಿ ಲಭ್ಯವಿಲ್ಲದ ಅಂದರೆ ಪರಿಸರದಾಚೆಗಿನದನ್ನು. ಅಂದರೆ ವೃದ್ಧಿ ಮತ್ತು ಚೈತನ್ಯ, ಸಮತೋಲನ ಮತ್ತು ಅಸಮತೋಲನ, ಸಹಬಾಳ್ವೆ ಮತ್ತು ಪರಸ್ಪರತೆ, ಶಕ್ತಿಮೂಲಗಳನ್ನು ಹಾಗೂ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವಲ್ಲಿನ ಮನುಷ್ಯನ ಧಾರಣ ಶಕ್ತಿ ಮತ್ತು ಅಸಾಮರ್ಥ್ಯ ಮುಂತಾದವುಗಳನ್ನು ಬಳಸಿ ಅನ್ವಯಗೊಳಿಸುತ್ತಾರೆ.

೩. ನಿಸರ್ಗವನ್ನು ತಮ್ಮ ಕೃತಿಗಳಿಗೆ ಮುನ್ನೆಲೆಯಾಗಿಸಿಕೊಂಡ ಅಮೆರಿಕದ ಅತೀಂದ್ರಿಯ ತತ್ತ್ವಜ್ಞಾನಿಗಳು ಮತ್ತು ಬ್ರಿಟಿಷ್ ರೊಮ್ಯಾಂಟಿಕ್ ಪರಿಸರವಾದಿಗಳು, ಜಾನ್ ಕ್ಲೇರರ ಕಾವ್ಯ, ಥಾಮಸ್ ಹಾರ್ಡಿಯ ಕೃತಿಗಳು ಹಾಗೂ ಇಪ್ಪತ್ತನೇ ಶತಮಾನದ ಮೊದಲಾರ್ಧದ ಜಾರ್ಜಿಯನ್ ಕವಿಗಳೇ ಮುಂತಾದವರಿಗೆ ವಿರುದ್ಧ ಪ್ರಾಮುಖ್ಯತೆಯನ್ನು ನೀಡುವುದು.

೪. ಪ್ರಸ್ತುತವೂ, ವಸ್ತುನಿಷ್ಠವೂ ಆದ ಸಾಹಿತ್ಯಸೃಷ್ಟಿಯ ಮೇಲೆ ಒತ್ತುಕೊಟ್ಟು, ಅದರಲ್ಲೂ ಮುಖ್ಯವಾಗಿ ಸ್ವಾಭಾವಿಕವಾದ ಭೂಮಿಯ ಲಕ್ಷಣವನ್ನು ಕುರಿತ ಪ್ರಬಂಧಗಳು, ಪ್ರವಾಸ ಕಥನಗಳು, ನೆನಪಿನ ಚಿತ್ರಗಳು, ಮತ್ತು ಪ್ರಾದೇಶಿಕ ಸಾಹಿತ್ಯಕೃತಿಗಳಿಗೆ ಒತ್ತುಕೊಟ್ಟು ಅವರು ಸಾಹಿತ್ಯವಿಮರ್ಶನ ಚಟುವಟಿಕೆಗಳ ಪರಿಮಿತಿಯನ್ನು ವಿಸ್ತರಿಸುತ್ತಾರೆ.

೫. ಅವರು ಸಾಹಿತ್ಯದ ಪ್ರಧಾನ ಸಿದ್ಧಾಂತಗಳ ಸಾಮಾಜಿಕ constructivism ಮತ್ತು ಭಾಷಿಕ determinismಗಳಿಗೆ ಬೆನ್ನು ತಿರುವಿ (ಬಾಹ್ಯ ಜಗತ್ತಿನ ಭಾಷಿಕ ಹಾಗೂ ಸಾಮಾಜಿಕ constructivismಗೆ ಅವರು ಕೊಡುವ ಮಹತ್ವ ನೀಡಿದಂತೆ) ಅವುಗಳ ಬದಲಿಗೆ ಸೂಕ್ಷ್ಮಾವಲೋಕನ, ಸಾಮೂಹಿಕವಾದ ನೈತಿಕ ಜವಾಬ್ದಾರಿ ಮತ್ತು ನಮ್ಮನ್ನು ಮೀರಿದ ನಮ್ಮಾಚೆಗಿನ ವಿಶ್ವಕ್ಕಿರುವ ಹಕ್ಕಿಗೆ ಬೆಲೆ ಕೊಡುವುದೇ ಮೊದಲಾದ ಪರಿಸರಕೇಂದ್ರಿತ ಮೌಲ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ.

ಏಕಾಕ್ರಿಟಿಸಿಸಂ: ಒಂದು ಉದಾಹರಣೆ

೧೯೧೫ರಲ್ಲಿ ಆಗ್ಗೆ ಪ್ರಸಿದ್ಧನಾಗಿದ್ದ ಥಾಮಸ್ ಹಾರ್ಡಿಯು ಮಹಾಯುದ್ಧ ಕೊನೆಗಾಣದೆ ನಾಗರಿಕಮೌಲ್ಯಗಳು ಕುಸಿಯುತ್ತಿರುವ ಸನ್ನಿವೇಶವನ್ನು ಮನಗೊಂಡು ಭಾವಪರನಾಗಿ ಒಂದು ಪುಟ್ಟ ಕವಿತೆ ಬರೆದ. ಅದರ ಹೆಸರು 'In time of "The Breaking of Nations'

I

ಒಬ್ಬನೇ ಒಬ್ಬ ಮನುಷ್ಯ ಸಂಕಟಪಡುವ ಜೀವ
ನಿಶಬ್ದ ನಿಧಾನ ನಡಿಗೆಯಲ್ಲಿ
ಒಂದು ಮುದಿ ಕುದುರೆ ಜೊತೆಯಲ್ಲಿ
ತಡಬಡಾಯಿಸುತ್ತ ಗೋಣುಹಾಕುತ್ತ
ಅರೆ ನಿದ್ರೆಯಲ್ಲಿ ಅವರು, ಉಳುತ್ತ ನಡೆಯುತ್ತ.

II

ಹುಂಡಿಹುಲ್ಲಿನ ಕುಪ್ಪೆಗಳಿಂದ
ತೆಳ್ಳನೆ ಹೊಗೆ, ಬೆಂಕಿಯಿಲ್ಲ
ಇದು ಹೀಗೇ ಸಾಗುತ್ತದೆ ಮುಂದೆ
ಅರಸುಮನೆತನಗಳು ಅಳಿದರೇನಂತೆ.

III

ಅಲ್ಲಿ ಹೆಣ್ಣೊಂದು, ಮತ್ತವಳ ಜೀವ
ಮೆಲ್ಲುಸುರುತ್ತ ಬರುವರು
ಕಾಳಗದ ಚರಿತೆಗಳು ಮೋಡಗಟ್ಟುವವು ಇರುಳಂತೆ
ಅವರ ಕಥೆಗಳು ಸಾಯುವದಕ್ಕೆ ಮುಂಚೆ

ಅರಸುಮನೆತನಗಳು ಅಳಿಯುತ್ತಿರುವಾಗ, ದೇಶಗಳು ಆಕ್ರಮಣಕ್ಕೆ ಸಿಲುಗಿ ಛಿದ್ರವಾಗುತ್ತಿರುವಾಗ ಕವಿ ಹತಾಶನಾಗಿ ಇಂಥ ಯಾವುದರಿಂದಲು ಬದಲಾಗದ ಒಂದೇ ಒಂದು ಉದಾಹರಣೆಗಾಗಿ ತನ್ನ ಸುತ್ತ ಹುಡುಕುತ್ತಾನೆ. ಶಾಶ್ವತವಾದದ್ದು ಒಂದಿದೆ, ಅದು ಮಹಾಯುದ್ಧ ತಂದ ವಿನಾಶದಲ್ಲೂ ಬಟ್ಟಿಗೆಡದೆ ಯಾವತ್ತೂ ಮುಂದೆ ಮುಂದೆ ಸಾಗುತ್ತಿರುತ್ತದೆ. ಅಂಥದ್ದು ಅದು. ಕವಿ ಅದಕ್ಕಾಗಿ ಆಯ್ದುಕೊಳ್ಳುವುದು ತಂತ್ರಜ್ಞಾನವು ಅತಿ ಕಡಿಮೆ ಬಳಕೆಯಾಗಿರುವ ಬೇಸಾಯ ಪದ್ಧತಿ: ಒಬ್ಬ ಉಳುವವ. ಕುದುರೆ ಕಟ್ಟಿದ ನೇಗಿಲಿನಿಂದ ಉಳುವವನು. 'ಒಬ್ಬನೇ ಒಬ್ಬ ಮನುಷ್ಯ. ಸಂಕಟಪಡುವ ಜೀವ. ನಿಧಾನ ನಡಿಗೆಯಲ್ಲಿ.' ಈ ಕವಿತೆಯನ್ನು ೧೯೧೫ರಲ್ಲಿ ಬರೆದದ್ದು ಎನ್ನುವುದು ಅಕ್ಷರದ ಮಟ್ಟಿಗೆ ವಾಸ್ತವ. ಆದರೆ ಅದನ್ನು ೧೯೧೫ರವರೆಗೂ ಬರೆಯಲಾಯಿತು ಎನ್ನುವುದು ಹೆಚ್ಚು ನಿಖರವಾದದ್ದು. ೧೮೭೦ರಲ್ಲಿ ಕಾರ್ನ್‌ವಾಲ್‌ನಲ್ಲಿನ ಚರ್ಚ್ ಒಂದರ ರೆಕ್ಟರಿಯ ತೋಟದಲ್ಲಿ ಹಾರ್ಡಿ ಆ ನೇಗಿಲಿನ ಮನುಷ್ಯನನ್ನು ನೋಡಿದ್ದ. ಆಗ ಹಾರ್ಡಿ ತನ್ನ ಮೊದಲನೆಯ ಹೆಂಡತಿಯಾದ ಎಮ್ಮ ಲ್ಯಾವಿನಿಯ ಗಿಫರ್ಡ್‌ಳ ಜೊತೆ ಪ್ರಣಯದಲ್ಲಿದ್ದ. ಇದನ್ನು ವಿಶಾಲವಾದ ಪರಿಸರ ದೃಷ್ಟಿಕೋನದಿಂದ ಯೋಚಿಸಿದರೆ ಕವಿಯ ಮನಸ್ಸಿನಲ್ಲಿ ಅವನ ಖಾಸಗಿ ಬದುಕಿನ ಯಾವುದೋ ಒಂದು ಕಾಲಘಟ್ಟದಲ್ಲಿ ಕಲ್ಪನೆಯ ಬೀಜವೊಂದು ಬಿತ್ತಲ್ಪಟ್ಟು

ಬಳಿಕ ಅದರಿಂದ ಆಕೃತಿಯೊಂದು ರೂಪುಗೊಂಡು, ಕಾಲಾಂತರದಲ್ಲಿ ಬೆಳೆದು ಹಿರಿದಾಗಿ, ಮುಂದೆಂದೋ ಬಂದೊದಗುವ ಅಗತ್ಯವನ್ನು ಪೂರೈಸಲು ಮತ್ತೆ ಮತ್ತೆ ಪುನರಾವೃತ್ತಿಗೊಂಡಿತ್ತು ಎನ್ನುವುದು ಸ್ಪಷ್ಟವಾಯಿತು. ಕವಿಯ ಮನಸ್ಸಿನಲ್ಲಿ ಕವಿತೆ ದೀರ್ಘಕಾಲ ಗರ್ಭಸ್ಥವಾಗಿದ್ದ ಬಗೆಯೇ ಅದರಲ್ಲಿ ನಿರೂಪಿಸಲಾದ ಬೆಳವಣಿಗೆ ಮತ್ತು ಬೇಸಾಯದ ತಾಳ್ಮೆಯನ್ನು, ಪ್ರಕ್ರಿಯೆಯನ್ನು ಪ್ರತಿಫಲಿಸುತ್ತದೆ. ಹಾರ್ಡಿ ತನ್ನ ಎರಡನೆ ಹೆಂಡತಿಯ ಹೆಸರಿನಲ್ಲಿ ಬರೆದ ತನ್ನ ಆತ್ಮಕತೆಯಲ್ಲಿ ಎಮ್ಮಳ ಜೊತೆಯ ತನ್ನ ಪ್ರಣಯ ಆ ಹಿಂದೆ ನಡೆದಿದ್ದ ಯೂರೋಪಿನ ಸಂಘರ್ಷ (೧೮೭೦-೭೧ರ ಫ್ರಾಂಕೋ-ಪರ್ಷಿಯನ್ ಯುದ್ಧ)ದ ಕಾಲದ್ದು. ೧೯೧೫ರಲ್ಲಿ ಬರೆದ ಕವಿತೆಯಲ್ಲಿ ಬಳಸಿಕೊಂಡ ಉಳುವ ರೈತನನ್ನು ತಾನು ನೋಡಿದ್ದು ೧೮೭೦ರ ಆಗಸ್ಟ್ ೧೮ರಂದು. ಆ ದಿನ The Bloody Battle of Gravolette ಎಂದು ಪ್ರಸಿದ್ಧವಾದ ದಿನ. ಪ್ರಷಿಯಾ ಗೆದ್ದಿತು. ಆದರೆ ಯುದ್ಧದಲ್ಲಿ ೨೦೦೦೦ ಮಂದಿ ಪ್ರಷಿಯನ್ನರು ಮತ್ತು ೧೩,೦೦೦ ಮಂದಿ ಫ್ರೆಂಚರು ಮಡಿದರು ಎಂದು ವಿವರಿಸುತ್ತಾನೆ. ಆಗ ಎಮ್ಮ ಮತ್ತು ಹಾರ್ಡಿ ಜೊತೆಯಾಗಿ ಮನೆಯಿಂದ ದೂರ ಹೊರಗೆ ಟೆನ್ನಿಸನ್‌ನನ್ನು ಓದುತ್ತಿದ್ದರು. ನಡುವೆ ಎಷ್ಟೆಲ್ಲ ಬದಲಾಗಿಹೋಗಿದ್ದರೂ, ನಶಿಸಿಹೋಗಿದ್ದರೂ- ಯೂರೋಪಿನ ಹಳೆಯ ಶ್ರೇಣಿಗಳು; ಅವನ ಕಾದಂಬರಿಗಳು ದಾಖಲಿಸಿದ ಕೃಷಿ ಪದ್ಧತಿಯ ಸ್ವರೂಪದಲ್ಲಿ ಆದ ಬದಲಾವಣೆ; ತನ್ನದೇ ಯೌವನ ಕಳೆದುಹೋಗಿದ್ದು; ತಮ್ಮಿಬ್ಬರ ನಡುವೆ ವರ್ಷಗಳ ಕಹಿ ಸಂಬಂಧ; ಕಡೆಯಲ್ಲಿ ಎಮ್ಮಳ ಸಾವು- ಹಾರ್ಡಿ ಇನ್ನೂ ಕಾಲಾತೀತವೂ, ಬಲವಾಗದ್ದೂ ಆದ ನಿಸರ್ಗದ ಶಕ್ತಿಗಳ ಮಾರ್ಪಾಟಾಗದಿರುವಿಕೆ ಮತ್ತು ಅನುಬಂಧ ಈ ಗುಣಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದ. ಉಳುವ ರೈತ ಅದರಿಂದಾಗಿಯೇ ಅವನಲ್ಲಿ ನಲವತ್ತೈದು ವರ್ಷ ಜೀವಿಸಿದ್ದ, ಯಾವ ಮಾರ್ಪಾಟೂ ಇಲ್ಲದೆ. ಹಾರ್ಡಿ ಹುಡುಕುವ ಕಾಲವನ್ನು ಧಿಕ್ಕರಿಸುವ ಗುಣಗಳನ್ನ ಹೊಂದಿ. ಹೋಲಿಕೆಯಲ್ಲಿ ಅವನದೇ ಕೃತಿ 'ಹೆಣ್ಣು ಮತ್ತು ಅವಳ ಜೀವ' ಹಾರ್ಡಿ ೧೮೭೦ರಲ್ಲಿ ಆಗಲಿ ೧೯೧೫ರಲ್ಲಿ ಆಗಲಿ ಕಂಡಂಥವರಲ್ಲ. ಆದರೆ ಅವರು ೧೮೭೦ರ ಕಾಲಕ್ಕೆ ಹಿಮ್ಮುಖವಾಗಿಹೋದ ಸ್ವಯಂ ಹಾರ್ಡಿ ಮತ್ತು ಎಮ್ಮ. ಅವರು ಆ ಸದಾ ಸಹಿಷ್ಣು ನೇಗಿಲಯೋಗಿಯ ಜೊತೆಗಿನ ಅವರ ಒಡನಾಟವೇ ಕಾರಣವಾಗಿ ಚಾತುರ್ಯದಿಂದ ಅನಂತತೆಗೆ ಸೆಳೆಯಲ್ಪಟ್ಟವರು. ಸಹಿಷ್ಣು ನೇಗಿಲಯೋಗಿಯನ್ನು ಈ ಅಜ್ಞೇಯತಾವಾದಿ ಕವಿ ಭವಿಷ್ಯದ ಭರವಸೆಯನ್ನಾಗಿ, ನಾಶಗೊಳಿಸಲಾಗದ ಪ್ರಕೃತಿ ಮತ್ತು ಮಾನವತೆಯನ್ನಾಗಿ ರೂಪಿಸುತ್ತಾನೆ.

ಮೊದಲು ಹೇಳಿದ ಭೂದೃಶ್ಯಗಳ ಕ್ರಮವನ್ನು ಅನುಸರಿಸಿ ಹೇಳುವುದಾದರೆ ನಿರೂಪಕನಾಗಿರುವ ವಾಚಕ/ನೋಟಕ ಮೂರು ಮತ್ತು ನಾಲ್ಕನೇ ಪದರಗಳಲ್ಲಿದ್ದಾನೆ. ರಕ್ಷಣೆಯ ತೋಟದೊಳಗಿಂದ ಆಚೆ ನೋಡುತ್ತಿದ್ದಾನೆ. (ತೋಟ ಅಲಂಕಾರದ ಸಸ್ಯಗಳನ್ನು ಬೆಳೆಯುವ ಜಾಗ. ಅವನ್ನು ಸೌಂದರ್ಯದ ದೃಷ್ಟಿಯಿಂದಲು, ಇಂದ್ರಿಯ ಸುಖಕ್ಕಾಗಿಯೂ ಬೆಳೆಸಲಾಗಿದೆ. ಹಾಗಾಗಿ ಅದು ಸಾಂಪ್ರದಾಯಿಕವಾಗಿ ಚಿತ್ರಿಸಲು ಪ್ರಣಯ ಲೀಲೆಗಳನ್ನಾಡಲು ಸ್ಥಳ-ಬಾ ತೋಟದೊಳಗೆ, ಮಾಡ್- ಎಂಬಂತೆ. ಅವನು ಹೊರಗಿನ ಬೇಸಾಯ ಯೋಗ್ಯ ಕಣಿವೆಯನ್ನು ನೋಡುತ್ತಾನೆ. ಪದರ ೩. ಅದು ಜೀವನಧಾರಣೆಗೆ ಗಿಡ ನೆಡಬಹುದಾದ ಸ್ಥಳ. ಅದು ಒಳ್ಳೆಯ ಬದುಕನ್ನು ಕ್ರಿಯಾಪರವಾಗಿಸಲು ಬೇಕಾಗುವ ಶ್ರಮಿಕರಿರುವ ಜಾಗ. ವ್ಯವಸಾಯ ಮತ್ತು ತೋಟಗಾರಿಕೆ ಒಂದರ ಪಕ್ಕ ಒಂದು ನಿಂತಿವೆ. ತೋಟದ ಆಚೆ ದೂರದಲ್ಲೆಲ್ಲೋ ಪ್ರಣಯದಲ್ಲಿರುವ ಜೋಡಿಗಳನ್ನು ತಂದು ಅಲ್ಲಿ ಸ್ಥಾಪಿಸಿ ಹಾರ್ಡಿ ಅವನ್ನು ಆದರ್ಶಮಯ ಸಂಯೋಗವಾಗಿ ಮಾಡುತ್ತಾನೆ. ಅವಕ್ಕೆ ನಿಧಾನ ನಿಶಬ್ದ ಅರೆನಿದ್ರೆಯಲ್ಲಿರುವ ಕುದುರೆ ಮತ್ತು ಮನುಷ್ಯ, ಪಿಸುಗುಡುವ ಹಾಗಾಗಿ ನಿಧಾನ ಚಲಿಸುವ ಹೆಣ್ಣು ಮತ್ತೆ ಅವಳ ಜೀವ. ಇವಕ್ಕೆಲ್ಲ ಒಂದು ಸಮಾನ ಗುಣಧರ್ಮ ಸಮಾಹಿತವಾಗಿದೆ. ಈ ದೃಶ್ಯ ನಿಧಾನವಾಗಿ ಸಮ್ಮೋಹನಗೊಂಡಂತೆ

ಚಲಿಸುತ್ತದೆ. ಆದರೆ ಅವರಿಬ್ಬರೂ ಒಬ್ಬರೊಳಗೊಬ್ಬರು ಮಿಳಿತವಾದವರಲ್ಲ. ಏಕೆಂದರೆ ಮೊದಲ ಚರಣದ ನೇಗಿಲಯೋಗಿ ಮತ್ತು ಮೂರನೆಯ ಚರಣದ ಜೋಡಿಗಳು ನಡುವಣ ಎರಡನೇ ಚರಣದಿಂದ ಪ್ರತ್ಯೇಕಗೊಳಿಸಲ್ಪಟ್ಟಿದ್ದಾರೆ. ಪ್ರತ್ಯೇಕಗೊಳಿಸಿರುವ ಎರಡನೇ ಚರಣದ ಪ್ರತಿಮೆಗಳು ಋಣಾತ್ಮಕವಾದವು. ಅದೇನೋ ಸ್ಥಳೀಯ ಮತ್ತು ತಾತ್ಕಾಲಿಕದ ಸಹಬಾಳ್ವೆಯ ಮತ್ತು ರಚನಾತ್ಮಕ ಸಾಮರಸ್ಯದ ದೃಷ್ಟಿಯ ಅನುಭವಾಗಿ ಅಡಚಣೆಗೊಂಡಂತೆ ಹುಂಬಿಹುಲ್ಲಿನ ಕುಪ್ಪೆಗಳಿಂದ ಏಳುತ್ತಿರುವ ಕಿಚ್ಚಿಲ್ಲದ, ತೆಳ್ಳಗೆ ಹರಡಿರುವ ಹೊಗೆ. ಕವಿತೆಯ ಹೊರಗೆ ಸುತ್ತುವ ಮಾನವಕೃತ ವಿನಾಶಕಾರ್ಯ(ಕವಿತೆಯ ಶಿರೋಭಾಗದಲ್ಲಿ ಉಲ್ಲೇಖಿತವಾಗಿರುವ ಜೆರೇಮಿಯನ ದೇಶಗಳ ವಿಘಟನೆಯ ಮಾತು ಮತ್ತು ಆತ್ಮಕಥೆಯಲ್ಲಿ ಉಲ್ಲೇಖಿಸಿರುವ ಫ್ರಾಂಕೋ ಪ್ರಷಿಯನ್ ಯುದ್ಧ) ಎರಡೂ ಪ್ರದೇಶಗಳನ್ನು ವಿಭಜಿಸುತ್ತದೆ ಮತ್ತು ಅಸಂಬದ್ಧವಾಗಿ ಮಾಡುತ್ತದೆ ಎನ್ನುವುದು ಉರಿಯುವ ಚಿತ್ರದಲ್ಲಿ ಪ್ರತಿನಿಧಿತವಾಗಿದೆ. ಈ ಎರಡೂ ಪ್ರದೇಶಗಳ ನಡುವಿನ ಸಹಬಾಳ್ವೆಯು, - ಬದುಕಿನ ಬೇರೆ ಬೇರೆ ಘಟ್ಟಗಳು ಹಾಗೂ ಸಂಗತಿಗಳು ಎಷ್ಟು ಅಸ್ಥಿರವೆಲ್ಲ- ಯುದ್ಧದ ನಿರ್ಧಾರಕ ಹಿಂಸಾಚಾರದಿಂದ ತಲ್ಲಣಿಸಿಹೋಗಿದೆ.

ಯುದ್ಧದ ವಿಚ್ಛಿದ್ರಕಾರಿ ಪರಿಣಾಮದ ಚಿಂತೆಯಲ್ಲಿ ಭಾರವಾದ ಆ ಜೋಡಿ ಟೆನ್ನಿಸನ್‌ನ ಓದಿನಲ್ಲಿ ಯಾವ ನೆಮ್ಮದಿಯನ್ನು ಕಾಣಬಹುದು ಎಂದು ನಾವು ಕೇಳಬಹುದು. ಟೆನ್ನಿಸನ್‌ನ ಯಾವ ಕವಿತೆಗಳನ್ನು ಅವರು ಓದುತ್ತಿದ್ದರು? The Chage of the Light Brigade ಎಂಬ ಆ ದೇಶಭಕ್ತ ಆರಾಮ ಕುರ್ಚಿಯ ಯೋಧ ಟೆನ್ನಿಸನ್‌ನ ಕವಿತೆಯನ್ನೆ? (ಅವನ ಮಗನ ಅನುಸಾರ ಟೈಮ್ಸ್‌ನಲ್ಲಿ ಪ್ರಕಟವಾದ ಆ ಲೇಖನದಿಂದ ಕೆರಳಿದ ಟೆನ್ನಿಸನ್ ಆಗಾಗ ಅಪ್ಪಳಿಸಿದಂತೆ ಪತ್ರಿಕೆಯನ್ನು ತನ್ನ ತಲೆಯಮೇಲೆ ತಿರುಗಿಸುತ್ತಾ ರೂಮಿನಗಲಕ್ಕು ಎಗರಾಡುತ್ತಿದ್ದ.) ಅಥವಾ ತಂತ್ರಜ್ಞಾನದ ಆವಿಷ್ಕಾರವನ್ನು, ರೈಲಿನ ಆಗಮನವನ್ನು ಸಂಭ್ರಮಿಸಿ, ಅವುಗಳಿಂದ ವಾತಾವರಣದ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ಆತಂಕದ ಸುಳಿವೇ ಇರದೆ ಬರೆದ ಅವನ Lacksley Hall ಎಂಬ ಕವಿತೆಯನ್ನೆ? ಅಥವಾ ವಿಷಾದ್ದತೆಯಲ್ಲಿ ಅವನು ಬರೆದ In Memorium ಕವಿತೆಯನ್ನೆ? ಈ ಕವಿತೆಯ ಟೆನ್ನಿಸನ್ ಅಂತು ಬದುಕಿನ ನಿರಂತರತೆಯ ಬಗ್ಗೆ ಯಾವ ವಿಶ್ವಾಸವೂ ಇಲ್ಲದೆ ಹೋದವನು. ಕಾರಣವೆಂದರೆ ಭೂಗರ್ಭದಲ್ಲಿ ದೊರೆತ ಪಳೆಯುಳಿಕೆಗಳು ನೀಡಿದ ಜೀವಗಳ ಸಾವು ಮತ್ತು ಸಂತತಿ ನಾಶದ ಮಾಹಿತಿಯು (ಆಗ ಸಾವಕಾಶವಾಗಿ ವಿಕ್ಟೋರಿಯನ್ ಭೂಗರ್ಭಶಾಸ್ತ್ರಜ್ಞರು ದೊರೆತ ಮಾಹಿತಿಯನ್ನು ವಿಶ್ಲೇಷಿಸುತ್ತಿದ್ದರು. ಅವರೆಲ್ಲ ಹವ್ಯಾಸಿ ಮಠೋಟಿತರು.) ಸೃಷ್ಟಿಯ ದಯಾಮಯತೆ ಮತ್ತು ನಿರಂತರತೆಯ ಬಗ್ಗೆ ಯಾವ ಭರವಸೆಯ ಸಂದೇಶವನ್ನೂ ಕೊಡುವುದಿಲ್ಲ ಎಂಬುದನ್ನು ಅವನು ಗುರುತಿಸಿಕೊಂಡಿದ್ದ. ಯಾವ್ಯದನ್ನೂ, ಅಸಂಖ್ಯಾತ ಜೀವಸಂಕುಲಗಳ ನಾಶವನ್ನೂ ಲೆಕ್ಕಿಸದ ಜೀವಶಕ್ತಿಯನ್ನು ಮತ್ತು ಕೈ, ಬಾಯಿ, ನಾಲಗೆ ಕೆಂಪಾಗಿರುವ ಹಾಗೂ ಪ್ರೀತಿಗಿಂತ ಬಡಿದು ತಿನ್ನುವ ಬೇಟೆಗಾರ ಪ್ರವೃತ್ತಿಯೇ ಹೆಚ್ಚಾಗಿರುವ ಪ್ರಕೃತಿಯನ್ನು ಟೆನ್ನಿಸನ್ ವರ್ಣಮಯವಾಗಿ ವಿವರಿಸಿದ್ದ. ಇದನ್ನು ರೂಪ ಶಾಶ್ವತವಲ್ಲದ ಹಾಗೂ ಮೋಡಗಳು ರೂಪ ತಳೆದ ಹಾಗೆಯೇ ಅಶಾಶ್ವತವಾದ ಬೆಟ್ಟಗಳು, ಮತ್ತು ಖಂಡಗಳು ಎಂದು ತನ್ನ ಅಜ್ಞೇಯತಾವಾದದ ಹಿನ್ನೆಲೆಯಲ್ಲಿ (ಭೂಗರ್ಭಶಾಸ್ತ್ರದ ಯುಗಗಳ ಸಾಲಿನಗುಂಟ ಕಣ್ಣು ನೋಟ ಹಾಯಿಸಿ) ಹೇಳಿದ್ದ. ಈ ಲೆಕ್ಕದಲ್ಲಿ ಅವನ ನಿಲುವು ಹಾರ್ಡಿಯ ನಿಲುವಿನ ರೀತಿಯದೇ. ಅವನು ಮಂದಿರಕ್ಕೆ ಹೋಗುವವನು, ಕಟ್ಟಾ ಧಾರ್ಮಿಕನಲ್ಲ. ಟೆನ್ನಿಸನ್‌ನಲ್ಲಿ ನೆಮ್ಮದಿ ಕಾಣವುದು ಬಹುಶಃ ತುಂಬ ಕಷ್ಟವಾಗಿರಬೇಕು. ಆದ್ದರಿಂದ ಕವಿ ಓದುವುದರಲ್ಲಿ ಅಲ್ಲ, ತನ್ನ ಸುತ್ತಲಿನ ಜಗತ್ತಿನಲ್ಲಿ ನೆಮ್ಮದಿಯನ್ನು ಅರಸುತ್ತಾನೆ; ಉಳುವ ಮನುಷ್ಯನ ಮೇಲೆ ಬೆಳಕು ಹರಿಸುತ್ತಾನೆ.

ವರ್ತಮಾನದ ನಮ್ಮದೇ ದೃಷ್ಟಿಯಿಂದ ನೋಡಿದಾಗ, ಹಾರ್ಡಿಯ ಕಾಲಾತೀತ ನೇಗಿಲಯೋಗಿಯ

ಮೇಲೆ ಧ್ಯಾನದ ಮನನೆಟ್ಟು ಸಮೃದ್ಧಿಯನ್ನು ಮರಳಿ ಪಡೆಯುವ ನಿರ್ವಿಕಲ್ಪತೆಯ ಪ್ರತೀಕವು ಅತಿಯಾದ ಆತ್ಮವಿಶ್ವಾಸವಾಗಿ, ಆತ್ಮ ಭ್ರಾಂತಿಯಾಗಿ ತೋರುತ್ತದೆ. ಅದು ನಶ್ವರತೆಯನ್ನು ಬಿಂಬಿಸುವ ನಮ್ಮ ಲಾಂಛನವಾಗುವುದು ನಾವು ಕಳೆದುಕೊಂಡ ಮಾನವ ಶ್ರಮದ ಬೇಸಾಯದ, ಹಾಗೂ ಬೇಸಾಯದ ಮುಖ್ಯ ಸಹಗತಿಗಳ - ಸಹಾಯಧನ ಪಡೆದು ಮಾಡಿದ ಅತಿಬೆಳೆ, ಬಿ.ಎಸ್.ಇ (ಹುಚ್ಚು ಹಸು ರೋಗ ನೆನಪಿಸಿಕೊಳ್ಳಿ) ಕಾಲು-ಬಾಯಿ ರೋಗದಂತಹ ರೋಗಗಳು, ನಾಪತ್ತೆಯಾದ ಹಾಡು ಹಕ್ಕಿಗಳು ಮತ್ತು ಬೇಲಿಸಾಲುಗಳು ಇವು ಇಲ್ಲದ - ಬಲು ಹಿಂದೆಯೇ ಕಳೆದುಹೋದ ಕಾಲದ ನೆನಪಿನ ಪಳೆಯುಳಿಕೆಯಾಗಿ. ಈ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು ಕವಿತೆಯ ಪರಿಸರಕೇಂದ್ರಿತ ಓದಿಗೆ ಮೊದಲಿಡುವುದಕ್ಕೆ. ಕೇಂದ್ರಿತ ಎಂದರೆ ಕವಿಯ ವೈಯಕ್ತಿಕ ಬದುಕಿನ ವ್ಯಥೆಯ ಸುತ್ತ ಸುತ್ತುವ ಎಂದರ್ಥವಲ್ಲ, ಬದಲಿಗೆ ಒಂದು ಕಡೆ ಇಡೀ ಜೀವಮಾನವನ್ನು ಆವರಿಸಿಕೊಂಡಿರುವ ಏಕೈಕ ಪ್ರತೀಕ - ಪ್ರೀತಿಯನ್ನು ಕುರಿತು - ಅದೇನೋ ಕವಿಯ ಬಳಿ ಇಡೀ ಜಗತ್ತಿನ ಸಮಯವೆಲ್ಲ ಕಾಲುಮುರಿದು ಬಿದ್ದಿರುವಂತೆ - ಧ್ಯಾನದಲ್ಲಿ ಮುಳುಗಿರುವ ಪ್ರತೀಕ, ಮತ್ತೊಂದು ಕಡೆ ಅತ್ಯಂತ ಅತಂತ್ರ ಸ್ಥಿತಿಯಲ್ಲಿರುವ ಪರಿಸರದ ದಯನೀಯ ಸ್ಥಿತಿ- ಇವೆರಡರ ವಿಲಕ್ಷಣ ಹೋಲಿಕೆ. ಇದು ಆ ಪ್ರತೀಕ ನಮಗಾಗಿ ಒಳಗೊಂಡಿರಬೇಕಾದದ್ದು.

ಆಪ್ಪೈರಿಗೆ ಈ ಬಗೆಯ ಪರಿಸರ ಕೇಂದ್ರಿತ ಅಧ್ಯಯನದ ಕೆಲವು ಗುಣಲಕ್ಷಣಗಳು ಯಾವುವು? ಈ ಕೆಳಗಿನ ಪಟ್ಟಿ ಪರಿಸರದತ್ತ ಒಲಿದ ನನ್ನ ಓದು ಮಾಡಲು ಪ್ರಯತ್ನಿಸಿದ್ದೇನು ಎನ್ನುವುದನ್ನು ಹೇಳುತ್ತದೆ; ಅದು-ಒಂದುವೇಳೆ ಮಾಡಿದ್ದರೆ-ಸಾಧಿಸಿದ್ದೇನು ಎನ್ನುವುದನ್ನಲ್ಲ. ಈ ಪಟ್ಟಿಯು ಪರಿಸರವಾದಿ ಅಅಧ್ಯಯನಗಳು ಸಾಮಾನ್ಯವಾಗಿ ಒಳಗೊಂಡಿರುವ ಗುಣದ ಕೇವಲ ದೃಷ್ಟಾಂತ.

ಮೊದಲಿಗೆ ಪದ್ಯದ ವ್ಯಾಖ್ಯಾನವು ವಿಶಾಲವಾಗಿ ಗ್ರಹಿಸಲ್ಪಟ್ಟ ಜೀವಪರಿಸರ ಚಿಂತನೆಯನ್ನು ಒಳಗೊಂಡಿರುವುದಕ್ಕೆ ಸಾಕ್ಷ್ಯ ಒದಗಿಸುತ್ತದೆ. ಕವಿತೆಯ ಬೆಳವಣಿಗೆಯ ಪ್ರಕ್ರಿಯೆಯ ಕುರಿತು ತೋರುವ ಸೂಕ್ಷ್ಮ ಅರಿವು ಇದಕ್ಕೆ ಉದಾಹರಣೆ. ಮೊದಲಿಗೆ ಅದು ಹೇಗೆ ಹಲವು ಸ್ತರಗಳಲ್ಲಿ ಜೀವಮಾನವನ್ನು ಕಟ್ಟಿಕೊಳ್ಳುತ್ತಾ ಸಾಗುತ್ತದೆ. ಅದು ಹೇಗೆ ಹೊರನೋಟಕ್ಕೆ ಯಾವುದೇ ಆಧಾರವಿಲ್ಲದ ಆದರೆ ಘಟನೆ ಉದ್ದೀಪನಗೊಳಪಟ್ಟ ಕಾಲ್ಪನಿಕ ಅಂತರ್ಮೋರ್ಣಧೆಯಂತೆ ಉದ್ಭವವಾದದ್ದಲ್ಲ?


ಎರಡನೆಯದಾಗಿ ಓದುಗರಿಗೆ ಅರಿವಿದೆ, ಕವಿತೆಯ ನಿಧಾನ ನಡಿಗೆ ಕಾರಣವಾದ ವಸ್ತುಗಳು ವಿವಿಧ ಹಾಗೂ ಭಿನ್ನವಾದವು; ಕೆಲವು ಸಹಜ ಘಟನೆಗಳು. ಅವುಗಳಲ್ಲಿ ಕೆಲವು ಭೂತಕಾಲಕ್ಕೆ ಸಂದವು ಮತ್ತು ಕೆಲವು ಈ ಹೊತ್ತಿನವು. ಇನ್ನು ಉಳಿದವು ಕಲ್ಪನೆಯಿಂದ ಹುಟ್ಟಿಬಂದವು. ಹಾಗಾಗಿ ಕವಿತೆ ಯಾವುದೇ ಸರಳ ನಿರ್ವಚನದಲ್ಲು ಸತ್ಯವಲ್ಲ. ಆದರೂ ಬದುಕಿನಷ್ಟೇ ಸತ್ಯವೆನ್ನುವುದಕ್ಕಿಂತ ಪ್ರಬಲವಾದ ಗುಣಧರ್ಮವನ್ನು ಒಳಗೊಂಡಿದೆ.


ಮೂರನೆಯದಾಗಿ ಇದರಲ್ಲಿ ಢಾಕಾದ ಜೀವಪರಿಸರ ಪರವಾದ ವಸ್ತುವನ್ನು ಗುರುತಿಸಲಾಗಿದೆ. (ಪರಿಸರದ ಪ್ರದೇಶಗಳು) ಅದು ಕೂಡ ಚರ್ಚೆಯಲ್ಲಿ ತನ್ನದೇ ಪಾಲು ಹೊಂದಿದೆ.

ನಾಲ್ಕನೆಯದಾಗಿ ನಾವು ಈ ಕವಿತೆಯೊಳಕ್ಕೆ ಕಠೋರ ಅಬುಗಿನ ಓದಿನ ವ್ಯಂಗ್ಯವನ್ನು ಮಗಿಸಿದ್ದೇವೆ. ಹಾರ್ಡಿ ಆ ಕವಿತೆ ಬರೆದ ನೂರು ವರ್ಷಗಳಿಗಿಂತ ಮೊದಲೇ ನಮಗೆ ಚಿರಂತನತೆಯ ಲಾಂಛನ ನಮಗಾಗಿ ಅದೇ ಬಗೆಯಲ್ಲಿ ಕೆಲಸಮಾಡಲಾರದು ಎಂದು ಅರಿವಾಗಿದೆ. ಈ ಅರಿವು ದಯಾರ್ಣವಣ ನಮ್ಮನ್ನು ಮತ್ತು ಅದು ತರಬಹುದಾದ ದುರಂತವನ್ನು ಕುರಿತ ನಮ್ಮ ಸಂವೇದನೆಯಿಂದ ಹುಟ್ಟಿದ್ದು.

ಕೊನೆಯದಾಗಿ. (ಇದು ಎಲ್ಲದರ ಸಾರಾಂಶ) ಓದುವ ಕ್ರಿಯೆಯೇ ವೈವಿಧ್ಯಮಯವಾದದ್ದು ಮತ್ತು

ಅಭಿರುಚಿಗೆ ಸಂಬಂಧಪಟ್ಟಿದ್ದು. ಅದು ಯಾವುದೇ ಒಂದು ವಿಷಯಕ್ಕೆ ಉದಾ: ರೂಪಕಾತ್ಮಕವಾದ ಸಾದೃಶ್ಯ ಅಥವಾ ಇಂದ್ರಿಯಾತೀತ ಪ್ರತೀಕವಾದಕ್ಕೆ ಗಂಟುಬಿದ್ದಿರುವುದಲ್ಲ. ಆದರೆ ಅದಕ್ಕೊಂದು ಕ್ರಮಬದ್ಧ ಹದಪಿದೆ ಹಾಗೂ ಮುಕ್ತತೆಯಿದೆ. ಅವು ಬಹಳಷ್ಟು ವಿಮರ್ಶಾ ಮಾರ್ಗಗಳು ಮಾಡುವಂತೆ ಅದನ್ನು ಒಂದೇ ಬಗೆಯ ಸಾಕ್ಷ್ಯಕ್ಕೆ ಕಟ್ಟಿಹಾಕದೆ ವಿಶಾಲ ಶ್ರೇಣಿಯ ವಸ್ತುಗಳಿಂದ ಆಯ್ದು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡುತ್ತವೆ. (ಪರಂಪರಾವಾದಿ ವಿಮರ್ಶಕರಿಗೆ ಪಠ್ಯಕ್ಕೆ ಮಾತ್ರ ಸಂಬಂಧಿಸಿದಂತೆ, ಮಾರ್ಕ್ಸಿಸ್ಟ್ ವಿಮರ್ಶಕರಿಗೆ ಪ್ರಮುಖವಾಗಿ ಚಾರಿತ್ರಿಕ, ಮುಖ್ಯವಾಗಿ ಸಹಜ ಜ್ಞಾನ ಕಲ್ಪನೆಯನ್ನು ವಿರೋಧಿಸುವ ನಿರಚನವಾದಿಗಳಿಗೆ ಭಾಷಿಕ ಧಾತುಗಳು ಇತ್ಯಾದಿ) ಈ ಬಗೆಯ ಏಕಮುಖಿ ಓದು ಪರಿಸರ ವಿಮರ್ಶಾ ಓದಿನಲ್ಲಿ ಎದ್ದುಕಾಣುತ್ತದೆ. ಆದರೆ ಅವುಗಳ ಮೇಲೆ ಸಾಮಾನ್ಯವಾಗಿ ಟೀಕೆಗಳಿರುವುದಿಲ್ಲ. ಏಕೆಂದರೆ ವಿಮರ್ಶಾ ಮಾರ್ಗ ಕುರಿತ ಆತಂಕಗಳು ಈ ಮಾರ್ಗವನ್ನು ಅಷ್ಟಾಗಿ ಬಾಧಿಸುವುದಿಲ್ಲ. ಈ ನೋಟವನ್ನು ಕುರಿತಂತೆ ಸಂಗ್ರಹವಾಗಿ ಹೇಳಲು ತೊಡಗಿದಾಗ ಅಮೆರಿಕದ ಪರಿಸರವಾದಿ ವಿಮರ್ಶಕ ಸ್ಕಾಟ್ ಸ್ಲೋವಿಕ್ ಹೇಳಿದ ಮುಖ್ಯವಾದ ಮಾತೊಂದು ನೆನಪಿಗೆ ಬರುತ್ತದೆ. ಸ್ಲೋವಿಕ್ ವಾಲ್ಟ್ ವಿಟ್ಮನ್‌ನ ಸಾಂಗ್ ಆಫ್ ಮೈಸೆಲ್ ಕವಿತೆಯ ಒಂದು ಸಾಲನ್ನು ಉಲ್ಲೇಖಿಸುತ್ತಾನೆ. ಅದರಲ್ಲಿ ಮಾತು ಆಡುವವನು ಹೇಳುತ್ತಾನೆ, ನಾನು ಮಹಾನ್, ನನ್ನಲ್ಲಿ ಸಮುದಾಯವಿದೆ. ಎಂದು. ಮತ್ತೆ ಅದನ್ನು ಪರಿಸರವಾದಿ ವಿಮರ್ಶಕರ ಸಮುದಾಯಕ್ಕೆ ಅನ್ವಯಿಸಿ ಅವನು ಹೇಳುತ್ತಾನೆ, ಪರಿಸರವಾದಿ ವಿಮರ್ಶಾ ಪದ್ಧತಿಯ ಸಾಹಿತ್ಯ ಸೃಷ್ಟಿಯನ್ನು ನಿರ್ದೇಶಿಸುವ, ಪರಿಸರವಾದಿ ವಿಮರ್ಶೆ ಅಥವಾ ಶಿಕ್ಷಣವನ್ನು ಉದಾಹರಣೆಯಿಂದ ಉದಾಹರಣೆಗೆ ದಾಟಿಸಬಲ್ಲ ಯಾವುದೇ ಪ್ರಧಾನ ವಿಶ್ವದೃಷ್ಟಿಯಿಲ್ಲ. (ಕೋಪ್, ೧೬೦) ಸರಿಯೆ. ಬಹಳಷ್ಟು ವಿಮರ್ಶೆಯ ಮತ್ತು ತಾತ್ತ್ವಿಕತೆಯ ಚಳವಳಿಗಳು, ಒಬ್ಬನೇ ಸ್ಥಾಪಕ ವ್ಯಕ್ತಿಯ (ಫ್ರಾಯ್ಡ್ ಲೆಕಾನ್, ಫುಕಾಲ್ಟ್, ಡೆರಿಡ ಮುಂತಾಗಿ) ಒಳನೋಟಗಳ ಜೊತೆ ನಿಕಟವಾಗಿ ಗುರುತಿಸಿಕೊಳ್ಳುವ ಚಳವಳಿಗಳೂ ಸೇರಿದಂತೆ, ತಮ್ಮ ಬಗ್ಗೆ ಇಂಥವೇ ಮಹತ್ತರ ಗುಣಗಳನ್ನು ಆರೋಪಿಸಿಕೊಳ್ಳುತ್ತವೆ. ಆದರೆ ಸ್ಪಷ್ಟವಾಗಿ ಗೋಚರಿಸುವ ವಿಚಾರವೆಂದರೆ ಎಕಾಕ್ರಿಟಿಸಿಸಂನ ಒಳಗೆ ಆ ಬಗೆಯ ಹಿರಿಮೆಯನ್ನು ಪ್ರದರ್ಶಿಸುವ ಯಾವ ಮೂರ್ತಿಯೂ ಇಲ್ಲ. ಎಕಾಕ್ರಿಟಿಸಿಸಂ ತಂತಾನೆ ಒಂದು ವೈವಿಧ್ಯಮಯ ಜೀವಗೋಳ.





ಮಾಹಿತಿಗಳ ಮಾಯಾಬಜಾರಿನಲ್ಲಿ

ಆನಂದ ಝುಂಜರವಾಡ

ಸುಮಾರು ೧೦-೧೫ ವರ್ಷಗಳ ಹಿಂದಿನ ಮಾತು. [illegible] ಕತೆಗಾರ ಶ್ರೀ ಕೇಶವ ಮಳಗಿಯವರ ಮಯೂರದಲ್ಲಿ ಪ್ರಕಟವಾದ ಒಂದು ಕತೆಯನ್ನು ಓದುತ್ತಿದ್ದೆ. ಅದರ ಹೆಸರು ಸರಿಯಾಗಿ ನೆನಪಿಲ್ಲ. 'ಮೊರೆವ ಕಡಲಿಗೆ ಒಂದು ದಂಡೆ' ಎಂದೇನೋ ಇರಬೇಕು. ತುಂಬ ಸುಂದರವಾದ, ನಮ್ಮ ಉತ್ತರ ಕರ್ನಾಟಕದ ನೆಲೆಯ ಕತೆ. ಆ ಕತೆಯನ್ನು ನಾನು ಅತ್ಯಂತ ತನ್ಮಯನಾಗಿ ಓದುವಂತೆ ಆ ಕತೆಯೇ ಪ್ರೇರಿಸುತ್ತಿತ್ತು. ಹೀಗೆ ತನ್ಮಯನಾಗಿ ಓದುತ್ತಿದ್ದ ನನಗೆ ಆ ಕತೆಯಲ್ಲಿನ ಒಂದು ವಾಕ್ಯ [illegible] ಮನಃಪಟಲದಲ್ಲಿ [illegible]. ಆ ವಾಕ್ಯ ಇದು- "[illegible] ನಿಧಾನವಾಗಿ [illegible] [illegible] ದಾಟುತ್ತಿತ್ತು. ಕೆಳಗೆ [illegible]." [illegible] ಬಾಗಿಲುಕೋಟೆಯ ತೀರ ಹತ್ತಿರದ ಹಳ್ಳಿ. ಆದರೆ, ಅಲ್ಲಿ ಹರಿಯುತ್ತಿರುವುದು ಘಟಪ್ರಭೆಯಲ್ಲ. ಅದು ಕೃಷ್ಣಾ ನದಿ. ಅಲ್ಲಿ ಹರಿಯುತ್ತಿರುವುದು ಕೃಷ್ಣಾನದಿ ಎಂಬುದು ಮೂಲತಃ ಒಂದು ಭೌಗೋಲಿಕ ಮಾಹಿತಿ ಮಾತ್ರ. ಈ ಮಾಹಿತಿಯನ್ನು ಪಡೆದಿದ್ದ ನನಗೆ ಆ ಕತೆಯ ಆ ವಾಕ್ಯದಲ್ಲಿದ್ದ ತಪ್ಪು ಮಾಹಿತಿ ನನ್ನ ಸಾಹಿತ್ಯ [illegible] ಹೀಗೆ ಕುಟುಕಬಲ್ಲದ್ದು [illegible] ನನಗೆ ಅನೇಕ ದೃಷ್ಟಿಗಳಿಂದ [illegible]. ಆ ತಪ್ಪು ತಿಳುವಳಿಕೆಯ ಪಠ್ಯಕ್ಕೆ ಮಾತ್ರವಲ್ಲ. [illegible] ಆ ಕತೆಯ ಒಟ್ಟು 'ಸಾಹಿತ್ಯ'ದ ಬಗೆಗೆ [illegible] ಅದು ಸಹಜವಾಗಿದ್ದರೆ? ನನ್ನೊಳಗಿನ ಮಾಹಿತಿ, ನನ್ನ ರಸ-ಗ್ರಹಿಕೆಯ ದಾರಿಗೆ ಅಡ್ಡವಾದದ್ದೇಕೆ?

ಈ ಮಾಹಿತಿಯನ್ನು ಸೃಜನಶೀಲತೆಯ ಒಟ್ಟೂ ವ್ಯಾಪಾರಕ್ಕೆ ಅಡ್ಡಿಯಾಗದಂತೆ ನಿಯೋಜಿಸುವದ್ಹೇಗೆ? ಮಾಹಿತಿಗಳ ಸ್ತರದಲ್ಲಿ ಯಾವ ತಪ್ಪೂ ಉಳಿಯದಂತೆ ತನ್ನ ಬರಹ ಇರಬೇಕೆಂಬ ಎಚ್ಚರ ಸೃಜನಶೀಲತೆಯ ಧ್ಯಾನ ಸ್ಥಿತಿಗೆ ತಪೋಭಂಗವನ್ನುಂಟು ಮಾಡುವುದಿಲ್ಲವೇ? ಅಥವಾ ಓದುಗ ಕೃತಿಯೊಳಗಿನ ಮಾಹಿತಿ-ಸತ್ಯಗಳನ್ನು ತನ್ನ ಓದು-ಕ್ರಿಯೆಗೆ ಬಾಧಕವಾಗದಂತೆ ಕಾಣುವ ಪರಿ ಯಾವುದು? ಇಂತಹ ಅನೇಕ ಪ್ರಶ್ನೆಗಳು ನನ್ನನ್ನು ಇಂದಿಗೂ ಕಾಡುತ್ತಿವೆ.

ಈ 'ಮಾಹಿತಿ' ಎಂಬುದು ಕೇವಲ ಭೌಗೋಳಿಕವಾದದ್ದೇನಲ್ಲ. ಲಕ್ಷ ಲಕ್ಷ ಕ್ಷೇತ್ರಗಳಲ್ಲಿ ವಿಘಟಿತವಾಗುತ್ತಿರುವ ಮನುಷ್ಯನ ಲೋಕದೃಷ್ಟಿ ಮತ್ತು ಅದನ್ನು ಉಂಟುಮಾಡುತ್ತಿರುವ ಅರಿವಿನ ಪರಿಕರಗಳ ಅನಿರ್ಬಂಧಿತ ಹುಟ್ಟು-ಸಾವುಗಳ ಪರಿಣಾಮವಾಗಿ, ಇಂದು ಮಾಹಿತಿ ಎಂಬುದು ಜ್ಞಾನಕ್ಕೆ, ಅನುಭವಕ್ಕೆ ಪರ್ಯಾಯವಾಗಿ ನಿಲ್ಲಲು ಪ್ರಯತ್ನಿಸುತ್ತಿದೆ. ದಟ್ಟ ಅನುಭವಗಳ ಪ್ರಾಕೃತಿಕ ಪ್ರವೇಶ ಮತ್ತು ಪ್ರಜ್ಞೆಯ ಒಳ ಭೂಮಿಯಲ್ಲೇ ನಡೆಯುತ್ತಿದ್ದ ಚಿಂತನೆಯ ಉಳುಮೆ. ಇವುಗಳ ಘಟ್ಟಣೆಗಳಿಂದ ನಿಜವಾದ 'ಜ್ಞಾನ' ರೂಪುಗೊಳ್ಳುವುದು ಮತ್ತು ಆ ಜ್ಞಾನವು ಬದುಕಿನ ಕ್ರಮದಲ್ಲೇ ಅರಗಿಕೊಳ್ಳುವುದು ಇಂದು ಸಾಧ್ಯವಾಗುತ್ತಿಲ್ಲ. ಅದರ ಬದಲು ಬದುಕಿನಲ್ಲಿ ದೇಹ-ಮನಸ್ಸು-ಬುದ್ಧಿಗಳ ಮೂರು ಸ್ತರಗಳಲ್ಲೂ ಸಾವಿರಾರು ಮಾಹಿತಿಗಳು ನೆಲೆಗೊಂಡು ಅವು ಹೇಳಿದಂತೆ ನಾವು ಕೇಳುವ ಪರಿಸ್ಥಿತಿಯಲ್ಲಿದ್ದೇವೆ. ಹಾಗಾಗಿ ನಮ್ಮ ಜೀವನ ಕ್ರಮ, ವಿದ್ಯುಕ್ತ-ಆಧುನಿಕ ಆಚರಣೆಗಳ ನಿಯತ ಸರಪಳಿಯಾಗಿದೆ. ಬೆಳಗ್ಗೆ ಹಲ್ಲು ತಿಕ್ಕಿಕೊಳ್ಳುವುದರಿಂದ ಹಿಡಿದು ರಾತ್ರಿ ನಾವು ಬಳಸುವ ಸಂತಾನ ನಿಯಂತ್ರಕಗಳ ಜೊತೆಗಿನ ವ್ಯವಹರಣೆಯವರೆಗೂ ಎಲ್ಲವನ್ನೂ ನಮ್ಮೊಳಗೆ ದಾಸ್ತಾನುಗೊಂಡ 'ಮಾಹಿತಿ'ಗಳು ನಿಯಂತ್ರಿಸುತ್ತವೆ. ನನ್ನ ಮನಸ್ಸಿನ ನೆಲೆಯಲ್ಲೂ, ಹೊಸ ಮಾನಸಿಕ-ಮಾಹಿತಿಗಳು ರೂಪುಗೊಂಡಿರುತ್ತವೆ. ಯಾರಾದರೂ ಮನೆಗೆ ಹರಟೆ ಹೊಡೆಯಲು ಮಕ್ಕಳೊಂದಿಗೆ ಬಂದರೆ, ನಮಗೆ ಅವರೆಷ್ಟೇ ಬೇಕಾದವರಾಗಿದ್ದರೂ ನಮ್ಮ ಮುಖ್ಯ ಲಕ್ಷ್ಯ, ಆ ಮಕ್ಕಳು ಎಲ್ಲಿ ನಮ್ಮ ಟಿ.ವಿ., ಡಿ.ವಿ.ಡಿ. ಕೆಡಿಸುತ್ತಾರೋ, ಗೋಡೆಗಳ ಮೇಲೆ ಏನಾದರೂ ಗೀಚುತ್ತಾರೋ ಇತ್ಯಾದಿ ಆತಂಕಗಳಲ್ಲಿ ಕುದಿಯುತ್ತಿರುತ್ತದೆ. ಈ ಆತಂಕಗಳನ್ನು ತಡೆಯಲು ನಮ್ಮ ಕಾನ್ವೆಂಟ್‌ಗಳಲ್ಲಿ ನಮ್ಮ ಅತೀ ಚಿಕ್ಕ ಮಕ್ಕಳಿಗೂ ಗಂಭೀರವಾಗಿರುವುದ್ಹೇಗೆ ಎಂಬ ಮಾಹಿತಿಯನ್ನು ಕೊಡುತ್ತಿರುತ್ತವೆ. ನಮ್ಮ ಮಕ್ಕಳಿಂದ ನಿಮಗೆ, ನಿಮ್ಮ ಮಕ್ಕಳಿಂದ ನಮಗೆ, ಆತಂಕವಾಗಬಾರದೆಂದರೆ ನಾವೆಲ್ಲರೂ ನಮ್ಮ ಮಕ್ಕಳನ್ನು ಒಂದೇ ಶೈಕ್ಷಣಿಕ ಶೈಲಿಯ ಕಾನ್ವೆಂಟ್‌ಗಳಿಗೆ ಕಳಿಸುವುದು ಸೂಕ್ತ ಪರಿಹಾರವೇ ಆಗಿದೆ. ಮನೋಮಯ ಜಗತ್ತಿನ ಪ್ರೀತಿ-ವಾತ್ಸಲ್ಯ-ಕರುಣೆ-ದಯೆ ಇವೂ ಕೂಡ ಇಂದು ಜಾಲ್ತಿಯಲ್ಲಿವೆ. ಆದರೆ ಅವೆಲ್ಲವೂ, "ಮೊದಲು ನಿನ್ನನ್ನು ನೀನು ತೃಪ್ತಿ ಪಡಿಸಿಗೊಂಡ ನಂತರ ಇನ್ನೊಬ್ಬರತ್ತ ನಿನಗಪಾಯವಾಗದಂತೆ ಲಕ್ಷ್ಯ ಕೊಡು, ಸಾಧ್ಯವಾದರೆ ನೀನು ಕೊಟ್ಟದ್ದಕ್ಕೆ ಪ್ರತಿಯಾಗಿ ಅದಕ್ಕೂ ಹೆಚ್ಚು ಸಿಗುವಂತೆ ಸೂಕ್ಷ್ಮವಾಗಿ ಪ್ರಯತ್ನಿಸು" ಎಂಬ ಮಾಹಿತಿ ಪ್ರೇರಿತ ಹೊಸ ನೀತಿಗನುಸಾರವಾಗಿ ನಡೆದಿರುತ್ತವೆ. ಈ ಬಗೆಯ ಮಾನಸಿಕ-ಮಾಹಿತಿಗಳು ಶೈಕ್ಷಣಿಕ ಕ್ರಮದಲ್ಲೇ ಬರಬೇಕಾಗಿಲ್ಲ. ನಮ್ಮ ಮನೋರಂಜನೆಯ ಮಾಧ್ಯಮಗಳು ಈ ಬಗೆಗೆ ತುಂಬ ಕಠೋರವಾಗಿಯೇ ದುಡಿಯುತ್ತಿವೆ. ಸ್ವಾತಂತ್ರ್ಯ, ಸಮಾನತೆ, ಸಹಕಾರ, ಸಹನೆ ಇತ್ಯಾದಿ ಭಾವಗಳ ಜ್ಞಾನದ ಹಿಂದೆ ಅನುಭೂತಿಯ ಶಕ್ತಿ ಇರುತ್ತದೆ. ಆದರೆ ಇವು ಮಾಹಿತಿಗಳಿಂದ ಅಂದರೆ ಮೌಲ್ಯಗಳ ಮಾರ್ಕೆಟ್‌ನಲ್ಲಿ ಬೆಲೆಯುಳ್ಳವುಗಳೆಂದು ಇಂದು ಸ್ಥಾಪಿತವಾದವುಗಳು ಎಂಬ ಮಾಹಿತಿಯ ಆಧಾರದ ಮೇಲೆ— ಜಾಲ್ತಿಗೆ ಬಂದರೆ ಆಗ ಸೂಕ್ಷ್ಮವಾದ ಒಂದು ಒಳಸಂಚಿನ ವ್ಯವಸ್ಥೆಯಲ್ಲಿ ನಾವೆಲ್ಲರೂ ಒಪ್ಪಂದ ಮಾಡಿಕೊಂಡು ಬದುಕತೊಡಗುತ್ತೇವೆ. ಆದರೆ ಅದು ಒಳಸಂಚು ಎಂದು ಒಪ್ಪಿಕೊಳ್ಳುವುದೂ ಇಬ್ಬರಿಗೂ ಕಷ್ಟವೇ. ಏಕೆಂದರೆ ಇಬ್ಬರಿಗೂ ಅದು ಮನೋಮಯ ಅಸ್ತಿತ್ವದ ಅನಿವಾರ್ಯ ಅಗತ್ಯವೇ ಆಗಿರುತ್ತದೆ.

ಪ್ರಜ್ಞೆಯ ಸ್ತರದಲ್ಲಿ ಈ ಮಾಹಿತಿಗಳು ಮೂಡಿಸಿರುವ ವಿಚಿತ್ರ ಬಗೆಯ ಕ್ರೌರ್ಯಗಳನ್ನು ದಾಖಲಿಸುವುದೂ ಕಷ್ಟ ಏಕೆಂದರೆ ಪ್ರಜ್ಞೆ ನಿರ್ಣಯ ತೆಗೆದುಕೊಳ್ಳಲು ಪ್ರೇರೇಪಿಸುವ ಶಕ್ತಿಯೂ ಹೌದು. ಆ ನಿರ್ಣಯದ ನೈತಿಕ, ಪಾರಮಾರ್ಥಿಕ, ಬೆಲೆಗಟ್ಟುವ ಶಕ್ತಿಯೂ ಹೌದು. ನಾವೀಗ ನಮ್ಮ ಪ್ರಚಂಡವಾದ ಅಹಂ' ಮತ್ತು ಪಾತಾಳದಾಳಕ್ಕಿಳಿದ 'ಭೋಗದಾಸೆ'ಗಾಗಿ ಪ್ರಜ್ಞೆಯ ತೌಲನಿಕ ಶಕ್ತಿಯನ್ನು 'ಮಾಹಿತಿ'ಗಳ ಮೂಲಕ ಪಡೆದ ಅರಕಳಿ-ಸತ್ಯಗಳ ಮೂಲಕ ಬಧಿರಗೊಳಿಸಿಕೊಳ್ಳುತ್ತಿದ್ದೇವೆ. ಇದೊಂದು ಬಗೆಯ ನೋವು ನಿವಾರಕ ತಂತ್ರ. 'ಮನುಷ್ಯ ಸಾಮಾಜಿಕ ಪ್ರಾಣಿ', 'ಆರ್ಥಿಕ ಸಮಾನತೆ ಶೋಷಣೆಯನ್ನು ಅಳಿಸಬಹುದು', 'ದಾರಿಗಳನ್ನು ಮುಕ್ತವಾಗಿಟ್ಟರೆ ಎಲ್ಲ ಪಯಣಿಗರೂ ಚಲನೆಯನ್ನು ಪಡೆಯುತ್ತಾರೆ', 'ಜಾತಿ ವಿನಾಶದ ಮೂಲಕ ಜೀವಸ್ತರಗಳನ್ನು ಒಂದು ಮಾಡಬಹುದು', 'ಮಾನವೀಯತೆ ಸಮಕಾಲೀನ ಕುಧರ್ಮಕ್ಕೆ ಪರ್ಯಾಯವಾಗಬೇಕು'... ಇಂತಹ ಹತ್ತು ಹಲವು ಹೊಸ ಮಾಹಿತಿಗಳು ಇಂದು ಆಧುನಿಕ ಶಿಕ್ಷಿತರಲ್ಲಿ ಕೆಲಸ ಮಾಡುತ್ತಿವೆ. ಇವುಗಳನ್ನು ನೀವು ಒಪ್ಪದಿದ್ದರೆ, ನಿಮ್ಮ ಮುಂದಿನ ನಿಮ್ಮದೇ ಜನಾಂಗ, ನಿಮ್ಮನ್ನು ಬದಿಗೆ ತಳ್ಳಿ ಅವುಗಳನ್ನು ಸ್ವೀಕರಿಸಲು ನಿಮ್ಮ ಮುಂದೆ ಸನ್ನದ್ಧವಾಗಿ ನಿಂತಿದೆ. ಈ ಎಲ್ಲ ಮೌಲ್ಯಗಳನ್ನು ನಾನು ಕೇವಲ ಮಾಹಿತಿಗಳೆಂದು ಗುರುತಿಸಲು ಮುಖ್ಯ ಕಾರಣ, ಇವು ಒಂದಕ್ಕೊಂದು ಒಳ ಸಂಬಂಧವುಳ್ಳ ಸಾವಯವ ಸಂರಚನೆಯನ್ನು ಪಡೆದಿಲ್ಲ. ಅಲ್ಲದೆ ಇಂದು ಜೀವಂತವೆಂದು ಗುರುತಿಸಲ್ಪಟ್ಟ ಮೌಲ್ಯವು ನಾಳೆಯೇ ಎಷ್ಟು ಬೇಗ 'ಸತ್ತಿದೆ' ಎಂದು ಘೋಷಿತವಾಗುತ್ತದೆಂದರೆ, ಮೊದಲಿನ ಮೌಲ್ಯದ ಪ್ರಜ್ಞಾತ್ಮಕ ಅರ್ಥವಾಗುವ ಮೊದಲೇ ನಾವು ಇನ್ನೊಂದನ್ನು ಸ್ವೀಕರಿಸಲು ಪಾಳಿ ಹಚ್ಚಬೇಕಾಗುತ್ತದೆ.

ಬಹುಶಃ ಪ್ರಜ್ಞೆಯ ಸ್ತರದಲ್ಲಿ ಈ ಮಾಹಿತಿಗಳು ಉಂಟು ಮಾಡುವ ಹಲವಾರು ಬಗೆಯ ಭ್ರಮೆಗಳೇ ಸಾಹಿತ್ಯದ ಸೃಜನಶೀಲತೆಯ ವ್ಯಾಪ್ತಿಯಲ್ಲೂ ಬರುತ್ತವೆಂದು ಕಾಣುತ್ತದೆ. ಯಾವುದೇ ಬಗೆಯ ಸೃಜನಶೀಲ ಅಭಿವ್ಯಕ್ತಿಗೂ 'ಅನುಭವ' ಮುಖ್ಯ ಎಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆಂದುಕೊಂಡಿದ್ದೇನೆ. ಆದರೆ, 'ಮಾಹಿತಿ'ಯ ಶಕ್ತಿ ಎಷ್ಟು ಪ್ರಬಲವಾಗಿದೆ ಎಂದರೆ ಅದು ಮೂಲದ ನಮ್ಮ ಈ ಗ್ರಹಿಕೆಯನ್ನೇ ಪ್ರಶ್ನಿಸುವಷ್ಟು ಇಂದು ಅದು ನಮ್ಮೊಳಗೆ ಗೂಡು ಹಾಕಿದೆ. 'ಅನುಭವ' ಎಂದರೇನು? ಅದು ಉಂಡ ಅನುಭವವೋ? ಕಂಡ ಅನುಭವವೋ? ಮಾಹಿತಿಗಳ ಮೂಲಕ ತಿಳಿದ ಒಂದು ಸಂಗತಿಯೋ? ಒಂದು ಪ್ರಬಲ ಸೃಜನಶೀಲತೆಗೆ ಪೂರಕವಾದ ಅನುಭವವಾಗಿ ಮಾರ್ಪಡುಗೊಳ್ಳಲಾರದೆ? ಇಷ್ಟಕ್ಕೂ ಅನುಭವವೇ ಬೇಕೆಂಬ ಕಡ್ಡಾಯವಾದರೂ ಸೃಜನಶೀಲತೆಗೆ ಏಕಿರಬೇಕು? ಎಂಬುವವರೆಗೆ ಈ ಪ್ರಶ್ನೆಗಳು ಇಂದು ಲೇಖಕರಲ್ಲಿ, ಅವರಿಗೂ ಅರಿವಾಗದಂತೆ ತಾಕಲಾಟಗೊಂಡು ಕೃತಿಯ ಸ್ವರೂಪವನ್ನು ನಿರ್ಣಯಿಸುತ್ತಿವೆ. ಹೀಗಾಗಿ ಒಂದು ಕೃತಿಯನ್ನು ಬರೆಯುವಾಗ ಲೇಖಕನಿಗೆ ಇಲ್ಲಿ ಒದಗಿದ್ದು ಅನುಭವವೇ? ಮಾಹಿತಿಯೇ? ಎಂಬುದನ್ನು ಗ್ರಹಿಸುವುದೂ ಕಷ್ಟವಾಗಿದೆ. ಈ ಪ್ರಶ್ನೆ ಕಾರಯಿತ್ರೀ ಸ್ತರದಲ್ಲೂ ಇದೆ. ಭಾವಯಿತ್ರೀ ಸ್ತರದಲ್ಲೂ ಇದೆ. ಇದರಿಂದಾಗಿ ಕೃತಿಯೊಂದರ ಪರಿಣಾಮವು ಅಂತಿಮವಾಗಿ ಒಂದು ಮಾಹಿತಿಯಾಗಿಯೇ ಹುಟ್ಟುವ ಪ್ರಕ್ರಿಯೆ ಇಂದು ನಡೆಯುತ್ತಿದೆ. ಯಾರಾದರೂ ಒಂದು ಕೃತಿಗೆ ಪ್ರತಿಕ್ರಿಯೆ ಬರೆಯುವಾಗ ಇದರಿಂದಾಗಿ ಸಹಜವಾಗಿಯೇ "ನಿಮ್ಮ ಕೃತಿಯಿಂದ ನಾನು ಈ ಅನುಭವ ಪಡೆದೆ" ಎಂಬ ಮಾತಿಗಿಂತ, "ನಿಮ್ಮ ಕೃತಿಯಲ್ಲಿ ಇಂತಿಂಥದ್ದೆಲ್ಲ ಇದೆ. ಅದಕ್ಕಾಗಿ ಅದು ಮುಖ್ಯ" ಎಂಬ ರೀತಿಯ ಮಾತಿನ ಮೇಲೆ ಇಂದು ಹೆಚ್ಚು ಒತ್ತು ಬೀಳುತ್ತಿದೆ. ಸಾಹಿತ್ಯವು ರಸರೂಪಿಯಾಗಿರುವುದರಲ್ಲೇ ಅದರ ಎಲ್ಲ ಬಗೆಯ ಸಾರ್ಥಕತೆ ಇದೆ ಎಂಬ ನಿಲುವು ಬದಲಾಗಿ, ಅದರಲ್ಲಿ ಇಂತಿಂತಹ ವಸ್ತು, ಶೈಲಿ, ದೃಷ್ಟಿಗಳ ಸಮ್ಮಿಲನವಿದ್ದರೆ ಅದು ಒಳ್ಳೆಯ ಕೃತಿ ಎಂಬ ಮಾಹಿತಿಯು ಹೊಸ ಕಾವ್ಯ-ತತ್ವಜ್ಞಾನವಾಗಿ ಇಂದು ನೆಲೆಯಾಗಿದೆ. ಬಹುಶಃ

‘ಪೊಲಿಟಿಕಲ್ -ಸಯನ್ಸ್’ಗೆ ಪ್ರತಿಯಾಗಿ ಒಂದು ‘ಪ್ರೋಯಿಟಿಕಲ್ ಸಯನ್ಸ್’ ಎಂಬ ಶಾಸ್ತ್ರವೇ ಶೈಕ್ಷಣಿಕವಾಗಿ ‘ಸಿಲೇಬಸ್’ ಆಗಿ ಬಂದರೆ ನಾವು ಆಶ್ಚರ್ಯಪಡಬೇಕಾಗಿಲ್ಲ.

ಆದರೆ ಈ ಮಾಹಿತಿಗಳು ಮನುಷ್ಯನಿಗೆ ಒದಗಿಸುತ್ತಿರುವ ಸೌಲಭ್ಯ, ಸುರಕ್ಷೆಗಳನ್ನೂ ನಾವು ನಿರ್ಲಕ್ಷಿಸುವಂತಿಲ್ಲ. ನನ್ನ ಮಗ ೨೦೦೧ರ ಡಿಸೆಂಬರ್‌ನಲ್ಲಿ ಧಾರವಾಡ-ದಾಂಡೇಲಿ ರಸ್ತೆಯಲ್ಲಿ ಅಪಘಾತದಲ್ಲಿ ತೀರಿದ. ನಾನು, ನನ್ನ ಹೆಂಡತಿ ಮೂಲತಃ ಈ ಮಾಹಿತಿಗಳ ಜಗತ್ತಿನ ಜೊತೆ ಕೀಲಿಸಿಕೊಳ್ಳಲಾಗದಷ್ಟು ಹಳೆ-ಹೊಸ ಜನಾಂಗಕ್ಕೆ ಸೇರಿದವರು. ಅವಳಿಗೆ- ಅವಳು ನಿವೃತ್ತಳಾದರೂ- ತನ್ನ ಎ.ಟಿ.ಎಂ.ನಿಂದ ಹಣ ತೆಗೆದುಕೊಳ್ಳಲು ಬರುವುದಿಲ್ಲ. ಅತ ತೀರಿದ್ದು ಮಧ್ಯಾಹ್ನ ಮೂರು ಗಂಟೆಗೆ. ಆದರೆ ನನ್ನ ತಿಳಿವಿಗೆ ಬಂದದ್ದು ರಾತ್ರಿ ೮-೦೦ ಗಂಟೆಗೆ. ‘ಮೊಬೈಲ್’ ಎಂಬ ಸಾಧನದ ಬಗೆಗೆ ನನಗೆ ಮೊದಲಿನಿಂದಲೂ ಏಕೋ ದ್ವೇಷ, ಬೇಸರ, ಅಲಕ್ಷ್ಯ. ಆದರೆ ಎಲ್ಲರೂ ಅಂದು ನನ್ನನ್ನೇ ಛೀ-ಥೂ ಮಾಡಿದರು. ಇಷ್ಟು ಪಗಾರದ ಇದ್ದರೂ ಒಂದೊಂದು ಮೊಬೈಲ್ ಇಟ್ಟುಗೊಂಡಿದ್ರೆ ಅನುಕೂಲ ಆಗಿ, ಬೇಗೂನೇ ಹೋಗಬಹುದಾಗಿತ್ತು ಎಂದೇ ಎಲ್ಲರೂ ಅಂದರು. ಅದು ನಿಜವೂ ಹೌದು. ಈಗ ನನ್ನ ಬಳಿ ಮೊಬೈಲ್ ಇದೆ. ನಾನದನ್ನು ಮಾಹಿತಿ-ತಂತ್ರಜ್ಞಾನದ ಜಗತ್ತಿನ ಅಸ್ತ್ರವೊಂದು, ತನ್ನ ವಿರೋಧಿ ಪ್ರಜ್ಞೆಯನ್ನು ಕಬಳಿಸುವ ಕಾಲಧರ್ಮದ ವಿಜಯವೆಂದೇ ಪರಿಭಾವಿಸಿದ್ದೇನೆ. ಆದರೆ ಅದು ಅಂದು ನನ್ನ ಬಳಿ ಇದ್ದರೆ ಅದರಿಂದನಾನು ಬೇಗನೆ ಹೋಗಿ ವೈದ್ಯರ ಚಿಕಿತ್ಸೆ ನಡೆದಾಗ ನಾನಲ್ಲಿ ಇರಬಹುದಾಗಿತ್ತು ಎಂಬ ಸತ್ಯವನ್ನು ನಾನು ನಿರಾಕರಿಸುವಂತಿಲ್ಲ. ಸೂಕ್ತ ಜವಾಬ್ದಾರ ಪಾಲಕರಲ್ಲಿ ಇಲ್ಲದಿದ್ದುದರಿಂದ ವೈದ್ಯರೂ ಚಿಕಿತ್ಸೆಯ ನಿರ್ಣಯ ತೆಗೆದುಕೊಳ್ಳುವಾಗ ಹೆಚ್ಚಿನ ರಿಸ್ಕ್ ತೆಗೆದುಕೊಂಡಿರಲಿಕ್ಕಿಲ್ಲ ಎಂಬ ಆತಂಕದಲ್ಲಿ ನಾನಿಂದಿಗೂ ಬೇಯುತ್ತಿದ್ದೇನೆ.

ನಮಗೆ ಬೇಕಾಗಲಿ, ಬೇಕಾಗದಿರಲಿ ಸಾವಿರಾರು ಮಾಹಿತಿಗಳನ್ನು ನಾವಿಂದು ತಲೆಯಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳಲೇಬೇಕಾಗಿದೆ. ಪಾಸ್, ಪಿನ್, ಮನೆ ನಂಬರ್, ಫೋನ್ ನಂಬರ್, ಟ್ರೇನ್ ನಂಬರ್, ಗಾಡಿ ನಂಬರ್, ಗುಳಿಗೆಗಳ, ಔಷಧಿಗಳ ಹೆಸರು, ಒಂದೇ ಎರಡೇ ಸಾವಿರಾರು ಮಾಹಿತಿಗಳ ಸಿದ್ಧ ಸಂಗ್ರಹ ನಮಗೆ ಬೇಕು. ಅದೂ ತಕ್ಷಣ, ಶ್ರಮವಿಲ್ಲದೆ ಸಿಗಬೇಕು. ಅದಕ್ಕಾಗಿ ಮೊಬೈಲ್‌ಗಳಲ್ಲೇ ಇರುವ ವ್ಯವಸ್ಥೆ ಸಾಲದೆಂಬಂತೆ ಲ್ಯಾಪ್‌ಟ್ಯಾಪ್‌ನಲ್ಲೂ ಅವು ಇಡಿಕಿರಿದಿರುತ್ತವೆ. ಆದರೆ ಹೀಗೆ ಸಂಗ್ರಹಿತ ಮಾಹಿತಿಗಳಲ್ಲಿ ನಾವು ನಿತ್ಯ ಬಳಸುವ ಮಾಹಿತಿಗಳು ಕೆಲವು ಮಾತ್ರ. ಇನ್ನುಳಿದ ಮಾಹಿತಿಗಳು ಸುಮ್ಮನೆ ಬಿದ್ದುಕೊಂಡಿರುತ್ತವೆ. ನನ್ನ ಮಗ ನನ್ನ ಮೊಬೈಲ್‌ನಲ್ಲಿ, ನಮ್ಮ ಮನೆಯ ಎಲೆಕ್ಟ್ರೀಶಿಯನ್, ನೀರು ಹಾಕುವವನು, ಅಡುಗೆಯವರು ಇತ್ಯಾದಿ ಅನೇಕ ಜನರ ನಂಬರುಗಳನ್ನು ದಾಖಲಿಸಿಟ್ಟಿದ್ದಾನೆ. ಆದರೆ ಅವೇನೂ ನಿತ್ಯ ಉಪಯೋಗ ಬೀಳುವ ಮಾಹಿತಿಗಳಲ್ಲ. ಹೀಗೆ ನಿತ್ಯ ಉಪಯೋಗ ಬೀಳದ ಒಂದು ದೊಡ್ಡ ಮಾಹಿತಿಗಳ ಸಂಗ್ರಹ ಇಂದು ಪ್ರತಿಯೊಬ್ಬನೊಳಗೂ ಇದ್ದೇ ಇರುತ್ತದೆ. ಆದರೆ ಇಂಥ ಮಾಹಿತಿಗಳು ಬಹಳ ದಿನ ನಿಷ್ಕ್ರಿಯವಾಗಿ ಉಳಿದರೆ ಅವುಗಳಿಂದ ಒಂದು ಬಗೆಯ ‘ಮಾಹಿತಿ ಮಾಲಿನ್ಯವೂ’ ಮನುಷ್ಯನೊಳಗೆ ಹರಡತೊಡಗಿ, ಅನೇಕ ಹಿಂಸಾತ್ಮಕ ಪ್ರಚೋದನೆಗಳನ್ನು ಮೀಟುವ ಸ್ತರದಲ್ಲಿ ಅದು ಕ್ರಿಯಾಶೀಲವಾಗತೊಡಗುತ್ತದೆ. ಬಳಕೆಗೆ ಯಾವಾಗಲೋ ಒಮ್ಮೆ ಬೇಕಾಗುವ ಈ ಮಾಹಿತಿಗಳು ಬಹಳ ಕಾಲ ಜಡವಾಗಿ ಉಳಿದರೆ ಅವು ಒಂದು ಬಗೆಯ ವಿನಾಶಕಾರೀ ಕಿರಣಗಳನ್ನು ವಿಕಿರಣಗೊಳಿಸತೊಡಗುತ್ತವೆ. ತತ್ಕಾಲಿಕ ಅವಶ್ಯಕತೆ ಇರದಿದ್ದೂ ಅವುಗಳನ್ನು ಬಳಸುವ ಒಂದು ವಿಕೃತ ಆಮಿಷ ಒಳಗೇ ಹುಟ್ಟತೊಡಗುತ್ತದೆ. ಜೀವನದಲ್ಲಿ ಎಂದೂ ಕಂಡಿರದ, ಕಾಣುವ ಮಾನವೀಯ ಆಸೆಯೂ ಇಲ್ಲದ, ಕಾಣುವದು ಸಾಧ್ಯವೂ ಇಲ್ಲದ, ಅಪರಿಚಿತ ತರುಣ-ತರುಣಿಯರು ತಮ್ಮ ತಮ್ಮೊಳಗೇ ಮಾಡಿಕೊಳ್ಳುವ

‘ಚಿಟ್‌ಚ್ಯಾಟ್’ ಎಂಬ ವೈಚಾರಿಕ - ಕ್ರೀಡೆ ಇದಕ್ಕೊಂದು ಸ್ಪಷ್ಟ ಸಂಕೇತವಾಗಿದೆ. ಮಾಹಿತಿಗಳನ್ನು ತಂದು ಒಳಗೆ ಸುರಿಯುತ್ತಿರುವ ಮಾಧ್ಯಮಗಳು ನೂರಾರು. ಅವೂ ಕೂಡ ದಿನದಿಂದ ದಿನಕ್ಕೆ ಪರಿಷ್ಕೃತಗೊಳ್ಳುತ್ತ, ತಮ್ಮನ್ನು ಆಧರಿಸದ ಬದುಕು ಅರ್ಥಹೀನವೆಂದು ಪ್ರಚಾರಗಳನ್ನು ರೂಪಿಸುತ್ತ ಬೆಳೆಯುತ್ತಿವೆ. ಈ ಮಾಧ್ಯಮಗಳು ತಲುಪಿಸುತ್ತಿರುವ ಜೀವನ ಸಂದೇಶಗಳನ್ನು, ಅವುಗಳ ಹಿಂದಿನ ಕ್ರೌರ್ಯಗಳ ಸ್ವರೂಪಗಳನ್ನು, ಎಷ್ಟು ವಿಸ್ತರಿಸಿ ವಿವರಿಸಿದರೂ ಅದರಾಚೆಗೂ ಅವು ಇನ್ನೂ ಉಳಿಯುತ್ತವೆ. ಈ ಎಲ್ಲ ಸಂದೇಶಗಳ ತಾತ್ವಿಕ ಸ್ವರೂಪವೆಂದರೆ, ನಿನ್ನ ಅಹಂ ಮತ್ತು ಭೋಗಾಕಾಂಕ್ಷೆಗಳನ್ನು ಯಾವ ಬೆಲೆ ಕೊಟ್ಟಾದರೂ ತೀರಿಸಿಕೊಳ್ಳು ಹಾಗೂ ‘ಹಣ’ ನಮಗೆ ತಂದುಕೊಡಲಾಗದ ಯಾವ ವಿಷಯವೂ ಜೀವನದ ಬಹಳ ಮುಖ್ಯ ಭಾವವೆಂಬುದನ್ನು ಒಪ್ಪಬೇಡ ಎಂಬುದು ಅದರ ಕೇಂದ್ರವಾಗಿದೆ. ಹೀಗಾಗಿ ಸಾವಿನಂತಹ ಅತಾರ್ಕಿಕ ದುಃಖಗಳೂ ಇಂದು ಜೀವನದ ಅಂತರಂಗದರ್ಶನದತ್ತ ಲಕ್ಷ್ಯ ಸೆಳೆಯುವಲ್ಲಿ ವಿಫಲವಾಗಿವೆ. ನನ್ನ ಸ್ನೇಹಿತನೊಬ್ಬ ತನ್ನ ತಂದೆ ತೀರಿದಾಗ, ದಾಹ-ಕರ್ಮದಲ್ಲಿ ತೊಡಗಿದ್ದ ಸ್ಮಶಾನದಲ್ಲಿ ಆ ದುಃಖದ ವಾತಾವರಣದಲ್ಲಿ ಅವನಿಗೊಂದು ಮೊಬಾಯಿಲ್ ಕರೆ ಬಂತು. ಆತ ತಕ್ಷಣ ತನ್ನ ದುಃಖವನ್ನೆಲ್ಲ ಹಿಂದೆ ಸರಿಸಿ, ಫೋನಿನಲ್ಲಿ ತನ್ನ ಬಾಸ್ ಜೊತೆ ಕೃತಕ-ದುಃಖದ ಆಹ್ಲಾದನೆಯಲ್ಲಿ ಮಾತನಾಡಿದ. ನನಗೆ ಅಸಹ್ಯವೆನಿಸಿತು. ಆದರೆ ಆತ ಹೇಳಿದ, “ನಮ್ಮಾ ಫೋನ ಬಂದದ್ದು ನಮ್ಮ ಬಾಸ್‌ನಿಂದ. ಅಂವಗ ಇನ್ನೊಬ್ಬರ ದುಃಖಾ ಸೇರೂದಿಲ್ಲಾ. ಅದ್ರ ಅವನಿಂದ ನನಗ ಭಾಳ ಲಾಭ ಅದ. ಮುಂದಿನ ತಿಂಗಳ ನನ್ನ ಅಂವಾ ಅಮೇರಿಕಾಕ್ಕ ಕಳಸಾಂವ ಇದ್ದಾನ. ನಾ ಮಾತಾಡದೇ ಬಿಟ್ಟ ಅವಕ್ಕ ಅಂವಾ ಏನಾರ ಮತ್ತೊಬ್ಬರನ್ನ ಕಳಿಸಿದ್ರ ಲುಕ್ಸಾನು ನನಗss ಅಲ್ಲ” ಅಂದ. ಈ ಬಗೆಯ ದೃಷ್ಟಿಕೋನಗಳನ್ನೂ ನಿರ್ಭಿಡೆ, ವಾಸ್ತವಾದೀ, ಸ್ಪಷ್ಟತನ, ದೂರದೃಷ್ಟಿ, ನಿಸ್ಸಂಕೋಚತೆ, ಮುಕ್ತತೆ, ಇತ್ಯಾದಿ ಹಲವು ಚೌಕಟ್ಟುಗಳಲ್ಲಿಟ್ಟು ಅವುಗಳನ್ನೂ ಅತ್ಯಾವಶ್ಯಕ ಜೀವನ ಮೌಲ್ಯಗಳೆಂದು ಸ್ಥಾಪಿಸುವ ಕೆಲಸವನ್ನೂ ಈ ಮಾಹಿತಿ - ಆಧಾರಿತ ವೈಚಾರಿಕತೆ ಇಂದಿಗೂ ಮಾಡುತ್ತಲೇ ಇದೆ.

ಆದರೆ ಈ ಮಾಹಿತಿಗಳು ಒಂದು ಸೃಜನಶೀಲ ಮನಸ್ಸನ್ನೂ ಪ್ರವೇಶಿಸಿದರೆ ಆಗ ಆಗುವ ಪ್ರಕ್ರಿಯೆಗಳ ಸ್ವರೂಪವೇನು? ಎಂಬುದು ಬಹಳ ಕುತೂಹಲಕಾರೀ ಪ್ರಶ್ನೆಯಾಗಿದೆ. ಈ ಮಾಹಿತಿಗಳನ್ನು ನಾವು ಸ್ಥೂಲವಾಗಿ ಎರಡು ಬಗೆಯ ಮಾಹಿತಿಗಳನ್ನಾಗಿ ವಿಭಾಗಿಸಬಹುದು. ಮೊದಲನೆಯದಾಗಿ ಭೂತಕಾಲದಲ್ಲಿ ಈಗಾಗಲೇ ದಾಖಲಿತವಾದ ಹಲವು ವಿಭಿನ್ನ ಕ್ಷೇತ್ರಗಳ ಮಾಹಿತಿಗಳು. ಇನ್ನೊಂದು, ನಿತ್ಯವೂ ವರ್ತಮಾನದಲ್ಲಿ ರೂಪುಗೊಳ್ಳುತ್ತ, ನಾಶವಾಗುತ್ತ ನಡೆದಿರುವ ಮಾಹಿತಿಗಳು. ಸೃಜನಶೀಲ ಅಭಿವ್ಯಕ್ತಿಗೆ ಇವೆರಡೂ ಇಂದು ಅತ್ಯವಶ್ಯವಾದ ಕಚ್ಚಾ ಸರಕುಗಳಾಗಿ ಕಾಣುತ್ತವೆ. ಆದರೆ ಯಾವ ಮಾಹಿತಿಯೇ ಇರಲಿ, ಅದು ತನ್ನ ಬದುಕುವ ಕ್ರಮದ ಅವಿಭಾಜ್ಯ ಅಂಗವಾಗಿ, ಉಸಿರಾಟದಷ್ಟೇ ಸಹಜವಾಗಿ, ಒಳಗಿಳಿಯದಿದ್ದರೆ, ಅದರ ಬಳಕೆ ಕೃತಕವಾಗುತ್ತದೆ ಇಲ್ಲವೇ ಮೇಲ್ದರಿನದಾಗಿರುತ್ತದೆ. ಎಂಥ ಪ್ರಬಲ ಜಾಗತೀಕರಣದ ವ್ಯವಸ್ಥೆಯಲ್ಲೂ ಒಂದು ಸೃಜನಶೀಲ ಪ್ರತಿಭೆ ಅರಗಿಸಿಕೊಳ್ಳಬಹುದಾದ ಲೋಕಾನುಭವಕ್ಕೆ ತತ್ವ-ವಸ್ತು-ವಿನ್ಯಾಸ ಎಲ್ಲ ನೆಲೆಗಳಲ್ಲೂ ಅದರದೇ ಆದ ಅಸಲೀ ಶಕ್ತಿಯೂ ಇರುತ್ತದೆ, ಮಿತಿಯೂ ಇರುತ್ತದೆ. ಆದರೆ ಈ ಮಿತಿಯನ್ನು ಅಲಕ್ಷಿಸಿ, ಮಾಹಿತಿ ಎಂಬ ನಿರಾಕಾರ ಶಕ್ತಿಯನ್ನು ಅಪ್ಪಿಕೊಂಡು ಅದರ ಮೂಲಕ ನಾನು ಎಲ್ಲವನ್ನೂ ಅಭಿವ್ಯಕ್ತಿಸುತ್ತೇನೆಂದು ಹೊರಡುವುದು, ಬಹಳ ಅಪಾಯಗಳನ್ನು ತಂದೊಡ್ಡುತ್ತದೆ. ಜೀವನ-ಮೌಲ್ಯಗಳು ಕಾಲೋಚಿತವಾಗಿ ಒಂದು ಇನ್ನೊಂದನ್ನು ವಿರೋಧಿಸಬೇಕಾದ ಸಂದರ್ಭದಲ್ಲೂ ನಮ್ಮ ಹಿಂದಿನ ಲೇಖಕರಲ್ಲಿ ಈ ಎಚ್ಚರ ಉಳಿದಿರುತ್ತಿತ್ತು. ಅಂತಲೇ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲೇ ಬಹಳ ಆಳವಾದ ನಿಕ್ಷೇಪಗಳನ್ನು ಕಂಡರಿಸಿಕೊಂಡರು.

ಆದರೆ ಇಂದು ನಾವು ಎರಡು ತಪ್ಪುಗಳನ್ನು ಮಾಡುತ್ತಿದ್ದೇವೆ. ಒಂದೆಂದರೆ, ಅಭಿವ್ಯಕ್ತಿಗೆ ದಕ್ಕಿದ ವಸ್ತು-ತಂತ್ರಗಳು, ಆಂತರಿಕ ಅವಶ್ಯಕತೆಯಾಗಿ ಬಂದಿವೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿ ಕೊಳ್ಳುವದಿಲ್ಲ. ಯಾವ 'ಕಂಡ' ಅನುಭವವೂ 'ಉಂಡ' ಅನುಭವವಾಗದೇ ಅದಕ್ಕೆ ಸೃಜನಶೀಲ ಸ್ವರೂಪ ದಕ್ಕುವದಿಲ್ಲವೆಂಬುದನ್ನು ನಾವು ನಂಬುವದಿಲ್ಲ. ಇದರ ಪರಿಣಾಮವಾಗಿ ಲೇಖಕ, ತಾನು ಮಾಹಿತಿಗಳಿಂದ ತಿಳಿದ – ಅಂದರೆ ಓದು, ನೆನಪು, ಕಡತಂದ ವಿಚಾರ – ಎಲ್ಲದರ ಮೂಲಕ ಮಾಹಿತಿಗಳ ಸ್ತರದಲ್ಲಿ ತಿಳಿದ – ಒಂದು ವಸ್ತುವನ್ನು ಬಳಸಲು ತೊಡಗುತ್ತಾನೆ. ಅದರಲ್ಲೂ ತಾನು ಅಪ್ಪಾಸಿಕೊಂಡಿರುವ ವಸ್ತುವನ್ನು ನಿಷೇಧಾತ್ಮಕವಾಗಿ ಅನುಸಂಧಾನ ಮಾಡಿಕೊಂಡಿದ್ದರಂತೂ, ಅಲ್ಲಿ ಬಹಳಷ್ಟು ತೊಡಕುಗಳು ಉಂಟಾಗುತ್ತವೆ. ಆತ ಬಳಸುವ ರೂಪಕ-ಸಂಕೇತ-ಜೀವನ ವಿಧಾನ-ಆ ಸಂಸ್ಕೃತಿಯ ಬಳಸಲ್ಪಟ್ಟ ಪಠ್ಯಗಳು – ಇವೆಲ್ಲವೂ ಅವುಗಳ ಅಸಲೀ ಅನುಭೂತಿಯ ಕೊರತೆಯಿಂದಾಗಿ – ಮಾಹಿತಿಯ ನೆಲೆಯಲ್ಲೂ ಅನೇಕ ತಪ್ಪುಗಳನ್ನು ಒಳಗೊಂಡು ಬಿಡುತ್ತವೆ. ಹಾಗಾದರೆ ಕನಿಷ್ಠ ಪಕ್ಷ ಈ ಬಗೆಯ ಪಠ್ಯಾತ್ಮಕ ದೋಷಗಳನ್ನಾದರೂ ಯಾರಾದರೂ ಎತ್ತಿ ತೋರಿಸಬೇಕಲ್ಲ ಎಂದರೆ ಅದು ಸಾಧ್ಯವಾಗಬರುವದಕ್ಕೆ ಈ ಮಾಹಿತಿಗಳ ಜಗತ್ತಿನದೇ ಆದ ಇನ್ನೊಂದು ಕಾರಣವೂ ಇದೆ.

ಈ ಮಾಹಿತಿಗಳು, ಅವು ಭೂತಕಾಲದಲ್ಲಿ ಸಿದ್ಧವಾದ ವಿಷಯಗಳಾಗಿರಲಿ, ಇಂದೇ ಹುಟ್ಟಿದವುಗಳಾಗಿರಲಿ, ಅವು ಪರಸ್ಪರವಾಗಿ ಒಂದುಗೂಡಿ, ಎಷ್ಟೊಂದು ಅಸಂಖ್ಯ ಆಕೃತಿಗಳನ್ನು ಪಡೆಯುತ್ತವೆಂದರೆ ಅದರ ಮೂಲಕ, ಮೂಲದ ಒಂದು ಪಿಂಡಗೊಂಡ ತಿಳುವಳಿಕೆ ಯಾರಿಗೂ ಆಗುವದು ಸಾಧ್ಯವೇ ಇಲ್ಲ. ಅದರ ಬದಲು ಕೆಲವು ಬಗೆಯ ಮಾಹಿತಿಗಳ ಮೂಲಕ ಕೆಲವು ಬಗೆಯ ಜೀವನ ದೃಷ್ಟಿಗಳನ್ನು ರೂಪಿಸಿಗೊಂಡ ಕೆಲವು ವಿಚಾರ-ಒಕ್ಕೂಟಗಳು ಏಕಕಾಲದಲ್ಲಿ ಚಾಲ್ತಿಯಲ್ಲಿರುತ್ತವೆ. ಈ ಒಕ್ಕೂಟಗಳ ಮಧ್ಯವೂ ಮೂಲಭೂತ ಸಂವಾದ ಸಾಧ್ಯವಾಗದಷ್ಟು, ಅವುಗಳ ಸುತ್ತ ಒಂದು ಅಭೇದ್ಯ ಆವರಣವು ಅವುಗಳ ಭೌತಿಕ ಅಸ್ತಿತ್ವದ ರಕ್ಷಣೆಗಾಗಿಯೇ ರೂಪುಗೊಂಡಿರುತ್ತದೆ. ಕಲೆಯ ರೂಪದ ಆಕೃತಿಗಳನ್ನು ಅವು, ಅವುಗಳ ಧ್ವನಿ-ಘಟಕಗಳ ಅಪಾರ ಸಾಧ್ಯತೆಗಳನ್ನು ಬಳಸಿಕೊಳ್ಳುತ್ತ ವ್ಯಾಖ್ಯಾನಿಸುತ್ತವೆ. ಮಾನವಿಕ ನೆಲೆಯ ಚಿಂತನೆಗಳನ್ನು ವಾಸ್ತವವಾದೀ ದರ್ಶನದ ಅಗತ್ಯವನ್ನು ಸಾರುವ ನೆಲೆಯಲ್ಲಿ ಅನುಸಂಧಾನಿಸಿಗೊಳ್ಳುತ್ತವೆ. ಅಮೂರ್ತ ತತ್ವಗಳು, ಶ್ರದ್ಧೆಯ ಮೂಲಕವೇ ದಾಟಬೇಕಾದ ಜೀವನಸತ್ಯಗಳನ್ನು, ಅವು ಒಂದು ಬಗೆಯ ಅಪಹಾಸ್ಯ, ವ್ಯಂಗ್ಯ, ಕನಿಕರದಿಂದಲೇ ನೋಡುವ ಮೂಲಕ ಪ್ರವೇಶವನ್ನೇ ನಿರಾಕರಿಸುತ್ತವೆ. ಆದರೆ ಇಡೀ ಆಧುನಿಕ ಮಾಹಿತಿ-ತಂತ್ರಜ್ಞಾನದ ದರ್ಶನವನ್ನು ತಾತ್ವಿಕವಾಗಿ ವಿರೋಧಿಸಿ ಬೆಳೆದು ಬಂದಿರುವ ಘನವಾದ ಪ್ರಾಚೀನ ದರ್ಶನದ ಜೊತೆಗೆ ಇದು ವಿಗ್ರಹ-ಭಂಜಕ ನೆಲೆಯಲ್ಲೇ ಸಂಬಂಧವನ್ನಿಟ್ಟುಕೊಳ್ಳಬಯಸುತ್ತದೆ. ಹೀಗಾಗಿ ಮಾಹಿತಿಗಳ ಸ್ತರದಲ್ಲಿರುವ ಸೃಜನಶೀಲ ಕೃತಿಯೊಳಗಿನ ತಪ್ಪುಗಳು, ಶ್ರದ್ಧೆಯ ಬಲದಿಂದ ಬೆಳೆಯುವ ಪೂರ್ಣಕತೆಗೆ ಬಹಳ ಮುಖ್ಯವೆಂದು ಎನ್ನಿಸುವದೇ ಇಲ್ಲ. ಮಾಹಿತಿಗಳ ದರ್ಶನಜಾಲದಲ್ಲೇ ಸೋಕ್ಷ-ಮೋಕ್ಷ ಕಾಣ ತಿಳಿಸುವ ಗುಂಪುಗಳು ಎಷ್ಟು ಪಾರಿಭಾಷಿಕ ಅಂತರದಲ್ಲಿವೆ ಎಂದರೆ, ಅಲ್ಲಿ ಸಂವಾದವೇ ಸಾಧ್ಯವಿಲ್ಲ. ಇಷ್ಟಕ್ಕೂ 'ಮಾಹಿತಿ'ಯ ಮೂಲಕ ದಕ್ಕಿದ ವಿಷಯವನ್ನು ಅನುಭವದಿಂದ ದಕ್ಕಿದ್ದೆಂಬಂತೆ ಕಾಣಬಯಸುವ, ಕಾಣಿಸಬಯಸುವ, ಸೃಜನಶಕ್ತಿ – ಅದು ಎಷ್ಟೇ ಪ್ರಚಂಡ ತಾಂತ್ರಿಕ ಚಳಕಗಳನ್ನು ಕೈವಶಮಾಡಿಕೊಂಡಿದ್ದರೂ ಬಹಳ ಬೇಗ ದಣಿದುಬಿಡುತ್ತದೆ. ಅದಕ್ಕೆ ತನ್ನ ಕೃತಿಯ ಬಗೆಗೆ ತನಗೆ ಯಾವುದೇ ಕರುಳ ಬಳ್ಳಿಯ ಸಂಬಂಧ ಮಾನಸಿಕವಾಗಿ ಉಳಿದಿರುವದಿಲ್ಲ. ಸಾತತ್ಯದ ಸಂಬಂಧವೂ ಅಲ್ಲಿರುವುದಿಲ್ಲ.

ಪ್ರಜ್ಞೆಗೆ ನೇರವಾಗಿ ಧಾವಿಸಬಲ್ಲ ಮಾಹಿತಿಗಳು, ಸೃಜನಶೀಲ ಮನಸ್ಸನ್ನು ಸಂವೇದನೆಯ

ಸಂಪರ್ಕದಿಂದ ತನ್ನ 'ಭೌತಾರಾಧನೆ'ಗೆ ಅಡ್ಡಿಯಾಗದಂತೆ ದೂರವಿಡಲು, ಹಾಗೂ ಹೀಗೆ ದೂರವಿರುವ ಸ್ಥಿತಿಯನ್ನು ಮರೆಮಾಚಲು ಇಲ್ಲವೆ ಸುಳ್ಳು ಅಭಿನಿವೇಶಗಳಿಂದ ಹಾಗೆ ಆಗಿಲ್ಲವೆಂದು ಸಿದ್ಧಪಡಿಸಲು ನಿರಂತರವಾಗಿ ದುಡಿಯುತ್ತಿರುತ್ತವೆ. ಒಬ್ಬ ಪರಿಷ್ಕೃತ ರಸಾದರ್ಶ ಓದುಗನಾಗಿ ಮಾತ್ರ ವಿಮರ್ಶಕ ಉಳಿಯಲಾಗದ್ದಕ್ಕೂ ಇದೇ ಕಾರಣವಿರಬಹುದೇನೋ. ಸಾಂಸ್ಕೃತಿಕ ಮಾಹಿತಿಗಳ ಸಂಗ್ರಹವನ್ನು ಸಾಂಸ್ಕೃತಿಕ ನಿಷ್ಠೆ ಎಂದು ಅಂಗೀಕರಿಸಿ ಸಾಹಿತ್ಯೇತರ ಜ್ಞಾನಶಿಸ್ತುಗಳ ಮಾಹಿತಿಗಳ ಯೋಜ(ಜ)ನಾಬದ್ಧ ಆಕೃತಿಯನ್ನು ಸಾಹಿತ್ಯೇತರ ಹೊಸ ಸಾಹಿತ್ಯ-ರೂಪಗಳ ಕೋಷ್ಟಕದನ್ವಯ, 'ಆಧುನಿಕ ಪುರಾಣ', 'ದಲಿತ ಮಹಾಕಾವ್ಯ', 'ಜಂಗಮ ಸಂಸ್ಕೃತಿಯ ಅನುಸಂಧಾನ'... ಇತ್ಯಾದಿ ಹೊಸ ಹೊಸ ಶೀರ್ಷಿಕೆಗಳಡಿ ಅದರ ವಿಶಿಷ್ಟತೆಯನ್ನು ಸಾರಬೇಕಾಗಿರುವದು ಇಂದಿನ ಸಾಹಿತ್ಯ ಸೃಷ್ಟಿ ಮತ್ತು ರಸಗ್ರಹಣದ ಅಂತಿಮ ಗಂತವ್ಯಗಳಾಗಿಬಿಟ್ಟಿವೆ. ಓದುಗನಾಗಿ ನನಗೊಂದು ಜೀವನಾನುಭವವಿದೆ. ನನ್ನೆದುರಿನ ಕೃತಿಯಲ್ಲಿ ಕಲಾನುಭವವಾಗಿ ಪರಿವರ್ತಿತವಾದ ಒಂದು ಜೀವನಾನುಭವವಿದೆ. ಓದುವ ಕ್ರಿಯೆಯಲ್ಲಿ ನನ್ನ ಜೀವನಾನುಭವ ಕೃತಿಯೊಳಗಿನ ಜೀವನಾನುಭವಕ್ಕೆ ಎದುರಾಗುವದು ಇಂದು ಸಾಧ್ಯವಿಲ್ಲ. ಅದರ ಬದಲು 'ಸಾಹಿತ್ಯ'ವೆಂಬ ಒಟ್ಟು ಕ್ರಿಯಾಘಟಕದ ಬಗೆಗೆ ಹಲವು ಜಾಗತಿಕ ಮಾಹಿತಿಗಳಿಂದ ನಾನು ರೂಪಿಸಿಗೊಂಡ ನನ್ನ ಬದುಕುವ ರೀತಿಗೆ ಸಂಬಂಧವೇ ಇಲ್ಲದ – ಒಂದು ಬೌದ್ಧಿಕ ಅಸ್ಥಿರ ಪರಿಕಲ್ಪನೆಯನ್ನು ಮಾತ್ರ ನಾವು ಆಧರಿಸಿ, ಕೃತಿಗೆ ಪ್ರತಿಕ್ರಿಯಿಸುವ ಸುರಕ್ಷಣಾತ್ಮಕ ತಂತ್ರಗಳನ್ನು ನಾವಿಂದು ಬಳಸುತ್ತಿದ್ದೇವೆ. ಇದು ಇಬ್ಬರಿಗೂ ಅನುಕೂಲಕರವಾದ ವ್ಯವಸ್ಥೆಯೇ.

ಮಾಹಿತಿಗಳು ಕೂಡ ಒಂದು ಅಖಂಡ ಜ್ಞಾನಕಾಂಡದ ಪ್ರಾಥಮಿಕ ಸ್ತರದ ತಿಳುವಳಿಕೆಯ ಹಂತಗಳಾಗಿರುವದು ಸಾಧ್ಯವಿಲ್ಲವೆ? ಎಂಬ ವಾದವೂ ಇದೆ. ಅದು ನಿಜ ಕೂಡ. ಪರಮಾತ್ಮನ ಅಸ್ತಿತ್ವವನ್ನು ಚರ್ಚಿಸುವ ಜ್ಞಾನಶಾಖೆಗಳ ಪ್ರಾಥಮಿಕ ಹಂತಗಳಲ್ಲಿ ದೇವಪೂಜಾ ವಿಧಾನದ ಮಾಹಿತಿಗಳಿರುವಂತೆ, ಅತೀಂದ್ರಿಯ ವಲಯಕ್ಕೆ ಹೋಗಲು ಐಂದ್ರಿಯಕವೂ ಒಂದು ಸಾಧನವಾದಂತೆ ಒಂದು ಪ್ರಚಂಡ ಭೌತಜ್ಞಾನ-ಕಾಂಡದ ಪ್ರಾಥಮಿಕ ಹಂತದ ತಿಳುವಳಿಕೆಗಳಾಗಿ ಆಧುನಿಕ ಮಾಹಿತಿಗಳು ಇದ್ದಿರಬಹುದು. ಆದರೆ ಅಂತಿಮವಾಗಿ ಈ ಆಧುನಿಕ ಜ್ಞಾನಕಾಂಡದ ಗಂತವ್ಯವಾದರೂ ಯಾವುದು ಎಂಬುದನ್ನು ಯೋಚಿಸಿದರೆ, ಅದು ಮತ್ತು ಅದರ ಅಡಿಪಾಯದ ಮಾಹಿತಿಗಳು ಏಕೆ ಅಪಾಯಕಾರಿ ಎಂಬುದು ತಿಳಿಯುತ್ತದೆ. ಚರಿತ್ರೆ, ಅರ್ಥಶಾಸ್ತ್ರ, ಪರಿಸರ, ಆರೋಗ್ಯಶಾಸ್ತ್ರ, ಯಾವುದೇ ಕ್ಷೇತ್ರದ ಇಂದಿನ ಜ್ಞಾನಕಾಂಡವೂ ನಿರಂತರ ತುಡಿಯುತ್ತಿರುವದು ಅಸ್ಥಿರತೆ ಮತ್ತು ಭೋಗವಾದಗಳ ವಿಜೃಂಭಣೆಗಾಗಿ ಅಂತೆಯೇ ಕ್ರೌರ್ಯ ಮತ್ತು ಹಿಂಸೆಗಳ ಅತ್ಯಾಧುನಿಕ ಹೆಣಿಕೆಯಿಂದೊಡಗೂಡಿದ 'ನವಜ್ಞಾನ-ಶಾಸ್ತ್ರ' ಒಂದು, ಇಂದು ಮಾಹಿತಿಗಳ ಅಸ್ತಿತ್ವವನ್ನು ಸಮರ್ಥಿಸಲು ರೂಪುಗೊಳ್ಳುತ್ತಿದೆ. ಅದರ ಚಲನೆ ಬಿಂದುವಿನಿಂದ ಸಮೂಹದತ್ತವಾಗಿರುತ್ತದೆ. ಏಕೆಂದರೆ, ಸಮೂಹದಲ್ಲಿ ಕ್ರೌರ್ಯದ ಹೊಣೆ ಒಬ್ಬನ ಮೇಲೆ ಇರುವುದಿಲ್ಲ ಎನ್ನುವುದಕ್ಕಿಂತ ಯಾರ ಮೇಲೂ ಇರುವುದಿಲ್ಲ. ಆದರೆ ಅದರ ಲಕ್ಷವೆಲ್ಲ ಸ್ವಕೇಂದ್ರಿತವೇ.

ಒಂದು ಕಾಲದಲ್ಲಿ ಒಂದು ಬಗೆಯ ಸಾಮಾನ್ಯ ತಿಳುವಳಿಕೆ ಇರುತ್ತಿತ್ತು. 'ಮಾಹಿತಿ' ಅದು ಯಾರ ಬಗೆಗೆ ಇರಲಿ, ಯಾವುದರ ಬಗೆಗೆ ಇರಲಿ, ಅದನ್ನು ಬಳಸುವ ಅವಶ್ಯಕತೆಯ ಇದೆಯೇ? ಅದರಿಂದ ವ್ಯಷ್ಟಿ, ಸಮಷ್ಟಿ, ಎರಡೂ ನೆಲೆಗಳಲ್ಲೂ ಯಾವುದೇ ಬಗೆಯ ಅಪಾಯ ಇರುವದಿಲ್ಲ ತಾನೇ? ಎಂಬೆಲ್ಲ ವಿಚಾರಗಳ ನಂತರ ಅದನ್ನು ಬಳಸಲಾಗುತ್ತಿತ್ತು. ಇಲ್ಲಿರುವದು ಅಧೈರ್ಯವಲ್ಲ ಅಥವಾ ಲಾಭದ ಒಡಂಬಡಿಕೆಯಲ್ಲ. 'ಮಾಹಿತಿ' ಎಂಬ ಸಂಚಾರೀ ತಿಳಿವನ್ನು ಬಳಸುವಾಗ ಇಟ್ಟುಕೊಳ್ಳಬೇಕಾದ ಮಾನವೀಯ ಎಚ್ಚರಗಳ ಬಗೆಗಿನ ಕಾಳಜೀ ಮಾತ್ರ. ಆದರೆ ಯಾವಾಗಲೂ ಇದೇ ಉದ್ದೇಶದಿಂದಲೇ

ಮಾಹಿತಿಗಳ ನಿರ್ವಹಣೆ ಎಲ್ಲ ಕಾಲದಲ್ಲೂ ಆಗುತ್ತಿತ್ತು ಎಂದೂ ಹೇಳಲಾಗುವುದಿಲ್ಲ. ರಾಗ-ದ್ವೇಷಗಳ ಸಂಯುಕ್ತ ಮನಸ್ಥಿತಿಯ ಅನುಕೂಲತೆ, ಅನಾನುಕೂಲತೆಗಳು, ಈ ಕ್ರಿಯೆಯಲ್ಲಿ ಆಗಾಗ ಭಾಗವಹಿಸುವ ಕ್ರಿಯೆಯೂ ಆಗಾಗ ನಡೆದಿರಬಹುದು. ಮಾಧ್ವ ಪರಂಪರೆಯ ಉತ್ತರಾಧಿಮಠದಲ್ಲಿದ್ದ ಶ್ರೀ ಸತ್ಯಧ್ಯಾನ ತೀರ್ಥರೆಂಬ ಸ್ವಾಮಿಗಳಿಗೂ, ಟಿಳಕರಿಗೂ, ಜಮಖಂಡಿಯಲ್ಲಿ ಒಂದು ವಾದವು ೧೨.-೨-೧೯೧೭ರಂದು ನಡೆಯಿತು. ಟಿಳಕರ 'ಗೀತಾರಹಸ್ಯ'ದಲ್ಲಿ ಗೀತೆಯ ಕೆಲವು ವಿಷಯಗಳಿಗೆ ಟಿಳಕರು ಕೊಟ್ಟ ಅರ್ಥ ತಪ್ಪಾಗಿದೆ ಎಂದು ಮನಗಾಣಿಸಲು ನಡೆದ ಎರಡು ದಿನಗಳ ಚರ್ಚೆ ಇದು. ಆ ಚರ್ಚೆ ನಿಜವಾಗಿ ಯಾವ ವಿಷಯದ ಬಗೆಗೆ ನಡೆಯಿತು, ಅವರ ನಿಜವಾದ ಮಂಡನೆಗಳು ಯಾವ ಬಗೆಯದಾಗಿದ್ದವು ಎಂಬ ಬಗೆಗೆ ಆ ಕಾಲದ ಪುಣೆಯ ಮರಾಠೀ ಪತ್ರಿಕೆ 'ಭಾಲಾ'ದಲ್ಲಿ ಸಂಪೂರ್ಣವಾಗಿ ವರದಿಯಾಗಿತ್ತಂತೆ. ಆ ನಂತರ ಸತ್ಯಧ್ಯಾನರ ಚರಿತ್ರೆಯನ್ನು ಬರೆಯುವ ಕೆಲವು ಮಾಧ್ವ ಪಂಡಿತರು 'ಆ ವಾದದಲ್ಲಿ ಟಿಳಕರು ಸೋತರು, ಸತ್ಯಧ್ಯಾನರು ಗೆದ್ದರು' ಎಂದು ಬರೆದರು. ಆದರೆ ಆ ಸಭೆಯ ಮುಖ್ಯ ಸಂಯೋಜಕರಾಗಿದ್ದ ಆಲೂರು ವೆಂಕಟರಾಯರು, ಮಾಧ್ವ ಪಂಡಿತರು ತಮ್ಮ ಮಠ ಗುರುಗಳು, ತತ್ವ ಇವುಗಳ ಮೇಲಿನ ಅತಿಯಾದ ಮೋಹದಿಂದ ಸುಳ್ಳು ಇತಿಹಾಸವನ್ನು ಬರೆಯುತ್ತಾರೆಂದು ಸೂಚಿಸಿ, 'ನಿಜ ಹೇಳಬೇಕೆಂದರೆ ಆ ವಾದದಲ್ಲಿ ಯಾರೂ ಸೋಲಲಿಲ್ಲ, ಯಾರೂ ಗೆಲ್ಲಲಿಲ್ಲ. ಇಬ್ಬರಿಗೂ ಇಬ್ಬರ ಬಗೆಗೂ ಗೌರವ ಮೂಡಿತು' ಎಂದು ಮತ್ತೊಂದು ಬಗೆಯ ಒಡಕಿನ ಭಾಷೆಯಲ್ಲಿ ಸ್ಪಷ್ಟೀಕರಣ ನೀಡುತ್ತಾರೆ. ಹಾಗಾದರೆ ಅಲ್ಲಿ ನಿಜವಾಗಿಯೂ ನಡೆದ ಚರ್ಚೆಯ ಸ್ವರೂಪವೇನು? ಇದನ್ನು ಆಲೂರರೂ ಪೂರ್ತಿ ಬಿಚ್ಚಿ ಹೇಳುವದಿಲ್ಲ. ಶ್ರೀ ಮಳಗಿಯವರು ತಮ್ಮ 'ಸತ್ಯಧ್ಯಾನ ಲೇಖನ ತರಂಗ-೧'ರಲ್ಲಿ ಅದರ ಒಂದು ವಿವರಣೆ ನೀಡುತ್ತಾರಾದರೂ ಅದೇನು ಅವರು ಪ್ರತ್ಯಕ್ಷ ಕಂಡ ಘಟನೆಯಲ್ಲ. ಅಲ್ಲದೆ 'ಭಾಲಾ' ಪತ್ರಿಕೆಯ ವರದಿಯ ಅನುವಾದವೂ ಅಲ್ಲಿಲ್ಲ. ಹಾಗಾದರೆ, ಈ ಚರ್ಚೆಯ ಸ್ವರೂಪವನ್ನು ಅವರು ಎಲ್ಲಿಂದ ತಿಳಿದರು? ಎಂಬ ಬಗೆಗೆ ಅವರ ಆ ಕೃತಿಯ ಅನುಬಂಧದಲ್ಲೂ ಉಲ್ಲೇಖವಿಲ್ಲ. ಇಬ್ಬರು ಒಂದು ತಾತ್ವಿಕ ವಿಷಯದಲ್ಲಿ ಚರ್ಚೆ ಮಾಡಿದರೆ ಆ ಚರ್ಚೆಯ ಸ್ಪಷ್ಟ ರೂಪವನ್ನು ಮುಂದಿನ ತಲೆಮಾರಿಗೆ ಬಿಟ್ಟುಕೊಡಲಾಗದಷ್ಟು 'ಮಾಹಿತಿ'ಯ ಬಗೆಗೆ ಅಧೈರ್ಯವಿತ್ತೆ ಇವರಿಗೆ? ಎಂಬ ಸಂಶಯ ಬರುತ್ತದೆ. ಕೀರ್ತಿಯವರು ಒಂದೆಡೆ ಬರೆಯುತ್ತಾರೆ, 'ನಡೆದು ಬಂದ ದಾರಿ'ಯ ಸಂಪುಟಗಳಿಗೆ ಲೇಖಕರು, ಓದುಗರು ಸೂಚಿಸಿದ ಪ್ರತಿಕ್ರಿಯೆ ಕೂಡ ನಮ್ಮ ಸಾಹಿತ್ಯದ ಇತಿಹಾಸದ ಒಂದು ಭಾಗವಾಗಿದೆ. ಆ ಪ್ರತಿಕ್ರಿಯೆಗಳನ್ನು ಪ್ರಕಟಿಸಲು ಇನ್ನೂ ಕಾಲ ಪಕ್ವವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ' ಹೀಗೆಂದರೇನು? ಆ ಪ್ರತಿಕ್ರಿಯೆಯ ಬಗೆಗೆ ಮಾಹಿತಿ ನೀಡಲು 'ಕಾಲ ಪಕ್ವವಾಗುವದು' ಎಂದರೇನು? ಆ ಮಾಹಿತಿಯ ಪ್ರಕಟಣೆಯಿಂದ ಯಾರಿಗೂ ಯಾವ ಬಗೆಯ ಅಪಾಯವೂ ಇಲ್ಲವೆಂಬ ಖಾತ್ರಿಯಾದಂಥ ಕಾಲ ಬಂದ ಮೇಲೆಯೇ ಆ ಮಾಹಿತಿಗಳನ್ನು ಪ್ರಕಟಿಸಲು ಕೀರ್ತಿ ಕಾಯ್ದಿದ್ದರೆ? ಅವರು ಊಹಿಸಿಕೊಂಡಿದ್ದ ಅಪಾಯಗಳ ಸ್ವರೂಪವಾದರೂ ಏನಿತ್ತೋ ತಿಳಿಯುವದಿಲ್ಲ. ಆದರೆ ಹೊಸ ವಿಮರ್ಶಕರಲ್ಲಿ ಕೆಲವರು ನಿಜವಾಗಿಯೂ ಧೈರ್ಯವಂತರೂ ಆಗಿದ್ದಾರೆ. ಮತ್ತು ತಮ್ಮ ಧೈರ್ಯಶಾಲಿತ್ವವನ್ನು ಅತ್ಯಂತ ಆರೋಗ್ಯಪೂರ್ಣವಾಗಿ ಪ್ರಯೋಗಿಸಬಲ್ಲವರೂ ಆಗಿದ್ದಾರೆ.

ಇನ್ನೊಂದು ಬಗೆಯ ಸಂಬಂಧವೂ ಹೊಸ ಕೃತಿಗೂ, ಅದು ಬಳಸಿದ ಒಂದು ತತ್ವಶಾಖೆಯ ಪ್ರಾಥಮಿಕ ಹಂತದ ಮಾಹಿತಿಗೂ ಇರಬಹುದಾಗಿದೆ. ಸಂಸ್ಕಾರದ ನಾರಣಪ್ಪನ ಶವ-ಸಂಸ್ಕಾರದ ಪ್ರಶ್ನೆಗೆ ಪ್ರಾಣೇಶಾಚಾರ್ಯರಿಗೆ ಕಾದಂಬರಿಯ ಚೌಕಟ್ಟಿನಲ್ಲಿ ಉತ್ತರ ಸಿಕ್ಕುವದಿಲ್ಲವೆಂಬ ಒಂದು ಆತಂಕದ ಮೇಲೆ ಇಡೀ ಕೃತಿಯ ಕಟ್ಟಡ ಬೆಳೆಯುತ್ತ ಹೋಗುತ್ತದೆ. ಆದರೆ ಆ ಕಾದಂಬರಿ ಬಂದ ಕೆಲವೇ ದಿನಗಳಲ್ಲಿ ಒಬ್ಬರು 'ಧರ್ಮಸಿಂಧು'ವಿನಲ್ಲಿರುವ ಅದರ ಉತ್ತರವನ್ನು ಬಹಿರಂಗವಾಗಿಯೇ ಪ್ರಕಟಿಸಿದರು. ಆದರೆ

ಪ್ರಾಣೇಶಾಚಾರ್ಯರಂಥ ವಿದ್ವಾಂಸರಿಗೆ 'ಧರ್ಮಸಿಂಧು'ವಿನಂಥ ಒಂದು ಜನಪ್ರಿಯ ಧಾರ್ಮಿಕ ಮಾಹಿತಿಗಳ ಪುಸ್ತಕದ ಪರಿಚಯವಿದ್ದಿಲ್ಲವೇ? ತತ್ವಜ್ಞಾನದ ಜಿಜ್ಞಾಸೆಯಲ್ಲಿ 'ವಂಧ್ಯಾಪುತ್ರ ಪ್ರಕರಣ' ಎಂಬುದೊಂದಿದೆ. ಅಂದರೆ ಬಂಜೆಯ ಮಗನ ಸಮಸ್ಯೆ ಎಂದು ನಾವೇನಾದರೂ ಒಂದು ಚರ್ಚೆಯನ್ನು ಬೆಳೆಸಿದರೆ ಅದಕ್ಕೆ ಅಸ್ತಿತ್ವವೇ ಇರುವುದಿಲ್ಲವಾದ್ದರಿಂದ ಆ ಪ್ರಶ್ನೆಗೆ ಅರ್ಥವೇ ಇಲ್ಲ ಎನ್ನುವದು ಅದರ ಆಶಯ. ಹಾಗೇ ಧರ್ಮಸಿಂಧುವಿನಲ್ಲಿನ ಒಂದು ಮಾಹಿತಿಯ ಕೊರತೆಯಿಂದಾಗಿ ಅದು ತಿಳಿದೂ ಆಗಿರಬಹುದು, ತಿಳಿಯದೆಯೂ ಆಗಿರಬಹುದು – ಕೃತಿಯ ಅಭಿಪ್ರಾಯವೇ ಕುಸಿಯುತ್ತದೆ ಎಂದು, ಯಾವ ಕಾವ್ಯ ಧರ್ಮವೂ ಶುದ್ಧ ಧರ್ಮದ ಅಭಿಯಾಳಾಗಿಯೇ ಕೃತಿಯಲ್ಲಿ ದುಡಿಯಬೇಕೆಂದು ಬಯಸುವವರಿಗೆ ಆಗ ಅನ್ನಿಸಿದ್ದಂತೂ ನಿಜ. ಪ್ರಾಣೇಶಾರ್ಯರ ಹಿಂದಿನ ಭೌಮ ಜಗತ್ತನ್ನು ತಮ್ಮ ಅನುಭವಕ್ಕೆ ತಂದುಕೊಳ್ಳದೇ, ಆ ಜಗತ್ತಿನ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಒಳಸುಳಿಗಳನ್ನೂ ಮಾಹಿತಿಯ ರೂಪದಲ್ಲಿ ಕಲೆಹಾಕಿ, ಪ್ರಖರ ಪಶ್ಚಿಮದ ಕಣ್ಣುಗಳಿಂದ ಪರಿಪಾಕಗೊಳಿಸಿ, ಉಜ್ವಲ ಊರ್ವರತೆಯ ಭಾಷಿಕ ಬಿಸಿಯಲ್ಲಿ ಬೆಸೆದು, ಕೊಟ್ಟಾಗಲೂ ಈ ಪ್ರಶ್ನೆ ಪೂರ್ಣಾವಧಿ ಕಲೆಗಾರರಲ್ಲದವರಿಗೆ ಜ್ವಲಂತ ಪ್ರಶ್ನೆಯಾಗಿಯೇ ಆಗ ಕಂಡಿತು. ಮಾಹಿತಿಗಳು ನೀಡಬಲ್ಲ ಕಣ್ಕಟ್ಟುಗಳನ್ನು ಕಲಾತ್ಮಕ ಅಸಲೀ ಕಾಣ್ಕೆಗಳನ್ನಾಗಿ ಪರಿವರ್ತಿಸುವದು ಬಲುದೊಡ್ಡ ಲೇಖಕನಿಗೂ ಒಂದು ಅಗ್ನಿದಿವ್ಯವೇ ಸರಿ.

'ಮಾಹಿತಿ'ಗಳನ್ನು ಇನ್ನೊಂದು ಬಗೆಯಲ್ಲಿ, ಲಘು ವೈನೋದಿಕ ಸಂಯೋಜನೆಗೊಳಪಡಿಸಿ, ತನ್ಮೂಲಕ 'ರುಚಿ-cut' ಆದ ಲೇಖನಗಳನ್ನು ಆರೋಗ್ಯಪೂರ್ಣವಾಗಿಯೇ ರೂಪಿಸಬಹುದಾಗಿದೆ. ಇತ್ತೀಚೆಗೆ ನಾನು ಓದಿದ ಶ್ರೀ ಗಿರಡ್ಡಿ ಗೋವಿಂದರಾಜರ 'ಆತ್ಮೀಯ' ಮತ್ತು 'ಸಾಹಿತ್ಯ ಲೋಕದ ಸುತ್ತಮುತ್ತ' ಈ ಬಗೆಯ ಕೃತಿಗಳು. 'ಆತ್ಮೀಯ'ದಲ್ಲಿ ಅನೇಕ ಧೀಮಂತ ಸಾಹಿತಿಗಳ ಬಗೆಗೆ, ತಮ್ಮ ಸ್ವಂತದ ಅನುಭವ, ಓದಿ ತಿಳಿದ ಮಾಹಿತಿ, ಕೇಳಿ ಕಲೆ ಹಾಕಿದ ಮಾಹಿತಿ, ಎಲ್ಲವನ್ನೂ ಸಂಕಲಿಸಿ, ತುಂಬ ಸುಂದರವಾದ, ಸವಿಮರ್ಶಾತ್ಮಕ ಸಹಜ ನೋಟದ, ಕೀಟಲೆ, ಚೇಷ್ಟೆ, ಕೊಂಕು, ಶ್ಲೇಷೆ, ವ್ಯಂಗ್ಯ, ಇತ್ಯಾದಿ ರುಚಿಕರವಾದ ಮಸಾಲೆಗಳನ್ನು ಪ್ರಮಾಣಬದ್ಧವಾಗಿ ಬಳಸಿ, ನಿರ್ಮಿಸಿಕೊಟ್ಟ ವ್ಯಕ್ತಿ-ಚಿತ್ರಗಳು ಇವೆ. ಮಾಹಿತಿಗಳು ಅವು ಯಾವ ಮೂಲದಿಂದಲೇ ಬಂದಿರಲಿ, ಅವುಗಳ ಸಂಚಾರೀ ಅಸ್ಥಿರತೆಯನ್ನೂ ಪರಿಭಾವಿಸುತ್ತಲೇ ಬಳಸಿದ ಒಂದು ವಿಶಿಷ್ಟ ಕ್ರಮ. ಇಲ್ಲಿ ವರ್ಣಿತವಾದ ವಿವರಗಳನ್ನು ಸುಖದ ಅನುಭವಗಳನ್ನಾಗಿ ಮಾಡುತ್ತವೆ. 'ಸಾಹಿತ್ಯ ಲೋಕದ ಸುತ್ತಮುತ್ತ' ಕೃತಿ 'ಆತ್ಮೀಯ'ದಷ್ಟು ನಿಬಿಡವಾಗಿಲ್ಲವಾದರೂ, ಇಲ್ಲಿ ಬಳಸಲ್ಪಟ್ಟಿರುವ ಮಾಹಿತಿಗಳ ಪ್ರಮಾಣ 'ಆತ್ಮೀಯ'ಕ್ಕಿಂತ ಹೆಚ್ಚೇ ಇದ್ದರೂ ಇಲ್ಲಿಯೂ ಕೂಡ ಒಂದು ಜೀವಂತ ಅನುಭವಾಧಾರಿತ ಕಲಾಸೃಷ್ಟಿಯ ಪ್ರಯತ್ನವೇ ಸ್ಪಷ್ಟವಾಗಿದೆ. ಈ ಕೃತಿಯಲ್ಲಿ ಬಳಸಲ್ಪಟ್ಟ 'ಮಾಹಿತಿ'ಗಳು ಇನ್ನೊಬ್ಬ ಪೂರ್ವಾಗ್ರಹದ ಲೇಖಕರ ಕೈಯಲ್ಲಿ ಸಿಕ್ಕಿದ್ದರೆ, ಅವು ಪರ-ವಿರೋಧೀ ವಾದಪತ್ರಗಳಾಗಿಬಿಡುವ ಸಂಭವವಿತ್ತು. ಆದರೆ ಗಿರಡ್ಡಿಯವರ ಅತ್ಯಂತ ತೂಕದ ಸಾರಸ್ವತ ದೃಷ್ಟಿಕೋನ, 'ಮಾಹಿತಿ'ಗಳಂಥ ಕಚ್ಚಾ ಸರಕುಗಳನ್ನು ಬಳಸಿಯೂ ಅರ್ಥಪೂರ್ಣವಾದ ಕೃತಿಯನ್ನು ರೂಪಿಸುವಲ್ಲಿ ಸಫಲವಾಗಿದೆ. ಬೇಂದ್ರೆ ಬಗೆಗೆ ಗಿರಡ್ಡಿಯವರು ಕೊಟ್ಟ ಚಿತ್ರಗಳನ್ನು ಸವಿದ ಮೇಲೂ ಬೇಂದ್ರೆ ವ್ಯಕ್ತಿತ್ವದ ಬಗೆಗೆ ನ್ಯಾಯೋಗೌರವ ಒಂದಿಷ್ಟೂ ಕಡಿಮೆ ಆಗುವದಿಲ್ಲವೆಂಬ ಅನುಭವವೇ ಇದಕ್ಕೆ ಸಾಕ್ಷಿಯಾಗಿದೆ.


ಇಷ್ಟಾಗಿಯೂ ಮಾಹಿತಿ, ಜ್ಞಾನ, ಇವುಗಳ ನಡುವಿನ ಸಂಬಂಧದ ಸ್ವರೂಪಗಳನ್ನು ಪ್ರತಿ ಸಂದರ್ಭದಲ್ಲೂ ಖಚಿತಗೊಳಿಸಿಕೊಳ್ಳುವದು ಕಷ್ಟದ ಕೆಲಸವೇ. ಮಾಹಿತಿಗಳಲ್ಲೂ ಎಲ್ಲವನ್ನೂ ನಿರಾಕರಿಸುವದೂ ಸಾಧ್ಯವಿಲ್ಲ. ಜೀವನೋಪಯೋಗಿ, ಕಲೋಪಯೋಗಿ, ಸರಕುಗಳನ್ನಾಗಿ ಈ

ಮಾಹಿತಿಗಳನ್ನು ಹೇಗೆ ಬಳಸಬೇಕು ಎಂಬ ವಿವೇಕ, ನಮ್ಮೊಳಗಿನ ಮನುಷ್ಯನಿಗೆ, ಕಲೆಗಾರನಿಗೆ, ಗೊತ್ತಿರಬೇಕಷ್ಟೆ. ಯಾವ ಒಳ್ಳೆಯ ವಸ್ತುವಿನ ದುರುಪಯೋಗವೂ ಸಾಧ್ಯವಿದೆ ಎಂದು, ನಾವು ಒಳ್ಳೆಯ ವಸ್ತುವನ್ನೇ ಹೇಗೆ ನಿರಾಕರಿಸುವುದು ಸಾಧ್ಯವಿಲ್ಲವೋ ಹಾಗೆಯೇ ಈ ಮಾಹಿತಿಗಳನ್ನೂ ನಾವು ಅತ್ಯಂತಿಕವಾಗಿ ನಿರಾಕರಿಸುವಂತಿಲ್ಲ. ಆದರೆ ಮನುಷ್ಯನನ್ನು ಯಾಂತ್ರೀಕರಣಗೊಳಿಸದಂತೆ, ಸಾಹಿತ್ಯಕೃತಿಯನ್ನು 'ಸಂತೆಗೆ ಮೂರು ಮೊಳ' ನೇಯುವ ಕಸುಬನ್ನಾಗಿ ಪರಿವರ್ತಿಸದಂತೆ ಈ ಮಾಹಿತಿಗಳ ಬಗೆಗೆ ನಾವು ಎಚ್ಚರವಹಿಸಬೇಕಾಗಿದೆ. 'ನಾನು ಮಾಹಿತಿಗಳ ಸ್ತರದಲ್ಲೇ ಬದುಕಬೇಕಾದ ವಸ್ತುಸ್ಥಿತಿಗೆ ತಲುಪಿದ್ದೇನಲ್ಲ' ಎಂಬ ಆಳವಾದ ಅನಿಸಿಕೆ ಸಂಕಟವಿದ್ದರೂ ಸಾಕು, ನಾವು ಅವುಗಳ ದಬ್ಬಾಳಿಕೆಯಿಂದ ಪಾರಾಗಬಹುದು.

ಇತ್ತೀಚೆಗೆ 'Best-seller' ಎಂದು ಖ್ಯಾತಿ ಪಡೆದ ಒಂದು ಇಂಗ್ಲಿಷ್ ಕಾದಂಬರಿ ನನ್ನ ಮಗನ ಹತ್ತಿರ ನೋಡಿದೆ, ಓದಿದೆ. ಎಂತಹ ದರಿದ್ರ ಕಾದಂಬರಿ ಅದು. ಒಬ್ಬ ಹುಡುಗ, ಒಬ್ಬ ಹುಡುಗಿಯ ಜೊತೆ ಬೆಳೆದ ತನ್ನ ಪರಿಚಯ-ಸಂಬಂಧದ ವಿವರಗಳೆಲ್ಲವನ್ನು ಹೇಳುತ್ತ ಕೊನೆಗೆ ೩೩ನೇ ಪುಟದ ಮೊದಲ ಪ್ಯಾರಾದಲ್ಲಿಯೇ "ಆ ನಂತರ ನಾವ್ವ ಒಂದು ದಿನ ಸೆಕ್ಸನ್ನು ಅನುಭವಿಸಿದೆವು. "ಇದು ನಿನ್ನ ಮೊದಲ ಅನುಭವವೇ?" ಎಂದು ಅವಳು ಕೇಳಿದಳು. ನಾನು 'ಹೌದು' ಎಂದೆ. "ನೀನೆಂಥ ಮುಗ್ಧ" ಎಂದು ಅವಳು ನನ್ನ ಬೆನ್ನು ಬಡಿದಳು" ಎಂದು ಹೇಳುತ್ತಾನೆ. ಸೆಕ್ಸ್ ಇಷ್ಟು ಸುಲಭವಾದ, ಲಘುವಾದ, ಅನುಭವವೇ? "ಇಂಥಾ ಕಾದಂಬರಿಯೊಳಗೆ ನಿಮಗೇನು ಸಿಗ್ತದ?" ಎಂದೂ ನಾನು ಕೇಳಿದೆ. "ನಾವು ಎಂದೂ ಅದನ್ನ ಕೇಳಕೊಳ್ಳಬಾರದ್ರೀ, ಸುಮ್ಮ ಓದೋದು, Enjoy' ಮಾಡೋದು, 'ಒಗಿಯೋದು' ಎಂದನವ. Sex ಕೂಡ ಈ ಹುಡುಗರಿಗೆ ಒಂದು ಕೇವಲ 'ಮಾಹಿತಿ''ಯಾಯಿತೆ?

ಪು.ಲ. ದೇಶಪಾಂಡೆ – ಮರಾಠಿಯ ಖ್ಯಾತ ಲೇಖಕರು – ಒಮ್ಮೆ "ಹೆಂಡತಿ ಎಂದರೆ ಗಂಡನಿಗೆ 'ಇದ್ದರೆ ಅಡಚಣ, ಇರದಿದ್ದರೆ ಪರಕತ್ತು' ಎಂಬಂತೆ" ಎಂದರು. ಮಾಹಿತಿಗಳೂ ಇಂದು ಹಾಗೇ ಆಗಿವೆ. ಅವು ಇದ್ದರೆ ಅಡಚಣೆ, ಇರದಿದ್ದರೆ ಪರಕತ್ತು. ಇತ್ತೀಚಿನ ಲೇಖಕರು 'ಪೊಲಿಟಿಕಲೀ ಕರೆಕ್ಟ್' ಆಗಿ ಬರೆಯುತ್ತಿದ್ದಾರೆಂದು ಕೆಲವರು ಹೇಳುತ್ತಾರೆ. ಅದರ ಜೊತೆಗೆ ಅವರು 'ಇನ್‌ಫಾರ್ಮೆಟಿಕಲಿ' ಕೂಡ ಕರೆಕ್ಟ್ ಆಗಲು ಧಡಪಡಿಸುತ್ತಿದ್ದಾರೆ. ಏಕೆಂದರೆ ಇದರಿಂದ ಅವರು ಈ ಕಾಲದ ಸಂಕಟಗಳ ನಿಜವಾದ ಧ್ವನಿಕಾರರೆಂದು. ವಾಚ್ಯಾರ್ಥದಲ್ಲಿ ಸಿದ್ಧವಾಗುವದು ಸುಲಭ.

ಆನಂದ ನಗರ,
ಮುಧೋಳ
೯೦೦೮೨೭೯೩೯೧೩.



ಮೊದಲ ಮಳೆ

ಗೀತಾ ಹೆಗಡೆ





ಬಂತು
ಮೊದಲ ಮಳೆ
ಚುಮ್‌ಮ್ ಎಂದು ಬೆನ್ನಹುರಿ
ಯ ಮೇಲೆ ಮೃದುಸ್ಪರ್ಶದಂತೆ
ಮನಸ್ಸು ಜಡ
ನಿದ್ರೆಯಿಂದೆದ್ದು
ಮೈ ಕೊಡ
ವಿ ಕೊಂಡೆಂತೆಲ್ಲ
ಕಣ್ಣು ಬಿಡು-
ವಾ ರಭಸಕಷ್ಟೊಂದು ಗಮ್ಮತ್ತೇ?

ಟಪ ಟಪ ಟಪ ಟಪ
ಉದುರುವ ನೆನಪಿಗೆ
ಜನ್ಮ ಜಾಲಾಡುವ ಪೊಗರು
ಕರಗುವ ಕಾಮನಬಿಲ್ಲುಗಳ
ಹಗ್ಗ ಹಿಡಿದು ಜಗ್ಗುತ್ತ
ಗಂಧವತಿ ಸೆರಗು
ಓಲಾಡುವ ಹೊಗರು.

ಹನಿ! ಅಹನ್ಯ ಹನಿ
ಏಳುವುದಕೆ ಒಲವಿಲ್ಲ
ಭೂಮಿ
ಮತ್ತೊಮ್ಮೆ
ಕಾಯುವನಕ
ಪರಿಮಳದ ಸರಕಿಗೆ
ಬರವಿಲ್ಲ

ಚಿತ್ತ

ಚಿತ್ತ ವಿಸ್ತಾರವದು ಬಾನಿನಂತೆ ಅಗಲ
ಇರಿಸಿ ಬೇಕಾದರೆ ಅಕ್ಕ-ಪಕ್ಕ
ಒಂದು ಇನ್ನೊಂದನ್ನು ಒಳಗೊಂಡು ಹಾಯಾಗಿ
ನಿಲಿಸುವುದು ಬದಿಯಾಚೆ ನಿಮ್ಮನತ್ತ.


ಚಿತ್ತದಾಳವು ಮಿಗಿಲು ಕಡಲಿಗಿಂತ
ಹಿಡಿದು ನೋಡಿದರವು ನೀಲಿ-ನೀಲಿ
ಒಂದು ಇನ್ನೊಂದನ್ನು ಹೀರಿಕೊಳುವುವು-ಹಾಗೆ
ಸ್ಪಂಜುಗಳು ಬಕೆಟುಗಳು ಖಾಲಿ ಖಾಲಿ.

ಚಿತ್ತ ಕೇವಲ ಅಷ್ಟೇ ಭಗವಂತನ ತೂಕ
ಹಿಡಿದೆತ್ತು ಅಳೆಯಿರಿ ಭಾರ-ಭಾರ
ಭೇದ ಇರುವುದು ಅಲ್ಲ-ಇದ್ದರೇನಾದರೂ
ಪದ ಧ್ವನಿಗೆ ಇರುವ ತರ ಮಧ್ಯಂತರ.

(ಎಮಿಲಿ ಡಿಕಿನ್‌ಸನ್‌ಳ 'ದ ಬ್ರೈನ್' ಕವನದ ರೂಪಾಂತರ)



ಈ ರಾತ್ರಿಗಳ ಜೊತೆಗೆ ನಮಗೆ ಪ್ರೀತಿ ಯಾಕಿಲ್ಲ



ಹಿಂದಿ ಮೂಲ : **ವಿಜಯಕುಮಾರ**

ಕನ್ನಡಕ್ಕೆ : **ಮುಕುಂದ ಜೋಷಿ**

ಯಾವ ಮಾತುಗಳನ್ನು
ಇದೀಗ ಆತ
ಹೇಳಬೇಕೆಂದೆನಿಸಿದರೂ ಹೇಳಲಿಲ್ಲವೋ
ಕೇಳಿ...
ಅವುಗಳಲ್ಲೇ ಅವನ ಅತ್ಯಂತ ಆಳವಾದ
ಆನಂದದ ಕ್ಷಣಗಳವೆ
ಮತ್ತು
ಅತ್ಯಂತ ನೋವಿನ ಕಣಗಳೂ ಇವೆ

ಪ್ಲ್ಯಾಟ್‌ಫಾರ್ಮಿನ ಯಾವುದೋ ಏಕಾಕಿ ಬೆಂಚಿನ ಮೇಲೆ ಕುಳಿತು
ಆತ ಬಾಯಿ ತೆರೆದು ಕೇಳುವುದಿಷ್ಟೇ
ಗಾಡಿ ಬರುವ ಸಮಯ ಯಾವುದೆಂದು

ಕೇಳಿ....
ಅವನ ಸ್ವರದಲ್ಲಿ ಒಂದು ಅಸ್ವಸ್ಥತೆ ಇದೆ
ಆ ಅಸ್ವಸ್ಥತೆಯಲ್ಲಿ
ಒಂದು ಕತ್ತಲೆ ತುಂಬಿದ ಗುಹೆ ಇದೆ
ಆ ಗುಹೆಯಲ್ಲಿ ಅವನ ಹೆದರಿಕೆಗಳಿವೆ
ಆ ಹೆದರಿಕೆಗಳಲ್ಲಿ ಅವನ ಪ್ರಾರ್ಥನೆಗಳಿವೆ
ಪ್ರಾರ್ಥನೆಗಳಲ್ಲಿ ಅವನ ಕನಸುಗಳಿವೆ
ಕನಸುಗಳಲ್ಲಿ ಆತ ರಕ್ಷಿಸಿ ಇಟ್ಟಿದ್ದಾನೆ ಕೆಲಸಕ್ಕೆ ಬಾರದಒಂದು ವಿಶ್ವಾಸ
ವಿಶ್ವಾಸದ ಖಜಾನೆಯನ್ನು ಸಂಭಾಳಿಸುತ್ತ
ಈ ಮನುಷ್ಯ
ಚಳಿಯಿಂದ ನಡುಗುವ ಈ ರಾತ್ರಿಯಲ್ಲಿ
ಈ ತಣ್ಣಗಿನ ಕಲ್ಲಿನ ಬೆಂಚಿನ ಮೇಲಿ
ಕುಳಿತಿದ್ದಾನೆ ಸುಮ್ಮಗೆ

ಮನೆಯಿಂದ ಹೊರಟ ಈ ಮನುಷ್ಯ
ಇನ್ನೂ ಮನೆ ಮುಟ್ಟಿಲ್ಲ
ರಕ್ಷಿಸಿ ಈ ಮನುಷ್ಯನನ್ನು
ನಷ್ಟವಾಗುವುದರ ಮೊದಲೇ ರಕ್ಷಿಸಿ,
ಉಳಿಸಿ ಇವನನ್ನು
ಆದರೆ ನೀವು ಹೇಗೆ
ಅವನನ್ನು ಉಳಿಸಬಹುದು
ನೀವಂತೂ ಕೇವಲ ಅವನಿಗೆ
ಗಾಡಿ ಬರುವ ಹೊತ್ತನ್ನು ಮಾತ್ರ ಹೇಳುವವರು
ನೀವೆಂದೂ ಆತನಿಗೆ
ಹೇಳಲಾರಿರಿ
ಗಾಡಿ ಯಾವುದೇ ಬರಲಿ
ಎಲ್ಲಿಗೇ ಹೋಗಲಿ
ನಾನು ನಿನ್ನ ನೆರೆಮನೆಯಲ್ಲೇ ಇರುತ್ತೇನೆ ದೋಸ್ತ?
ನಾನೇ ಇದ್ದೇನೆ ನಿನ್ನ ಗೋಡೆಯ ಆಚೆ

ನೀವು ಇದನ್ನು ಹೇಳುವುದಿಲ್ಲ
ಬಹುಶಃ ನೀವು ಏನನ್ನೂ ಹೇಳುವುದಿಲ್ಲ

ಈ ನಡುಗುವ ಚಳಿ ರಾತ್ರಿಯಲ್ಲಿ
ಅವನಿಗೆ ಏನೇ ಹೇಳುವುದು
ಅವನ ಆಕಾಶವನ್ನು

ನಮ್ಮ ಆಕಾಶವನ್ನಾಗಿ ಮಾಡಿಕೊಂಡಂತೆ.
ಅವನ ನಕ್ಷತ್ರಗಳ ಬೆಳಕಿನಲ್ಲಿ
ಅವನ ದಿಕ್ಕಿಗೆ ಹೊರಟಂತೆ
ಅವನ ಹೆಜ್ಜೆಯ ಸಪ್ಪಳಗಳನ್ನು ಕೇಳುವುದು
ಅವನ ಪ್ರತೀಕ್ಷೆಯಲ್ಲಿ ಶಾಮೀಲಾದಂತೆ.
ನೀವು ಹೇಳುವುದಿಲ್ಲ ಅವನಿಗೆ
ನೀನ್ಯಾವಾಗ ಕಿಸೆಯಲ್ಲಿ ಕೈ ಹಾಕುತ್ತಿಯೋ
ಆಗ ನಾನೇ ಸ್ಪರ್ಶಿಸುತ್ತೇನೆ
ಅಳಿದುಳಿದ ಕೆಲವು ಚಿಲ್ಲರೆಗಳನ್ನು
ನಿನ್ನ ಸಹಿಯಲ್ಲಿ ನನ್ನವೇ ಅರ್ಜಿಗಳಿವೆ
ನಿನ್ನೆಲ್ಲ ಹೆದರಿಕೆಗಳು, ರಹಸ್ಯಗಳು
ಮನಸ್ಸಿನ ಬಿಡಿಸಲಾಗದ ಒಗಟುಗಳು, ಪದರುಗಳು
ರಕ್ತದ ಓಕರಿಕೆ
ಮತ್ತು ಸಂಜೆಯ ದಣಿವು
ನನ್ನದೇ ಇದೆ
ನಿನ್ನ ಗೋಡೆಯ ಮೇಲೆ ನಾನೇ ತಲೆದಿಂಬಿಸಿದ್ದೇನೆ

ಒಂದು ನಡುಗುತ್ತಿರುವ ಚಳಿರಾತ್ರಿಯಲ್ಲಿ
ಕಂಪಿಸುತ್ತಿರುವ ಈ ಮನುಷ್ಯನಿಗೆ ಏನೇ ಹೇಳುವುದು
ದೂರದ ಯಾವುದೋ ಪಟ್ಟಣದಲ್ಲಿ
ಅವನ ಮನೆ ಮುಟ್ಟಿದಂತೆ.
ಅಲ್ಲಿ ಕಿಟಕಿಗಳ ಹಿಂದೆ
ಅವನ ನೋವಿದೆ
ಇಲ್ಲ...
ಅವನಿಗೇ ಗೊತ್ತಿರದ ಸಿಟ್ಟು
ಅಲ್ಲೊಂದು ಕಬ್ಬಿಣದ ಪಲ್ಲಂಗ
ಒಂದು ತಾಟು
ಒಂದು ವಾಟಗಾ
ಒಂದು ತಂಬಿಗೆ
ಒಂದು ಹಳದಿಯಾಗುತ್ತಿರುವ ತಲೆದಿಂಬು
ಮತ್ತೊಂದು ತಾಮ್ರದ ಚಂದ್ರ
ಒಂದು ನಿದ್ರಾಹೀನ ರಾತ್ರಿಯಿದೆ –
ಅದು ಸಾಮಾನುಗಳ ಮಧ್ಯೆ ಅಡಗಿ ಕುಳಿತಿದೆ.
ಒಂದು ಮನಸ್ಸಿದೆ
ಅದರಿಂದ ಬಳ ಬಳ ರಕ್ತ ಸುರಿಯುತ್ತಿದೆ



ಕೇಳಿ
ಈ ಮನುಷ್ಯ ಇದೀಗ
ಏನೋ ಹೇಳಲು ಹೋಗಿ
ಏನೂ ಹೇಳಲಿಲ್ಲ
ಮತ್ತು ನೀವು ಕೂಡ ಸುಮ್ಮನಾದಿರಿ

ಮತ್ತೇನನ್ನೂ ಕೇಳಲಿಲ್ಲ ನೀವು
ಕೇಳಲಿಲ್ಲ ಶಬ್ದ
ಕೇಳಲಿಲ್ಲ ಸ್ವರ
ನೋವನ್ನು ಕೇಳಲಿಲ್ಲ
ಸಂಗೀತ ಕೇಳಲಿಲ್ಲ
ಕೇಳಲಿಲ್ಲ ರಹಸ್ಯವನ್ನು
ಕೇಳಲಿಲ್ಲ ಕತ್ತಲೆಯನ್ನು

ನೀವು ಏನನ್ನೂ ಕೇಳಲಿಲ್ಲ

ಆಕಾಶದಿಂದ ಇಳಿಯುವ ಮೌನವನ್ನು
ನೀವು ಮುಟ್ಟಲೇ ಇಲ್ಲ
ಅದು ನಂತರ ಭೂಮಿಯ ಅಂಶವಾಗುತ್ತದೆ
ಅನ್ನುವದೂ ನಿಮಗೆ ತಿಳಿಯಲಿಲ್ಲ

ರಾತ್ರಿ ಪ್ಲ್ಯಾಟ್‌ಫಾರ್ಮಿನ ಮೇಲೆ
ಒಂದು ತಣ್ಣಗಿನ ಕಲ್ಲಿನ ಬೆಂಚಿನ ಮೇಲೆ
ಇಬ್ಬರು ಮೌನವಾಗಿ
ಗಾಡಿಯ ದಾರಿ ಕಾಯುತ್ತಾರೆ ಅನ್ನುವುದೂ
...........ನಿಮಗೆ ಅರ್ಥವಾಗಲಿಲ್ಲ

ನನ್ನ ಅಂಜಿಕೆಗಳನ್ನು ದೂರ ಮಾಡಯ್ಯಾ

ಯಾವನೋ ಓಡುತ್ತ ಓಡುತ್ತ
ನನ್ನ ತನಕ ಬರುತ್ತಾನೆ
-ಆಕಸ್ಮಿಕವಾಗಿ ಹೆದರಿದಂತೆ
ಮತ್ತು
ಬದಿಯಿಂದ ದಾಟಿ ಹೋಗುತ್ತಾನೆ
ನಾನು ನಿಲ್ಲುತ್ತೇನೆ
ಮತ್ತು ಯೋಚಿಸುತ್ತೇನೆ
....ಯಾರಿದ್ದ ಆತ
ನಂತರ ನಾನು ಸ್ಮೃತಿ ಹೀನನಾಗುತ್ತೇನೆ.



ಯಾಕೆಂದರೆ ನನ್ನ ನೆರಳುಗಳು ಇಲ್ಲ
ಯಾಕೆಂದರೆ ವಸ್ತುಗಳು ನನ್ನ ಕನ್ನಡಿಗಳಾಗುತ್ತಿವೆ
ಯಾಕೆಂದರೆ ಒಬ್ಬ ಕೊಲೆಯಾದ ವ್ಯಕ್ತಿಯ ಚಿತ್ರ
ನನ್ನ ಮನೆಯಲ್ಲಿ
ಎಲ್ಲಕ್ಕಿಂತ ಹೆಚ್ಚು ಜೀವಂತ ಬಣ್ಣದಲ್ಲಿದೆ
ಯಾಕೆಂದರೆ ನಾನು
ಬೀದಿಯ ದುರ್ಘಟನೆಗಳಲ್ಲಿ
ರಕ್ತದಿಂದ ಮುಳುಗಿದ ಜನರನ್ನು
ಮುಂದಿನ ಹತ್ತು ನಿಮಿಷಗಳಲ್ಲಿ ಮರೆಯುತ್ತೇನೆ
ಯಾಕೆಂದರೆ ಒಂದಿಷ್ಟು ದುಃಖವಿದೆ
ಇಲ್ಲ ಗೊತ್ತಿಲ್ಲ
ಕಳೆದುಹೋಗಿರಬೇಕು ಒಳಗಿನ ಸ್ಥಳಗಳು
ಯಾಕೆಂದರೆ ಯಾವ ದುಃಖವಿಲ್ಲ
ನಾನು ಗಡಿಯಾರ ನೋಡಿ ನಿಯಮಿತನಾಗುತ್ತೇನೆ
ನಾನು ನಾಚಿಕೊಳ್ಳುತ್ತೇನೆ
ಯಾಕೆಂದರೆ ಕೆಲವು ತಪ್ಪುಗಳನ್ನು ಮಾಡುತ್ತೇನೆ
ಮತ್ತು ಸ್ವಲ್ಪ ಕ್ಷಮೆ ಕೇಳುತ್ತೇನೆ
ಯಾಕೆಂದರೆ ನಾನು
ಸ್ವಲ್ಪ ವಿಷಯಗಳನ್ನು ಸಂಗ್ರಹಿಸುತ್ತೇನೆ
ಮತ್ತು ಉದಾರತೆಯಲ್ಲಿ ಹಾಸ್ಯಾಸ್ಪದನಾಗುತ್ತೇನೆ

ಯಾಕೆಂದರೆ ದುಃಖದಲ್ಲಿ ಹರಡುತ್ತವೆ ಶಬ್ದಗಳು
ಮತ್ತು ಕತ್ತಲೆಯಲ್ಲಿ
ಮೂವತ್ತೆರಡೂ ಹಲ್ಲುಗಳು ಹೊಳೆಯುತ್ತವೆ

ಯಾಕೆಂದರೆ ಈ ತುಂಬಿದ ಹೊಟ್ಟೆ
ಪ್ರತಿನಿತ್ಯ ಖಾಲಿಯಾಗುತ್ತದೆ
ಯಾಕೆಂದರೆ ನನಗೆ ಗೊತ್ತಿದೆ
ಪ್ರೀತಿ ಎಂದೂ ಮುಗಿಯುವುದಿಲ್ಲವೆಂದು
ಯಾಕೆಂದರೆ
ಪ್ರೀತಿಯ ಅತ್ಯಂತ ಆಳವಾದ ಕ್ಷಣಗಳಲ್ಲಿ
ನನ್ನ ಹೃದಯ
ಒಂದು ಮಡಚಿಟ್ಟ ಕರವಸ್ತ್ರದಂತೆ.
ಯಾಕೆಂದರೆ, ನಾನು
ನನ್ನ ಗೊಂದಲ, ದ್ವಂದ್ವಗಳ
ವ್ಯಾಖ್ಯೆಗಳನ್ನು ತಿಳಿದುಕೊಳ್ಳಲು
ಪರಿಣತರ ಬಳಿ ಹೋಗುತ್ತೇನೆ.
ಯಾಕೆಂದರೆ, ನಾನು ಪ್ರತಿನಿತ್ಯ
ಒಂದು ಛಪ್ಪರದ ಕೆಳಗೆ
ನನ್ನನ್ನು ಅಡಗಿಸಿಕೊಳ್ಳುತ್ತೇನೆ.
ಯಾಕೆಂದರೆ, ನಾನು
ಒಳಸಂಚುಗಳ ಮಧ್ಯೆ
ಜಾತಿ ವರ್ಣಗಳ ಒಗಟುಗಳನ್ನು ಬಿಡಿಸುತ್ತೇನೆ
ಯಾಕೆಂದರೆ, ನಾನು
ನಿಯಮಿತ ಯೋಗಾಸನ ಮಾಡುತ್ತೇನೆ
ಮತ್ತು ಹಲವು ಮಿನಿಟುಗಳವರೆಗೆ
ಶ್ವಾಸವನ್ನು ತಡೆಹಿಡಿಯುತ್ತೇನೆ
ಯಾಕೆಂದರೆ, ಇವೆಲ್ಲ
ಸರ್ವ ಸಮ್ಮತಿಯಿಂದ ಸ್ವೀಕರಿಸಿದ ಲಾಭಗಳಿವೆ
ಯಾಕೆಂದರೆ
ರಾತ್ರಿ ನೋಡಿದ ನನ್ನೆಲ್ಲ ಕನಸುಗಳು
ಬಿಸಿಲಿನಲ್ಲಿ ಒಣಗಿದ ಅರಿವೆಗಳಂತೆ ಕಾಣುತ್ತವೆ
..........ಬೆಳಗಿನಲ್ಲಿ
ಯಾಕೆಂದರೆ, ಬದುಕಿನ ಹಿಂದಿನ ಬೀದಿಯಲ್ಲಿ
ಒಬ್ಬ ಹೆಂಗಸು ನನ್ನನ್ನು ನೋಡಿ ನಗುತ್ತಾಳೆ
ಅವಳ ಮುಖ
ಮೋಹದಲ್ಲಿ ಮುಚ್ಚಿ ಹೋಗಿದೆ



ಯಾಕೆಂದರೆ, ನಾನು
ಸುವಾಸನೆಯ ಜೊತೆಗೆ
ಕಿಟಕಿಗಳ ಜೊತೆಗೆ
ಮಿಣುಕುತ್ತಿರುವ ಬೆಳಕಿನ ಜೊತೆಗೆ
ನಡೆಯುತ್ತಿರುವ ಗಡಿಯಾರದ ಜೊತೆಗೆ
ಉರುಳುತ್ತಿರುವ ಗಾಲಿಗಳ ಜೊತೆಗೆ
ದಟ್ಟವಾಗಿ ಮುಚ್ಚಿದ್ದರೂ
ಅಸ್ಪಷ್ಟವಾಗಿ ಕಾಣುವ ಚಿತ್ರಗಳ ಜೊತೆಗೆ
ಇಂದೂ ಕೂಡ ಪ್ರೀತಿಮಾಡುತ್ತೇನೆ

ಯಾಕೆಂದರೆ, ಇಷ್ಟೆಲ್ಲ ಆದರೂ
ನಾನು ಅತ್ಯಾಚಾರಿಗಳನ್ನು ಭೇಟಿಯಾಗುತ್ತೇನೆ
ಅವರ ಉನ್ನತಿಯ ಬಗ್ಗೆ
ಅಭಿನಂದನೆ ಸಲ್ಲಿಸುತ್ತೇನೆ
ಯಾಕೆಂದರೆ, ನಾನು
ಇದನ್ನೆಲ್ಲ ಮರೆಯುತ್ತೇನೆ
ಯಾಕೆಂದರೆ, ನನ್ನ ಮನಸ್ಸು
ಗುರುತ್ವಾಕರ್ಷಣೆಗಳ ನಿಯಮಗಳ ಆಚೆಗಿದೆ
ಯಾಕೆಂದರೆ, ನಾನು
ಬೇಜಾರಿನಿಂದ ಬಳಲುತ್ತೇನೆ
ಆದರೂ
ಅಕ್ಕಪಕ್ಕದವರ ಬಾಗಿಲುಗಳನ್ನು ತಟ್ಟುವುದಿಲ್ಲ
ಯಾಕೆಂದರೆ, ಋತುಗಳು
ಸುರಿಸುತ್ತವೆ ಸೂಚನೆಗಳನ್ನು
....ದಿನ, ರಾತ್ರಿ....
ಪ್ರತಿ ಅರ್ಧ ಘಂಟೆಯ ನಂತರ
ಯಾಕೆಂದರೆ, ಅವುಗಳನ್ನು ನಾನು
ಬದುಕಿನ ರಹಸ್ಯಗಳಂತೆ ಕೇಳುತ್ತೇನೆ
ಯಾಕೆಂದರೆ, ರಾತ್ರಿ ಬರುತ್ತದೆ
ಯಾಕೆಂದರೆ, ದಿನ ಮುಗಿಯುತ್ತದೆ
ಯಾಕೆಂದರೆ,
ಇದೊಂದು ನ್ಯಾಯೋಚಿತ ಕಾರ್ಯಕ್ರಮ ಬದುಕಿನದು
ಯಾಕೆಂದರೆ,
ಇದು ಹೊಳೆಯುತ್ತಿರುತ್ತದೆ
ದ್ವಂದ್ವದ ಅನಂತತೆಯಲ್ಲಿ.




A-6, Seja Apartment
Bhoolabai Desai Marg,
Mulunda (D), Mumbai - 400 080
Mobile: 9920192885

'ಸ್ವಪ್ನ ಸಾರಸ್ವತ' – ಬೃಹತ್ ಕಥನ

ಪುಸ್ತಕ ಪರಿಚಯ

ಎನ್. ಮನುಚಕ್ರವರ್ತಿ

ಸ್ವಪ್ನ ಸಾರಸ್ವತ, ಕಾದಂಬರಿ		
ಲೇಖಕರು	:	ಗೋಪಾಲಕೃಷ್ಣ ಪೈ
ಪ್ರಕಾಶಕರು	:	ಭಾಗ್ಯಲಕ್ಷ್ಮಿ ಪ್ರಕಾಶನ, ಬನಶಂಕರಿ, ಬೆಂಗಳೂರು
ಬೆಲೆ	:	ರೂ. ೩೨೫.೦೦
ಪ್ರಕಟಣಾ ವರ್ಷ	:	೨೦೦೯



ಬೃಹತ್ ಕಥನ 'ಸ್ವಪ್ನ ಸಾರಸ್ವತ' – ಬೇರೊಂದು ರೀತಿಯಲ್ಲಿ ಹೇಳುವುದಾದರೆ Epic proportions ಹೊಂದಿರುವ ಈ ಕೃತಿಯನ್ನು ನಾನು ಅರ್ಥೈಸಿಕೊಂಡ ಬಗ್ಗೆ ಒಂದೆರಡು ಮಾತುಗಳು. ೪೦೦ ವರ್ಷಗಳ ಹಿಂದಿನ ಕಥೆಯನ್ನು ಹೇಳುವ ಈ ಕೃತಿಯನ್ನು ಇಂದು ನಾವು ನಮ್ಮ ಸಂದರ್ಭಕ್ಕೆ ಅನ್ವಯ ಮಾಡಿಕೊಳ್ಳುವ ರೀತಿ ಏನು ಎಂದೂ ನನ್ನನ್ನು ಕೇಳಿಕೊಳ್ಳುತ್ತಾ ಇದನ್ನು ಓದಿದ್ದೇನೆ. ಅದರ ಬಗ್ಗೆ ಮಾತನಾಡಬಯಸುತ್ತೇನೆ. ಅನೇಕ ಗ್ರಂಥಗಳ ಅಧ್ಯಯನದಿಂದ ಕಥಾವಸ್ತು ರೂಪಿತವಾಗಿದ್ದು, ಈ ಕೃತಿ ಇತಿಹಾಸ ಚಿತ್ರಣವೂ ಹೌದು. ಅಂದರೆ ಐತಿಹಾಸಿಕ ಕಾದಂಬರಿಯಾಗಿಯೂ (Historical Fiction) ಓದಬಹುದಾದ ಕಥನವಿದು. ಈ ಅರ್ಥದಲ್ಲಿ ಕೃತಿಯನ್ನು ಐತಿಹಾಸಿಕ ಕಾದಂಬರಿಯಾಗಷ್ಟೇ ಓದಬಹುದೇ? – ಸಮಕಾಲೀನತೆಯನ್ನು ಗೌಣಗೊಳಿಸಿ ಇದರ ಐತಿಹಾಸಿಕ ಗುಣಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಸಾಕೇ? ಅಥವಾ ಐತಿಹಾಸಿಕ ಅಂಶವನ್ನು ಒಂದು ಘಟ್ಟದ ನಂತರ ಬದಿಗಿಟ್ಟು ಇದನ್ನು ಒಂದು ಸಾಹಿತ್ಯ ಕೃತಿಯಾಗಿ ಓದಿ ವಿಮರ್ಶಿಸಿದರೂ ಸಾಕೇ? – ಈ ರೀತಿಯ ಕೃತಿಗಳ ವಿಮರ್ಶೆಯನ್ನು ಮಾಡುವ ಕ್ರಮ ಯಾವುದಾಗಿರಬೇಕು? ಅಥವಾ ಸಮನ್ವಯ ಮಾಡಿಕೊಂಡು ಐತಿಹಾಸಿಕ ಅಂಶ ಮತ್ತು ಸೃಜನಶೀಲತೆ ಹೇಗೆ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಿವೆ ಎಂದು ಅರಿಯುವ ಬಗೆಯ

ಸಾಹಿತ್ಯ ಸಂಜೆಯಲ್ಲಿ ಮಾಡಿದ ಭಾಷಣ

ವಿಮರ್ಶೆಯ ಮಾರ್ಗವೇ ಸೂಕ್ತವೇ? ಅಂದರೆ ಈ ಕೃತಿಯ 'ಕಾಣ್ಕೆ'ಯಾದರೂ ಏನು? ಈ ಕೃತಿಯ ಪ್ರೇರಣೆಗಳೇನು? ಯಾವ ನೆಲೆಯಿಂದ ಈ ಕೃತಿ ರಚಿತವಾಗಿದೆ? ಕೃತಿಯ ಸೃಜನಶೀಲ ಪ್ರಕ್ರಿಯೆಗಳನ್ನು ಗುರುತಿಸುವುದಾದರೂ ಹೇಗೆ? ಈ ರೀತಿಯ ಅನೇಕ ತಾತ್ವಿಕ ಪ್ರಶ್ನೆಗಳು ನನ್ನನ್ನು ಪ್ರತಿ ಹಂತದಲ್ಲೂ ಕಾಡಿವೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಳ್ಳುತ್ತ ನಾನು ಕೃತಿಯನ್ನು ಓದಿದ್ದೇನೆ. ಎಲ್ಲ ಹಂತಗಳಲ್ಲೂ ಇತಿಹಾಸದ ಓದು ಕೊಡುವ ದ್ರವ್ಯಕ್ಕೂ ಸೃಜನಶೀಲತೆಗೂ – ಸೃಜನಶೀಲತೆಯ ಸಂವೇದನೆಗೂ, ಕಲ್ಪನೆಗೂ ಇರುವ ಸಾವಯವ ಸಂಬಂಧವನ್ನು ಮನಸ್ಸಿನಲ್ಲಿಟ್ಟುಕೊಂಡೇ ನನ್ನ ಓದು ನಡೆದದ್ದು – ಆ ಓದಿನ ಕ್ರಮದಿಂದ ನನಗೆ ಕಾದಂಬರಿಯಿಂದ ದಕ್ಕಿದ್ದಾದರೂ ಏನು ಎಂದು ಇಲ್ಲಿ ಹಂಚಿಕೊಳ್ಳುವ ಪ್ರಯತ್ನ ಮಾಡಿದ್ದೇನೆ.

★

ನಾನು ಮೊದಲು ಗುರುತಿಸಿಕೊಳ್ಳಲು ಇಚ್ಛಿಸುವುದು ಆಧುನಿಕ ಕಾಲದ ಸಂವೇದನೆ (Modern Sensibility) ಈ ಕೃತಿಯ ನಿಜವಾದ ತಳಹದಿ ಎಂದು. ಎಷ್ಟೇ ಇತಿಹಾಸದ ದ್ರವ್ಯಗಳು ಈ ಕೃತಿಯ ಕಥಾಹಂದರವನ್ನು ರೂಪಿಸಿದರೂ ಇದು Historical Fiction ಅಲ್ಲ. ಅಂದರೆ ಆಧುನಿಕ ಕಾಲದ - ಆಧುನಿಕ ಸಾಹಿತ್ಯ ಸಂವೇದನೆಯೇ ಈ ಕೃತಿಯ ಕಾಣ್ಕೆಯನ್ನು ಕಟ್ಟುವುದು. ಒಂದು Modren Literary Sensibility ಈ ಕೃತಿಯ ತಾತ್ವಿಕ ನೆಲೆಯನ್ನು (Philosophical/ Thematic base and concerns ನನ್ನು) ಕಟ್ಟುವುದು; ಇದರ ರೂಪ - ಶೈಲಿಯನ್ನು (Form/Style- its aesthetics) ನಿರ್ಧರಿಸುವುದು. ಅಷ್ಟೇ ಅಲ್ಲದೆ, ಮುಕ್ತವಾದ Rational/Secular ಕಾಳಜಿಗಳೂ ಈ ಕೃತಿಯಲ್ಲಿ ಪ್ರಮುಖವಾಗಿ ಕೆಲಸ ಮಾಡಿವೆ. ಕೃತಿಯಲ್ಲಿ ಇತಿಹಾಸದ ಬಗೆಗಿನ ಧೋರಣೆಯು (Attitude towards history) ಒಂದು (ಮೊದಲೇ ಹೇಳಿದಂತೆ) Secular visionನಿಂದ ಬಂದಿದೆ. ಆದ್ದರಿಂದಲೇ ಈ ಕೃತಿಯು ತನ್ನ aesthetics/philosophical Concerns Thematic Vision/Historical Approchನಲ್ಲಿ ಒಂದು ಸೂಕ್ಷ್ಮ ಸಾಹಿತ್ಯ ಸಂವೇದನೆಯಿಂದ ತನ್ನ ಅನುಭವಗಳನ್ನು, ಹೊಳಹುಗಳನ್ನೂ, ತಾತ್ವಿಕತೆಯನ್ನೂ ನಮ್ಮ ಮುಂದಿಡುತ್ತದೆ. ಆದ್ದರಿಂದಲೇ 'ಸ್ವಪ್ನ ಸಾರಸ್ವತ' ಟಾಲ್‌ಸ್ಟಾಯ್‌ನ 'ವಾರ್ ಅಂಡ್ ಪೀಸ್' ಮತ್ತು ಭೈರಪ್ಪನವರ 'ಆವರಣ'ಕ್ಕಿಂತ ಭಿನ್ನವಾದ ಕೃತಿ. (ಭೈರಪ್ಪನವರಂತೂ ಈ ಕೃತಿ ಬರೆದಿದ್ದರೆ ಒಂದೊಂದು ಪುಟವೂ ವಿಷಜ್ವಾಲೆಯಿಂದ ತುಂಬಿಹೋಗುತ್ತಿತ್ತು.)

ಇತಿಹಾಸವನ್ನೂ, ಭೂತವನ್ನೂ ಈ ಕೃತಿ ದುಡಿಸಿಕೊಂಡಿರುವುದು ಎರಡು ರೀತಿಗಳಲ್ಲಿ. ಒಂದು ಪೋರ್ಚುಗೀಸರ ದಾಳಿ, ಹಿಂಸೆ, ಕ್ರೌರ್ಯ-ಒಂದು ಸಮುದಾಯದ ಬದುಕನ್ನು, ಧರ್ಮವನ್ನೇ ತಿರುಚಿ, ಸರ್ವನಾಶ ಮಾಡುವ ಕ್ರಮವನ್ನು, ಮಾರ್ಗವನ್ನು ನೇರ ಚಿತ್ರಿಸುವುದು ಕಾದಂಬರಿಯ ಕಥನ ಕ್ರಮದ ಒಂದು ಮಾರ್ಗ. ಹೊರಗಿನಿಂದ ದಾಳಿ ಮಾಡಿದ ಪೋರ್ಚುಗೀಸರು ಹೇಗೆ ತನ್ನ ಲೋಕದಲ್ಲಿ ರೀತಿ-ನೀತಿಗಳಲ್ಲಿ ಬದುಕು ನಡೆಸುತ್ತಿದ್ದ ಸಮುದಾಯವನ್ನು ನಾನಾ ರೀತಿಗಳಲ್ಲಿ ಛಿದ್ರಛಿದ್ರಗೊಳಿಸಿದರು ಎಂದು ಘಟನೆಗಳ ಮೂಲಕ ಬಿಚ್ಚಿಡುವುದು ಈ ಕಥನದ ಒಂದು ಕ್ರಮ. ಇತಿಹಾಸದ ಭಯಂಕರ ಪುಟಗಳಿಗೆ ಕಥನಕ್ರಮ ಸಂಬಂಧಿಸಿದಾಗ ಕಥನವನ್ನು ಆಕ್ರಮಣ ಮಾಡುವ, ಉದ್ವೇಗವನ್ನು ಉಂಟುಮಾಡುವ ನಿರೂಪಣಾ ತಂತ್ರವನ್ನು ಬಳಸುವುದಿಲ್ಲ. ರೊಚ್ಚಿಗೆಬ್ಬಿಸುವ ಅತಿರೇಕದ ಭಾವನೆಗಳನ್ನು ಕ್ರೋಧವನ್ನು ಕೆರಳಿಸುವ ತಂತ್ರವನ್ನು ಬಳಸುವುದಿಲ್ಲ. ಹಾಗೆ ನೋಡಿದರೆ ಒಂದು ರೀತಿಯ ನಿರ್ಲಿಪ್ತತೆಯನ್ನು ಈ ಕಥನ ಕ್ರಮದಲ್ಲಿ ಕಾಣಬಹುದು. ಇದನ್ನು ನಾನು ಕೇವಲ ತಂತ್ರಗಾರಿಕೆಯನ್ನಾಗಿ- Narrative Techniqe- ಕಾಣುವುದಿಲ್ಲ. ಬದಲಾಗಿ ಇತಿಹಾಸದ ದುರಂತಗಳನ್ನು ಸಮಕಾಲೀನ ಪ್ರಪಂಚದಲ್ಲಿ ಪ್ರಬುದ್ಧತೆಯೊಂದಿಗೆ ಅರ್ಥೈಸಿಕೊಳ್ಳಬೇಕಾದ ಅಗತ್ಯದ ಬಗ್ಗೆ ಕಥನ ನಮ್ಮ ಗಮನವನ್ನು ಸೆಳೆಯುತ್ತದೆ. ಇದು ಬರುವುದು Secular ಆದ ಮನಸ್ಸಿನ ಸ್ಥಿತಿಯಿಂದ. ಅಂದರೆ

ಇತಿಹಾಸದ ಪಾಠಗಳನ್ನು ನಾವು ಕಲಿಯಬೇಕಾದ ರೀತಿಯನ್ನು ಸೂಚಿಸುವ ಅರಿವಿನಿಂದಾಗಿ ಈ ನಿರೂಪಣೆ ತನ್ನನ್ನು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಒಂದು Pacifist ಆದ, Secular ಆದ Non-violent ಆದ ದ್ವೇಷವಿಲ್ಲದ ಪ್ರಜ್ಞೆ ಈ ನಿರೂಪಣೆಯ ಹಿಂದೆ ಇರುವುದನ್ನು ನಾವು ಗ್ರಹಿಸಬೇಕಾದದ್ದು ಅತ್ಯಗತ್ಯ. ಸುಲಭವಾಗಿ Dramatic ಆದ ನಿರೂಪಣೆಯ ಮೂಲಕ Highly charged emotions ಮೂಲಕವೂ ಇದನ್ನು ಮಾಡಬಹುದಿತ್ತು ಆ ರೀತಿಯ ಯಾವ ಒತ್ತಡಕ್ಕಾಗಲಿ, ಪ್ರಲೋಭನೆಗಾಗಲಿ ಒಳಗಾಗದೆ 'ಸ್ವಪ್ನ ಸಾರಸ್ವತ' ಇತಿಹಾಸದ ದುರಂತವನ್ನು ಚಿತ್ರಿಸುತ್ತದೆ. ನಮ್ಮ ಕಾಲಕ್ಕೆ ಅನಿವಾರ್ಯವಾದ ಭವಿಷ್ಯಕ್ಕೆ ಅಗತ್ಯವಾದ ಐತಿಹಾಸಿಕ ಪ್ರಬುದ್ಧತೆಯೇ (wisdom in relation to history) ನಿರೂಪಣೆಯ ಲಯವನ್ನು ಸೃಷ್ಟಿಸಿರುವುದು. ಆದ್ದರಿಂದಲೇ ತಾತ್ವಿಕವಾಗಿ(Philosophicaly), aestheticsನ ದೃಷ್ಟಿಯಿಂದ ನೋಡಿದಾಗ 'ಸ್ವಪ್ನ ಸಾರಸ್ವತ' ಒಂದು ಗಟ್ಟಿಯಾದ ಪರಿಪಕ್ವವಾದ ಇತಿಹಾಸ ದರ್ಶನವನ್ನು ಹೊಂದಿರುವುದನ್ನು ಕಾಣಬಹುದು.

೨

ಈ ರೀತಿಯ ಪರಿಪಕ್ವತೆ ಕಥನದಲ್ಲಿ ಇನ್ನೇನನ್ನು ಸಾಧಿಸುತ್ತದೆ-ಸಾಧಿಸಿಕೊಂಡಿದೆ ಎಂಬುದನ್ನು ಕೇಳಿಕೊಳ್ಳುತ್ತ ಉತ್ತರವಾಗಿ, ನಿದರ್ಶನವಾಗಿ ಎರಡು ಸಂಗತಿಗಳ ಕಡೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಒಂದು— ಧ್ವಂಸ ಮಾಡುತ್ತ, ಜನರನ್ನು ಹಿಂಸೆಯಿಂದ ಮತಾಂತರ ಮಾಡುತ್ತ, ದೇವರುಗಳನ್ನು, ದೇವಸ್ಥಾನಗಳನ್ನು ನಾಶ ಮಾಡುತ್ತ ಇರುವ ಸಂಗತಿಗಳೆಲ್ಲವನ್ನೂ ಬಿಚ್ಚಿಡುತ್ತಲೇ ಕಾದಂಬರಿ ಆ ಹಿಂಸೆಯ ಜಗತ್ತಿನಲ್ಲೇ ಹುಟ್ಟಿ ಗಟ್ಟಿಯಾಗಿರುವ ಸಂತನ ಬದುಕಿನ ದರ್ಶನವನ್ನು ಮಾಡುತ್ತದೆ. ಸಾವಿಯರನ(ಬಹುಶಃ St. Francis Xeviour) ಚಿತ್ರಣವನ್ನು ಗಮನಿಸುವುದು ಅಗತ್ಯ. ಮನೋಜ್ಞವಾಗಿ ಕಾದಂಬರಿ ಒಂದು ನಿಜವಾದ ಕರುಣಾಮಯಿಯಾದ, ಪ್ರೀತಿ-ವಾತ್ಸಲ್ಯಗಳನ್ನು ಹೊತ್ತುಕೊಂಡೇ ನಡೆದಾಡುವ ಸಂತನನ್ನು ನಮಗೆ ಮುಖಾಮುಖಿ ಮಾಡಿಸುತ್ತದೆ. Jesus Christ ರೀತಿಯಲ್ಲೇ ಸಾವಿಯರನ ಚಿತ್ರಣ ಮೂಡಿಬರುತ್ತದೆ. ಹಿಂಸೆ, ಕ್ರೌರ್ಯ, ಭಯಾನಕ, ಬೀಭತ್ಸ ಸನ್ನಿವೇಶಗಳ ನಡುವೆ ಸಾವಿಯರನಂತಹ ಸನ್ಯಾಸಿಯನ್ನು ಕಥನ ಕಟ್ಟುವುದು ಕೇವಲ ಕಥೆಯ ವಿಷಯ ಅಲ್ಲ. ಒಂದು ಹಿಂಸೆಯ ಜಗತ್ತಿನಲ್ಲಿ, ಆಕ್ರಮಣಕಾರಿ ಸಮುದಾಯದಲ್ಲಿ ಸಂತನನ್ನು ಕಾಣುವುದು ಧರ್ಮ ದ್ವೇಷಿಗಳಿಗೆ ಸಾಧ್ಯವಿಲ್ಲ. ಮತ್ತೊಂದು ಧರ್ಮದಲ್ಲಿ, ಅದರ ಗ್ರಂಥದಲ್ಲಿ, ಅಮಾನವೀಯ ಕ್ರೌರ್ಯವನ್ನು ಮಾತ್ರ ಗುರುತಿಸಿ ಆ ಅಂಶಗಳನ್ನು ಹೆಕ್ಕಿ ತೆಗೆಯುವ ಸಾಹಿತಿಗಳಿಗೆ, ವಿದ್ವಾಂಸರುಗಳಿಗೆ ಇದು ಅಸಾಧ್ಯ. ರಕ್ತ ಪಿಪಾಸುಗಳನ್ನು ಮಾತ್ರ ಕಾಣುವ ಸೈದ್ಧಾಂತಿಕಮಾರ್ಗಕ್ಕೆ ಸಾಹಿತ್ಯ ಸಂವೇದನೆಗೆ 'ಸ್ವಪ್ನ ಸಾರಸ್ವತ'ದ ಕಾಣ್ಕೆ ದಕ್ಕುವುದಿಲ್ಲ. ಭೈರಪ್ಪನವರನ್ನು ನಾನು ಮೊದಲು ಹೆಸರಿಸಿದ್ದು ಈ ಕಾರಣಕ್ಕೆ. ಕೋಮುವಾದಿ ಇತಿಹಾಸ ಪ್ರಜ್ಞೆಗೂ ಮುಕ್ತವಾದ ಐತಿಹಾಸಿಕ ನೋಟಕ್ಕೂ ಇರುವ ವ್ಯತ್ಯಾಸವೇ ಇದು.

ಮತ್ತೊಂದು ವಿಷಯವನ್ನು ಗಮನಿಸಬೇಕು. 'ಸ್ವಪ್ನ ಸಾರಸ್ವತ'ದ ಮತ್ತೊಂದು ಆಯಾಮ ಇಲ್ಲಿ ಗೋಚರಿಸುತ್ತದೆ. ಮತಾಂತರದ ಹಿಂದೆ ಬಲಾತ್ಕಾರವಷ್ಟೇ ಅಲ್ಲ. ಮೇಲ್ಜಾತಿಯ ಸಮಾಜದ ಅನೇಕ ಅವಗುಣಗಳೂ ಇವೆ ಎಂಬುದು ಕಣ್ಣಿಗೆ ಕಟ್ಟುವಂತೆ ಕಾದಂಬರಿಯಲ್ಲಿದೆ. ಬುದ್ದುವಿನ ಮತಾಂತರದ ಹಿಂದೆ ಬಡತನ, ಶೋಷಣೆಯನ್ನೂ ತಪ್ಪಿಸಿಕೊಳ್ಳುವ ಮನುಷ್ಯನ ಪ್ರವೃತ್ತಿಯನ್ನೂ ಕಾದಂಬರಿ ಲಕ್ಷಣವಾಗಿಯೇ ದಾಖಲಿಸುತ್ತದೆ. ತನ್ನ ಹೀನಸ್ಥಿತಿಯನ್ನು ಮೀರಲು ಇದೊಂದು ಮಾರ್ಗವೆಂದು ಬುದ್ಧುವಿನಂತೆ ಅನೇಕರು ಅರಿತು ಮತಾಂತರಕ್ಕೆ ಒಪ್ಪುತ್ತಾರೆ. ಅಷ್ಟೇ ಅಲ್ಲದೆ ಆಪತ್ತನ್ನು ತಪ್ಪಿಸಿಕೊಳ್ಳಲು ಮತಾಂತರವನ್ನು ತಂತ್ರವಾಗಿ ಬಳಸುವ ಮೇಲ್ಜಾತಿಯವರೂ ಕಾದಂಬರಿಯಲ್ಲಿ ಮುಖ್ಯ ವಿಷಯವಾಗೇ ಚಿತ್ರಿಸಲ್ಪಡುತ್ತಾರೆ. ಆಪದ್ಧರ್ಮವೆಂಬುದು ಕೆಲಸ ಮಾಡುವುದನ್ನು ಕಥೆ ಸಮರ್ಪಕವಾಗಿ ಬಿಂಬಿಸುತ್ತದೆ. ಅಷ್ಟೇ ಅಲ್ಲದೆ, ಸಂಪ್ರದಾಯಸ್ಥ

ಬ್ರಾಹ್ಮಣ ಮನಸ್ಸು ಕೆಲಸ ಮಾಡುವ ರೀತಿಯನ್ನು ನಾವು ಈ ಸನ್ನಿವೇಶದಲ್ಲಿ ಕಾಣಬಹುದು. ಮತಾಂತರವಾಗುತ್ತ ಅನೇಕ ಪಲ್ಲಟಗಳಾಗುತ್ತಿರುವ ಹೊತ್ತಿನಲ್ಲಿ ಕಿರಿಸ್ತಾನರಿಂದ ವಿದ್ಯಾಭ್ಯಾಸ ವಿದ್ಯಾದಾನವೂ ಆಗತೊಡಗಿದಾಗ, ಅದರಲ್ಲಿ ಶೂದ್ರ ಸಂತಾನಗಳೂ ಸೇರಿಕೊಳ್ಳತೊಡಗಿದಾಗ ಮಾಳಪ್ಪಯ್ಯ ಶೂದ್ರರಿಗೇಕೆ ವಿದ್ಯೆ. ಈ ಶೂದ್ರ ಸಂತಾನಕ್ಕೆ ನಾಲಿಗೆ ಹೊರಳುತ್ತದೆಯೇ 'ಅಮರಕೋಶ'(ಪಕ್ಕದಲ್ಲಿ ಶ್ಲೋಕವೆಂದಿದೆ) ಇವೆಲ್ಲ ಇವುಗಳಿಗೆ ಬೇಕಾ, ವಿದ್ಯೆ ಎಲ್ಲರಿಗೂ ದಕ್ಕುತ್ತದಾ? ಅಪಾತ್ರರಿಗೂ ವಿದ್ಯಾದಾನ ಮಾಡಬೇಕೆ ಎಂದೆಲ್ಲ ಕೇಳುವುದು ಮೇಲ್ಜಾತಿಯ ಸಂಕುಚಿತ ಪ್ರಜ್ಞೆಯ ವರ್ಣನೆಯೇ ಆಗಿ ನಮ್ಮ ಮುಂದೆ ಮೂಡಿ ಬರುತ್ತದೆ. ಸಂಪ್ರದಾಯಸ್ಥ ಚೌಕಟ್ಟಿನಲ್ಲಿ ಇರುವ ಶೋಷಣೆಯ/ಜಾತಿ ಅಹಂಕಾರದ ಚಿತ್ರಣವೂ ಇದು. ಹಾಗೆ ನೋಡಿದರೆ ಬುದ್ದುವಿನ, ಅವನಂತಹವರ, ಮತಾಂತರದ ಪ್ರಶ್ನೆಯನ್ನು, ಮಾಳಪ್ಪಯನಂತಹವರ ಮೇಲ್ಜಾತಿಯ ದಬ್ಬಾಳಿಕೆಯ ಚಿತ್ರಣಗಳನ್ನು ಇನ್ನೂ ವಿಸ್ತಾರವಾಗಿ ಕಥೆಯ ಹಂದರದಲ್ಲಿಯೇ ಮತ್ತೊಂದು ತಾತ್ವಿಕ ವಿಷಯವಾಗಿ ಬೆಳೆಸಿದ್ದರೆ 'ಸ್ವಪ್ನ ಸಾರಸ್ವತ' ಕಾದಂಬರಿಗೆ ಇನ್ನೊಂದು ರೀತಿಯ ದೊಡ್ಡ ಆಯಾಮ ದೊರಕುತ್ತಿತ್ತು ಎಂಬುದು ನನ್ನ ವಾದ. (ಇದೇ ರೀತಿಯಲ್ಲಿ ಮತಾಂತರಗೊಂಡ ಕಿರಿಸ್ತಾನರು ಅಲ್ಲೂ ಇಲ್ಲದೆ ಇಲ್ಲೂ ಸೇರದೆ Inquisitionಗೆ ಬಲಿಯಾಗುವ ಕಥೆ ಅಲ್ಲಲ್ಲಿ ಬಂದು ಹೋಗುವ ಸಂಗತಿಯನ್ನು ನಾವು ಕಾಣಬಹುದು ಇದು ಇನ್ನೂ ಬೆಳೆದಿದ್ದರೆ ಮತ್ತೊಂದು ತಾತ್ವಿಕ ಆಯಾಮ ಕೃತಿಗೆ ಲಭಿಸುತ್ತಿತ್ತೆಂಬುದು ನನ್ನ ಗ್ರಹಿಕೆ.) Conversion / Displacement/ Deracination/Search for roots ಎಲ್ಲವೂ ಇಲ್ಲಿ ಇವೆ. Epic Preprationsನಲ್ಲಿರುವ ಈ ಕೃತಿಗೆ ಅವುಗಳ ಹೆಚ್ಚಿನ ಹೊರೆ ಖಂಡಿತವಾಗಿರಲಾರವು. ಕೃತಿಗೆ ಆ ವಿಷಯಗಳನ್ನೂ ಬೆಳೆಸಿಕೊಳ್ಳುವ ಶಕ್ತಿ ಖಂಡಿತ ಇದೆ. ನಾನು ಹೇಳುತ್ತಿರುವುದು ಕಾದಂಬರಿಯ ಒಳಗಿನಿಂದ ಬಂದ ಮಾತು– ಇದು ಸ್ಪಷ್ಟ. ಇನ್ನು ೧೦೦-೧೫೦ ಪುಟಗಳು ಹೆಚ್ಚಾಗುತ್ತಿದ್ದವು ಎಂಬುದು ಕ್ಷುಲ್ಲಕ ವಿಷಯ. ಇದು ಚರ್ಚೆಗೆ ಜಿಟ್ಟಿ ವಿಷಯ.

'ಸ್ವಪ್ನ ಸಾರಸ್ವತ'ದ Historical Perspective ಐತಿಹಾಸಿಕ ದೃಷ್ಟಿಕೋನದ ಬಗ್ಗೆ ಮಾತನಾಡಿ ನಾನು ಈಗ ಅದರ aesthetics ಮತ್ತು ಸಾಹಿತ್ಯ ಸಂವೇದನೆಯ ಬಗ್ಗೆ ಒಂದೆರಡು ಮಾತುಗಳನ್ನಾಡ ಬಯಸುತ್ತೇನೆ. ಮೊದಲೇ ನಾನು ಇದು ಒಂದು ಆಧುನಿಕ ಸಾಹಿತ್ಯ ಸಂವೇದನೆಯಿಂದ ಕಟ್ಟಲ್ಪಟ್ಟ ಕೃತಿ ಎಂದು ಹೇಳಿದ್ದೆ ಅದನ್ನು ಸ್ವಲ್ಪ ವಿವರಿಸುತ್ತೇನೆ.

ಮೊದಲಿನಿಂದ ಕೊನೆಯವರೆಗೂ ಸಾರಸ್ವತ ಸಮಾಜದ ಪ್ರಜ್ಞೆಯನ್ನು, ರೀತಿ-ರಿವಾಜುಗಳನ್ನು, ಸಾರಸ್ವತರ ನೈತಿಕತೆಯನ್ನು ವ್ಯಕ್ತಿಗಳ ಧರ್ಮವನ್ನು ಕಾಪಾಡಿಕೊಂಡು ಬರುವ, ಅವರ ಬದುಕಿನ ದಾರಿಯನ್ನು ಗುರಿಯನ್ನು, ಉದ್ದೇಶವನ್ನು ನಿರ್ಧರಿಸುವ ನಾಗ್ಡೊ ಬೇತಾಳನನ್ನು ತೆಗೆದು ಕೊಳ್ಳೋಣ. ಸಂಪೂರ್ಣವಾಗಿ ನಗ್ನನಾದ ಬೇತಾಳ ಕೃತಿಯ ಉದ್ದಕ್ಕೂ ಬಹಳ ಗಟ್ಟಿಯಾಗಿ ಮೂಡಿಬರುತ್ತಾನೆ. ಸರ್ವಾಂತರ್ಯಾಮಿಯಾದವನು ಅವನು. ಬೇಕಿದ್ದಾಗ ಬರುತ್ತಾನೆ, ಅಗತ್ಯವಿದ್ದಾಗ ಪ್ರತ್ಯಕ್ಷನಾಗುತ್ತಾನೆ. ಹೇಳದೆ, ಕೇಳದೆ ಹೊರಟುಹೋಗುತ್ತಾನೆ. ಭೂತ, ವರ್ತಮಾನ, ಭವಿಷ್ಯಗಳನ್ನು ತನ್ನೊಳಗೆ ಸಾಕ್ಷಾತ್ಕರಿಸಿಕೊಂಡ ಪ್ರಚಂಡ ಶಕ್ತಿ ಇವನು, ಅದ್ಭುತ ಸಂಕೇತವೂ ಹೌದು. ಇತಿಹಾಸವನ್ನು ಕಟ್ಟುತ್ತಿರುವ ಈ ಕೃತಿ, ವಾಸ್ತವಿಕತೆಯ ನೆಲೆಯಲ್ಲೇ ಚಲಿಸುವ ಕಥನ unreal ಆದ ನಾಗ್ಡೊ ಬೇತಾಳನನ್ನು ಹೇಗೆ ತನ್ನ ಜೈವಿಕವಾದ ಅಂಶವನ್ನಾಗಿ ಸೃಷ್ಟಿಸುತ್ತದೆ? ಇದನ್ನು ನಾನು ಎರಡು ರೀತಿಯಲ್ಲಿ ಅರ್ಥೈಸಿಕೊಂಡಿದ್ದೇನೆ.

ಒಂದು, ನಾನು ಗ್ರಹಿಸಿಕೊಂಡಿರುವ ರೀತಿಯಲ್ಲಿ ಗೋಪಾಲಕೃಷ್ಣ ಪೈರವರ ಈ ಕೃತಿ Marequez, Gunther Grossನಂತಹವರ ರೀತಿಯ ಕೃತಿ. ಅಂದರೆ ವಿಚಿತ್ರ, ವಿಲಕ್ಷಣ ವ್ಯಕ್ತಿಗಳು, ಅವರುಗಳ ಅತೀಂದ್ರಿಯ ಜ್ಞಾನ, ಅತಾರ್ಕಿಕ ರೀತಿ-ನೀತಿಗಳು, ಮತ್ತು ಅನೇಕ ಅಗೋಚರವಾದ ಸಂಗತಿಗಳನ್ನು ಮಾಂತ್ರಿಕ ವಾಸ್ತವಿಕತೆಯ (Magic Realism) ನೆಲೆಯಲ್ಲಿ ನಾವು ಅರ್ಥೈಸಿಕೊಳ್ಳಬೇಕು. Marequez ನ One hundred

year of solitudeನಲ್ಲಿ ಬರುವ Melquides ನಂತಹವನು ನಾಗ್ಕೊ ಬೇತಾಳ. Gunther Grassನ Oscar ನಂತಹವನು ಇವನು. ವಿಚಿತ್ರವಾದ ಶಕ್ತಿ, ನಂಬಲಾಗದ ಅಸ್ತಿತ್ವವನ್ನು ಹೊಂದಿರುವ ನಾಗ್ಕೊ ಬೇತಾಳ Magic Realismನ ಕ್ರಮದಿಂದ ರೂಪಿತಗೊಂಡಂತಹವನು. ವಿಚಾರವಾದದ ಮೂಲಕ ಗ್ರಹಿಸಲು ಪ್ರಯತ್ನಪಟ್ಟರೂ ಇವನನ್ನು ಕೇವಲ ನಂಬಿಕೆ ಅಥವಾ ಮೂಢನಂಬಿಕೆಗೆ ಬಿಟ್ಟ ವ್ಯಕ್ತಿ/ಶಕ್ತಿ ಎಂದು ಹೇಳಲು ಬರುವುದಿಲ್ಲ. ಇದು ಒಂದು.

ಎರಡನೆಯದಾಗಿ ಶತಮಾನಗಳ ಹಿಂದಿನ ಕಥೆಯನ್ನು ವರ್ತಮಾನದಲ್ಲಿ ಹೇಳಬೇಕಾದರೆ ಕೇವಲ ಗ್ರಾಂಥಿಕ ಸಂವೇದನೆ ಸಾಲದು – ಒಗ್ಗ ವಿಚಾರ ಕೆಲಸ ಮಾಡುವುದಿಲ್ಲ – ಅಥವಾ ಇತಿಹಾಸ, ಸಮಾಜ ಶಾಸ್ತ್ರ ಮಾನವಶಾಸ್ತ್ರಗಳ ಪಾಠಗಳ ಮೂಲಕ ಭೂತವನ್ನು / ಇತಿಹಾಸವನ್ನು ಕಟ್ಟಲು ಬರುವುದಿಲ್ಲ. ಅಂದರೆ mere Historical/Anthropological/Socilological material ಅಥವಾ knowledge ಕೆಲಸಕ್ಕೆ ಬಾರದ ಜ್ಞಾನ ರಾಶಿಗಳಾಗುತ್ತವೆ. ಒಂದು ಸೃಜನಶೀಲ ಕೃತಿ ಭೂತವನ್ನೂ ಅನುಭವದ ಪ್ರಕ್ರಿಯೆಯನ್ನಾಗಿ, ಕಾಲ್ಪನಿಕ ಪ್ರಕ್ರಿಯೆಯನ್ನಾಗಿ (Experiential and Imaginative process) ಅವಿ, ಅಂತ್ಯವಿಲ್ಲದ ಕಥನವನ್ನಾಗಿ ಮಾತ್ರ ಸೃಷ್ಟಿಸಲು ಸಾಧ್ಯ. ಒಂದು ರೀತಿಯಲ್ಲಿ ಸಮುದಾಯದ ಪ್ರಜ್ಞೆಯನ್ನು, ಅದರಲ್ಲೂ ಶತಮಾನಗಳ ಹಿಂದೆ ಬದುಕಿ ಹೋದ ಸಮುದಾಯದ ಸ್ವಪ್ನಗಳನ್ನು, ಅನುಭವಗಳನ್ನು ಹಿಡಿಯಲು ಬಿಡಿ ವ್ಯಕ್ತಿಯ ಪ್ರಜ್ಞೆಯಾಗಲಿ, ವಾಸ್ತವಿಕ ನೆಲೆಯಾಗಲಿ ಸಾಲದು. ಅಂದರೆ to capture the experiences and the imaginations of a community of the distant past - there realism is inadequate- at the same time a single individual gesture can not comperhend it. ಆದ್ದರಿಂದಲೇ ವಾಸ್ತವಿಕತೆಯನ್ನು ಮೀರಬೇಕು. ಸಮಷ್ಟಿ ಪ್ರಜ್ಞೆಯನ್ನೂ ಆವಾಹನೆ ಮಾಡಿಕೊಳ್ಳಬೇಕು. Paul Jung ಹೇಳುವಂತೆ ಇದು ಒಂದು Architypal pattern – ಈ Architypal pattern ಒಂದು Collective unconstions ಸಾಮುದಾಯಿಕ / ಸಮಷ್ಟಿಯೊಳಗೆ ಇರುವ, ಹುದುಗಿರುವ ಪ್ರಜ್ಞಾಕೇಂದ್ರ. ನಾಗ್ಕೊ ಬೇತಾಳ ಒಂದು Architypal pattern ಕೂಡ. ಭೂತದ ಕೇಂದ್ರವಷ್ಟೇ ಅಲ್ಲ ಇವನು. ಹಾಗೆ ನೋಡಿದರೆ ಗೋವಾ ಲಕ್ಷ್ಮ ಧ್ವರದ ಕಾದಂಬರಿ ಒಂದು ವಿಚಿತ್ರ ತಿರುವನ್ನು ಕೊನೆಯಲ್ಲಿ ಪಡೆಯುತ್ತದೆ.

ಇತಿಹಾಸದ ಕಥೆಯನ್ನು ಹಿಡಿಯುತ್ತಿರುವ ಕಾದಂಬರಿಕಾರ ತನ್ನ ಐತಿಹಾಸಿಕ ಪ್ರಜ್ಞೆಯಿಂದಾಗಿ ಆ ಭೂತದಲ್ಲೇ ಭವಿಷ್ಯವನ್ನು ನುಡಿಯುವ ಶಕ್ತಿಯನ್ನು ಸೃಷ್ಟಿಸುತ್ತಾನೆ. ಕೊನೆಯಲ್ಲಿ ನಾಗ್ಕೊ ಬೇತಾಳ ಮತ್ತೊಂದು ಆಕ್ರಮಣದ ಬಗ್ಗೆ ಮಾತನಾಡುತ್ತಾನೆ. ಇದು Prophetic ಅದ ಮಾತಲ್ಲ, not mere prophecy . ಇದು ಕೃತಿಯ ಇತಿಹಾಸ ದರ್ಶನ. The Arrival of British Colonialism ಇದೆ ಕೊನೆಯಲ್ಲಿ– ಬೇರೆ ಬಿಳಿಯರು ಆಳುತ್ತಾರೆ – ಆಕ್ರಮಣ ಮಾಡುತ್ತಾರೆ, ಶಾಪಗಳು ಫಲಿಸುವುದಿಲ್ಲ, ಮಾತುಗಳು ಅರ್ಥ ಕಳೆದುಕೊಳ್ಳುತ್ತವೆ ಎಂದೆಲ್ಲ ಹೇಳುವ ನಾಗ್ಕೊ ಬೇತಾಳ ಕೃತಿಯ Historical concious ನ್ನು ಸೂಚಿಸುತ್ತಾನೆ. ಇದನ್ನು ಅತೀಂದ್ರಿಯ ಜ್ಞಾನವಿರುವ ಅದ್ಭುತ ಪಾತ್ರ ಎಂದು ಮಾತ್ರ ವಿವರಿಸಲಾಗದು. ಕೃತಿಯ ಕಾಣ್ಕೆ ಇದು. ಆದ್ದರಿಂದ ಸಾರಸ್ವತ ಸಮಾಜದ ಅಸ್ತಿತ್ವದ ಪ್ರಶ್ನೆಯೂ ಇಲ್ಲಿ ಕೂಡಿ ಬರುವುದು. ಕೊಂಕಣಿಯಲ್ಲೇ ಮಾತನಾಡಬೇಕು, ಮಾಮಾ ಮಾಯಿ ಎಂದೇ ಸಂಬೋಧಿಸಬೇಕು ಎಂದು ಮುಂದಿನ ತಲೆಮಾರುಗಳಿಗೆ ನಾಗ್ಕೊ ಬೇತಾಳ ಆದೇಶ ನೀಡಿದಾಗ ಕೃತಿ ಕಟ್ಟುತ್ತಿರುವುದು ವಿನಾಶದ ಅಂಚಿನಲ್ಲಿ ಸಮುದಾಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪರಿಯನ್ನು. ಭಾಷೆ, ನಂಬಿಕೆ, ಆಚರಣೆಗಳು, ದೈವಗಳು ಒಂದು ಸಮುದಾಯದ Identityಯ ಸಂಕೇತಗಳು ಸಾರಸ್ವತ ಅಸ್ಮಿತೆ, Identity ಇರುವುದು ಈ ರೀತಿಯ ಮೌಖಿಕತೆಯಲ್ಲಿ – ಕಾದಂಬರಿ ಬಹಳ ದೊಡ್ಡ ಅರ್ಥದಲ್ಲಿ ಬರವಣಿಗೆಯ ಮೂಲಕ ಮೌಖಿಕ ಸಂಸ್ಕೃತಿಯ ಸ್ವರೂಪವನ್ನು ನಮಗೆ ಪರಿಚಯಿಸುತ್ತಲೇ

ಹೋಗುತ್ತದೆ. ಸ್ಮೃತಿಯ ಮೂಲಕವೇ ಆಕ್ರಮಣವನ್ನು ವಿನಾಶವನ್ನು ಗೆಲ್ಲುವ ಜೀವದ್ರವ್ಯವಿದು. Memory ಎಂಬುದೇ ಸ್ವಪ್ನ – ಸಾರಸ್ವತ ಸ್ವಪ್ನ – ಸಾರಸ್ವತ ಸ್ಮೃತಿ – ಈ ಸ್ಮೃತಿ ಕೇವಲ ವಾಸ್ತವಿಕತೆಯ ಮೂಲಕ ಉಳಿಯುವುದಿಲ್ಲ. ವಾಸ್ತವಿಕತೆಯ ಸರಹದ್ದುಗಳನ್ನು ದಾಟಬೇಕು.

ಈ ರೀತಿ ಮಾಡುವಾಗ ಗೋಪಾಲಕೃಷ್ಣ ಪೈ ಅನೇಕ ಸೂಕ್ಷ್ಮಗಳನ್ನೂ ಅನಾವರಣಗೊಳಿಸುತ್ತಾರೆ. Diaspora ಎಂದು ನಾವು ಇಂದು ಆಧುನಿಕ ಮೀಮಾಂಸೆಯಲ್ಲಿ ಹೆಸರಿಸುತ್ತೇವೆಯೋ ಅದನ್ನು ದೇಶಿ ನೆಲೆಯಲ್ಲೇ, ಭೂತದಲ್ಲೇ ಪೈ ಕಟ್ಟಿ ಮಾತನಾಡುತ್ತಾರೆ. 'ಸ್ವಪ್ನ ಸಾರಸ್ವತ' ಒಂದೇ ನೆಲದಲ್ಲಿ, ಒಂದೇ ದೇಶದಲ್ಲಿ ನಡೆಯುವ diasporaದ ಕಥನ. ವಲಸೆ ಎಂಬುದು ಪರದೇಶಕ್ಕೆ ಹೋಗುವ ಕ್ರಿಯೆ ಮಾತ್ರವಲ್ಲ. ಈ diaspora ಅನೇಕ ಬಗೆಯ ತಲ್ಲಣಗಳನ್ನುಂಟುಮಾಡುತ್ತದೆ. ಉಳಿವಿಗಾಗಿ ಒಂದು ಸಮುದಾಯ ಬಳಸುವ ತಂತ್ರಗಳನ್ನು, ಮಾಡಿಕೊಳ್ಳುವ ರಾಜಿಗಳನ್ನು ಮುಕ್ತವಾಗಿಯೇ ತೆರೆದಿಡುತ್ತದೆ. 'ಸೊಂಟದಲ್ಲಿ ಬಲವಿಲ್ಲದ ಬ್ರಾಹ್ಮಣರು' ಪರಸ್ಥಳದಲ್ಲಿ ಉಳಿವಿಗಾಗಿ, ತಮ್ಮ ಮರ್ಯಾದೆಗಾಗಿ, ಮಾನಕ್ಕಾಗಿ, ಕದ್ದು ಮುಚ್ಚಿ ಮೀನನ್ನು ತಿನ್ನುವಾಗ ಬಳಸುತ್ತಿರುವುದು Survival Strategies ಅನ್ನು. ಹಾಗೆಯೇ ಬದಲಾಗುತ್ತಿರುವ ವರ್ತಮಾನದಲ್ಲಿ ಮಾರುಕಟ್ಟೆಯ ನಿಯಮಗಳಿಗೆ ಶರಣಾಗದೆ 'ಆಸ್ತಿ'ಯನ್ನು, ಅಂದರೆ ಭೂಮಿಯನ್ನು, ಕೃಷಿಯನ್ನು ಮಾತ್ರ ನಂಬುವುದು ಕೂಡ Survivalನ strategy ಯೇ 'ಸ್ವಪ್ನ ಸಾರಸ್ವತ'. ರಾಮ್ಸ ಪೈ ಭೂಮಿಯನ್ನು, ಆಸ್ತಿಯನ್ನು ಮಾಡುವುದು ಬಗ್ಗೆಸಿದಾಗ ನಿರ್ಭೀಡೆಯಿಂದ ಬ್ರಾಹ್ಮಣರ, ಸಾರಸ್ವತರ ವ್ಯಾವಹಾರಿಕ ಜಾಣತನವನ್ನೇ ಸೆರೆಹಿಡಿಯುತ್ತಿರುವುದು. ಮುಖ್ಯವಾಗಿ ನನಗೆ ಹೇಳಬೇಕೆನಿಸುವುದೆಂದರೆ ಈ ಕೃತಿ ಕೇವಲ Sentimental ಆದ, Self pity ತುಂಬಿದ, Victim Syndrome ನಿಂದ Pathetic ಆದ ಸ್ಥಿತಿಯನ್ನು ತನ್ನ ವಸ್ತುವನ್ನಾಗಿಸಿಕೊಳ್ಳುವುದಿಲ್ಲ. ಇದು ಎಷ್ಟೇ ಕ್ರೌರ್ಯ, ಹಿಂಸೆ, ರಕ್ತಪಾತಗಳ ಬಗ್ಗೆ ಇರುವ ಕೃತಿಯಾದರೂ ಶಕ್ತಿ ಇಲ್ಲದ 'ಅಯ್ಯೋ ಪಾಪದ' ಸ್ಥಿತಿಯಲ್ಲಿರುವ ಸಮುದಾಯದ ದುರಂತ ಕಥೆಯಲ್ಲ – ಎಷ್ಟೇ ದುರಂತಗಳ ಚಿತ್ರಣಗಳಿದ್ದರೂ ಬದುಕುವ ಛಲದ, ಚೈತನ್ಯದ ಕಥನವೇ ಇದು. ಆದ್ದರಿಂದಲೇ ಇಲ್ಲಿ Pathos/melancholy ಕೋಕವಿಲ್ಲ – ಬದಲಾಗಿ ಶಕ್ತಿ, ಸಂಕಲ್ಪ, ವೈರಾಗ್ಯವಿದೆ. Stength. will and detachment - Victum Syndorme ನಿಂದ ತುಂಬಿದ ಕಥನವಲ್ಲ ಇದು A tribute to the will of commuinty . ಸ್ವಪ್ನ ಕಾದಂಬರಿ ಇದನ್ನು ಅದ್ಭುತವಾಗಿ ಸಾಧಿಸುವುದನ್ನು ಕೇವಲ ಎರಡು ನಿದರ್ಶನಗಳ ಮೂಲಕ ತೋರಿಸಿಕೊಡುತ್ತೇನೆ.

ಒಂದು, ತತ್ತರಿಸಿ ಹೋದ ವಲಸಿಗರ ಸಮುದಾಯದಲ್ಲಿ ಕಂಡು ಕಾಣದ ಜಾಗದಲ್ಲಿ ಗಂಡಸರು ಅಳಲು ಶುರು ಮಾಡಿದಾಗ, ರೋದಿಸತೊಡಗಿದಾಗ ಕಾಳಿಯಂತೆ, ಮಹಾಮಾಯಿಯಂತೆ, ತುಳಜಾಮಾಯಿ, ಎಂದೂ ಬಾಯಿ ಬಿಡದ ಹೆಣ್ಣು ರೋಷದಿಂದ ಆಕ್ರೋಶಗೊಂಡು ಕಿರುಚುತ್ತಾಳೆ – ಎಲ್ಲವನ್ನೂ ದಂಗುಗೊಳಿಸುವ ಕ್ರೋಧವದು. ಹೆಣ್ಣು, ಕಾಳಿಯ/ಮಹಾಮಾಯಿಯ ಅವತಾರವಿದ್ದಂತೆ ಅದು. ಕೃತಿಯ ಪೂರ್ತಿ ಈ ರೀತಿಯ ಸ್ತ್ರೀ ಶಕ್ತಿ, ನಾಗೂ ಬೇತಾಳನ ಕಟ್ಟಳೆಗಳು - Commandments ಇರುವುದನ್ನು ನಾವು ಯಾವ ಕಾರಣಕ್ಕೂ ಗೌಣಗೊಳಿಸಬಾರದು.

ಎರಡನೆಯದು ಗಂಡು-ಹೆಣ್ಣಿನ ಅಪರ್ಯಾಯ ಸಂಬಂಧದ ಮೂಲಕ ಇದನ್ನು ಕಾದಂಬರಿ ತೋರಿಸಿಕೊಡುತ್ತದೆ. ಅಂದರೆ ಇತಿಹಾಸದ ಕ್ರೌರ್ಯವನ್ನು, ಭೀಕರತೆಯನ್ನು ಬಿಚ್ಚಿಡುತ್ತಲೇ ಇತಿಹಾಸದ ಭಯಾನಕ ಹಿಂಸೆಯನ್ನು ಮೀರುವ ಅದ್ಭುತ ಕ್ಷಣವನ್ನೂ ಕಥೆ ಹಿಡಿಯುತ್ತದೆ. ಇದು ವಿಟ್ಟು ಪೈ ಮತ್ತು ಅಲ್ವೀರಾಗೆ ಸಂಬಂಧಪಟ್ಟ ಕಥೆ. ಹಟ, ದ್ವೇಷ, ಕೋಪ, ವಿಷ ತುಂಬಿದ ಕ್ಷಣದಲ್ಲೂ ಗಂಡು-ಹೆಣ್ಣಿನ ಅನಿರೀಕ್ಷಿತ ಲೈಂಗಿಕ ಸಂಪರ್ಕ/ಸಂಬಂಧ ಇತಿಹಾಸವನ್ನು ಆ ಕ್ಷಣದಲ್ಲೇ ಮೀರುವ ಕ್ರಿಯೆಯೂ ಹೌದು. ಲೈಂಗಿಕ ಸುಖ ಕೊಡುತ್ತಲೇ ಪಡೆದುಕೊಳ್ಳುತ್ತಲೇ ವಿಟ್ಟು ಪೈ ಮತ್ತು ಅಲ್ವೀರಾ ಧರ್ಮ, ವರ್ಗ,

ಇತಿಹಾಸಗಳ ಗಡಿಗಳನ್ನೂ ಮೀರುತ್ತಾರೆ. ಪ್ರೀತಿ, ವಾತ್ಸಲ್ಯಕ್ಕೆ ತಿರುಗುವ ಇವರ ಲೈಂಗಿಕ ಸಂಬಂಧ ಮಾನ, ಮರ್ಯಾದೆ, ಗೌರವ, ತುಂಬಿದ ಪರಿಪಕ್ವವಾದ ಗಂಡು-ಹೆಣ್ಣಿನ ಆತ್ಮ ಸಂಬಂಧವೂ ಆಗಿಬಿಡುತ್ತದೆ. ಇದನ್ನು ಪೈರವರ ಕಾದಂಬರಿ ಮನೋಜ್ಞವಾಗಿ ಅಭಿವ್ಯಕ್ತಿಸುತ್ತದೆ. ಇತಿಹಾಸವನ್ನು ಪ್ರೇಮದ ಮೂಲಕ, ಪ್ರೀತಿಯ ಮೂಲಕ ಗೆಲ್ಲುವ ಸಾಂಕೇತಿಕ ಕ್ರಿಯೆಯೇ ಇದು.

ಕೊನೆಕೊನೆಯಲ್ಲಿ ಕಾದಂಬರಿ ಅನೇಕ ಮಹತ್ವದ ತಾತ್ವಿಕ ನೆಲೆಗಳನ್ನು ಗಳಿಸಿಕೊಳ್ಳುವುದನ್ನು ನಾವು ಕಾಣಬಹುದು. ಇವೆಲ್ಲವನ್ನೂ ನಾನು ನಿಮ್ಮ ಮುಂದೆ ಇಡುತ್ತಿರುವುದು ಕಾದಂಬರಿ ಹೇಗೆ ತನ್ನ ವಿಶಾಲವಾದ ತಾತ್ವಿಕತೆಯನ್ನು ಸಾಹಿತ್ಯ ಸಂವೇದನೆಯ ಮೂಲಕ ಗಳಿಸಿಕೊಳ್ಳುತ್ತದೆ ಎಂದು ಸೂಚಿಸಲು. ಅಂದರೆ ಒಂದು fine literary sensibility ಇತಿಹಾಸವನ್ನು ಹೇಗೆ ಬಗೆಯಬಹುದು ಎಂಬುದಕ್ಕೆ 'ಸ್ವಪ್ನಸಾರಸ್ವತ' ಅತ್ಯುತ್ತಮ ಉದಾಹರಣೆ ಎಂದು ಹೇಳಲು ಈ ರೀತಿಯ ಪ್ರಯತ್ನವನ್ನು ನಾನು ಮಾಡುತ್ತಿರುವುದು. ಉದಾಹರಣೆಗೆ – ಸೊಸೆ ಮನೆ ತುಂಬಿದ ದಿನವೇ ಸಾವಾದಾಗ ನಾಗಪ್ಪಯ್ಯ ಹೇಳುವ ಮಾತಿದು – 'ಹುಟ್ಟಿದವರು ಸಾಯುತ್ತಾರೆ. ಅವರವರ ವಿಧಿ... ಅದಕ್ಕೆ ನಾವು ಇನ್ನೊಬ್ಬರು ಹೊಣೆ ಎಂದು ಹೇಳಿದರೆ ದೇವರನ್ನು ಧಿಕ್ಕರಿಸಿದಂತೆ– ಹುಡುಗಿಯ ಕಾಲುಗುಣ, ಕೈಗುಣ ಅನ್ನೋ ಮಾತು ಈ ಮನೆಯಲ್ಲಿ ಹುಟ್ಟಿದರೆ ಎಲ್ಲರಿಗೆ ನನ್ನ ಜೀವದ ಆಣೆ ಇದೆ' ಎನ್ನುತ್ತಾನೆ. ಸಂಪ್ರದಾಯದ ಕ್ರಮದಲ್ಲೇ, ಅನೇಕ ಅವೈಜ್ಞಾನಿಕ ಎನ್ನಬಹುದಾದ ಆಚರಣೆ ಇರುವ ಸಮುದಾಯದಲ್ಲೇ, ಈ ರೀತಿಯ ಅದ್ಭುತ ದರ್ಶನವಾಗುವುದು ಕಥನದ ಹಿರಿಮೆಯನ್ನು ಎತ್ತಿ ಹಿಡಿಯುವ ಸಂಗತಿ. ಎಲ್ಲ ರೀತಿಗಳಲ್ಲೂ ಕಾದಂಬರಿ ವಾಸ್ತವವನ್ನು ವರ್ತಮಾನದ ಬಂಧನವನ್ನು ಇತಿಹಾಸದ ಕ್ರೌರ್ಯವನ್ನು ಮೀರಲು ಹವಣಿಸುತ್ತದೆ – ಸಾಧಿಸಿಯೂ ಸಾಧಿಸುತ್ತದೆ. ಆ ಅರ್ಥದಲ್ಲಿ ಇದು 'ಸ್ವಪ್ನವೇ— The dream of transendent ಮೀರುವಿಕೆಯ ಕನಸೇ ಇದು. ಸಾರಸ್ವತ transcndent - through history – ಇತಿಹಾಸದ ಮೂಲಕವೇ ಮೀರುವಿಕೆಯನ್ನು ಸಾಧಿಸುವ ಸ್ವಪ್ನ – ಇದು ಕನಸು – ಕನಸುಗಾರಿಕೆ ಅಲ್ಲ, dreams ಅಂದರೆ Visions ಸಾರಸ್ವತ Visions- idle day dreaming - ಹಗಲುಗನಸಲ್ಲ. (ಹಾಗೆ ನೋಡಿದರೆ ಇಂದು ಕೂಡ ಚಿತ್ರಾಪುರ ಮಠಕ್ಕೆ ಪರ್ತಗಾಳಿ ಮಠಕ್ಕೆ ಬಾಂಬೆ, ಬೆಂಗಳೂರು, ಬೇರೆ ದೇಶಗಳಲ್ಲಿರುವ ನಾನಾರೀತಿಯ ಸಾರಸ್ವತರು (ಬರಿ ಗೌಡ ಸಾರಸ್ವತರು ಮಾತ್ರ ಅಲ್ಲ) ಇಲ್ಲವೆ? –ಅಂದರೆ ಅದು ಮುಗಿದಿರುವ ಕಥೆಯಲ್ಲ– ಸಾರಸ್ವತರ ಕೊಂಕಣಿಯರ ಅಸ್ಮಿತೆಯ ಜೀವಂತ ಹುಡುಕಾಟದ ಕಥನ) – ಸ್ವಪ್ನ, ವಾಸ್ತವ, ಕಲ್ಪನೆ, ಇತಿಹಾಸ ಭೂತ, ವರ್ತಮಾನ, ಭವಿಷ್ಯಗಳ ಆದಿ-ಅಂತ್ಯಗಳಿಲ್ಲದ ನಿರಂತರ ಕ್ರಿಯೆ.

ಎಷ್ಟು ಬಗೆಯ ಕಥಾನಕಗಳು ಇಲ್ಲಿ ಬೆಸೆದಿವೆ ಎಂದರೆ ನಾಗಶಾಪ, ಅಂಜನ ಹಾಕುವುದು, ವೈದಿಕ ದೇವರುಗಳು ಹೊಸ ದೇವರುಗಳ ಜೊತೆಯಾಗುವುದು ಪ್ರಕೃತಿಗೆ ಹೆದರಿದಾಗ ದೇವರುಗಳು ಹುಟ್ಟುವುದು, ರಂಗಪ್ಪನ ಮುಗ್ಧತೆ, ಭುಜಂಗಪ್ಪೈ, ಜಾನ್ನಪ್ಪ, ಕಾಳಿ, ತಿಮ್ಮ ಪೈಯಂಥವರ ಬೀಭತ್ಸ ರೀತಿಗಳು, ರಾಚ್ಚಪ್ಪೈ ಗಳಿಸುವ ಪ್ರಬುದ್ಧತೆ – ಎಲ್ಲವೂ ಒಂದು ರೀತಿಯಲ್ಲಿ ಮಾನವ ನಾಗರಿಕತೆಯ, ಸಮಷ್ಟಿಯ ಕಥೆಗಳೇ – ಇವು ಈ ಕಾದಂಬರಿಯ ಅಂಶಗಳು ಮಾತ್ರ ಅಲ್ಲ, ಇಡೀ ಕಾದಂಬರಿಯನ್ನು ವರ್ತಮಾನ ಕಟ್ಟಿಕೊಳ್ಳುವ – ಇತಿಹಾಸದ ಮೂಲಕ - ಐತಿಹ್ಯಗಳ ಮೂಲಕ (Mythical Elements) ಪ್ರಜ್ಞೆಯ ಮೂಲಕ – ಅಂದರೆ Collective unconscious ಮತ್ತು Conscious self ಗಳ ಮೂಲಕ – ಪ್ರಜ್ಞಾಪೂರ್ವಕ/ಅಪ್ರಜ್ಞಾಪೂರ್ವಕ 'ಸ್ವಪ್ನ'. ಈ ರೀತಿ 'ಸಾರಸ್ವತ ಸ್ವಪ್ನ' ಎಲ್ಲ ಸಮುದಾಯಗಳ ಸ್ವಪ್ನವೂ ಹೌದು.

ಇಂಗ್ಲಿಷ್ ಅಧ್ಯಾಪಕರು, ಎನ್.ಎಂ.ಕೆ. ಆರ್.ವಿ. ಕಾಲೇಜು, ಜಯನಗರ, ಬೆಂಗಳೂರು - ೫೬೦ ೦೧೧


ದೇಶಕಾಲ

ವಿಶೇಷ ಕುರಿತು

'ದೇಶಕಾಲ' ತ್ರೈಮಾಸಿಕ ಪತ್ರಿಕೆ ಐದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಪ್ರಕಟಿಸಿರುವ ವಿಶೇಷಾಂಕವಿದು.

ದೇಶಕಾಲ ವಿಶೇಷ ಸಂಚಿಕೆಯ ಕುರಿತು ಬರೆಯುವಾಗ ನನಗೆ ಇದರ ಸಫಲತೆ, ವಿಫಲತೆಯನ್ನು ಎತ್ತಿ ತೋರಿಸುವುದಕ್ಕಿಂತ ಇಂಥ ಪತ್ರಿಕೆಯ ಹಿಂದಿರುವ ನಿಲುವುಗಳು ಮತ್ತು ಆ ನಿಲುವುಗಳು ನಿರ್ದೇಶಿಸುತ್ತಿರುವ ನೆಲೆಗಳನ್ನು ಪರಿಶೀಲಿಸುವುದು ಈ ಹೊತ್ತಿಗೆ ಮುಖ್ಯವೆಂದುಕೊಂಡಿದ್ದೇನೆ.

ಕನ್ನಡ ಸಾಹಿತ್ಯ ಪತ್ರಿಕೆಗಳು ಎಂದಿನಂತೆ ತಮ್ಮ ಬದ್ಧತೆಯೊಂದಿಗೆ ಪ್ರಕಟವಾಗುತ್ತಿವೆ. ಈ ಪತ್ರಿಕೆಗಳು ಕನ್ನಡ ಸಂವೇದನೆಗಳನ್ನು ಪೋಷಿಸುವುದರ ಜೊತೆಗೆ ಸಾಹಿತ್ಯದ ಅಂಗಳದಲ್ಲಿ ಮಹತ್ವದ ಹಲವು ಪ್ರಶ್ನೆಗಳನ್ನು ಎತ್ತಿಕೊಂಡಿವೆ. ಸಮಕಾಲೀನವಾಗಿ ವಾಗ್ವಾದಗಳನ್ನು ಬೆಳೆಸುವುದರಲ್ಲಿ ಕ್ರಿಯಾಶೀಲವಾಗಿದ್ದು, ಆ ಮೂಲಕ ಸಜೀವವಾಗಿವೆ.



ದೇಶಕಾಲ ವಿಶೇಷ
ವಿಶೇಷ ಸಂಚಿಕೆ
ಪುಟಗಳು : ೩೨೦
ಬೆಲೆ : ರೂ. ೨೫೦.೦೦
ಮುದ್ರಣ : ೨೦೦೦

ವಿಶೇಷ ಸಂಚಿಕೆಯ ಲೋಕಾರ್ಪಣೆಯ ನೆಪದಲ್ಲಿ ಹಾಕಿಕೊಳ್ಳುವ ವಿಶೇಷ ಶೀರ್ಷಿಕೆಗಳು ಹಾಗೂ ವಿಶೇಷಾಂಕದ ಒಳಗಿನ ಪದಾರ್ಥಗಳು ಇವು ಸಾಹಿತ್ಯವಲಯವೊಂದರ 'ರಾಜನೀತಿ'ಯನ್ನು ಗಮನಿಸುವಂತೆ ಒತ್ತಾಯಿಸುತ್ತದೆ. ಆದ್ದರಿಂದ ಈ ಸಂಚಿಕೆಯನ್ನು ಬರೀ ಸಾಹಿತ್ಯ ಸಂಬಂಧವಾಗಿ, ಒಂದು ಸಡಗರವಾಗಿ ಮಾತ್ರವೇ ನೋಡಲು ಬರುವುದಿಲ್ಲ. ಈ ವಿಶೇಷಾಂಕಕ್ಕೆ ಪ್ರಚಾರ ನೀಡಲು ಟೊಂಕ ಕಟ್ಟಿ ನಿಂತ ಮಾಧ್ಯಮಗಳು, ಈಚೆಗಷ್ಟೇ ತನ್ನ ಪ್ರಕಟಣೆಯ ನಲವತ್ತೈದು ವರ್ಷ ಪೂರೈಸಿದ ಸಂಕ್ರಮಣದ ಬಗೆಗಾಗಲಿ, ಇಪ್ಪತ್ತೈದರ ಹತ್ತಿರವಿರುವ ಇತರ ಸಾಹಿತ್ಯ ಪತ್ರಿಕೆಗಳ ವಿಶೇಷಾಂಕಗಳ ಬಗ್ಗೆಯೂ ಇದೇ ಉತ್ಸಾಹದಿಂದ ಬರೆಯುವುದಿಲ್ಲ ಯಾಕೆ ಎನ್ನುವ ಉತ್ತರ ಸಿಗದ ಪ್ರಶ್ನೆ ಏಳುತ್ತದೆ. ಗುಮಾನಿ ಹುಟ್ಟಿಸುವಷ್ಟು ಅತಿ ಪ್ರಚಾರ ಈ ಸಂಚಿಕೆಯ ಹಿನ್ನೆಲೆಗಿದೆ.

ಬಹುಪಾಲು ಒಂದು ನೂರು ವರ್ಷಗಳ ಇತಿಹಾಸ ಇರುವ ನಮ್ಮ ಸಾಹಿತ್ಯ ಪತ್ರಿಕೆಗಳಲ್ಲಿ ವಿಶೇಷ ಸಂಚಿಕೆ ಎನ್ನುವುದು ಆಯಾ ಪತ್ರಿಕೆಗಳು ತಮ್ಮ ಚಂದಾದಾರರ ನಿಷ್ಠೆಗೆ ಸಲ್ಲಿಸುವ ಗೌರವದ ಹಾಗೆ

ಛಾಪಿಸಿದೆ. ಪಟ್ಟಿನ ಬೆಲೆ ಇಟ್ಟು ಕಮಾಡಿಟಿಯ ಹಾಗೆ ಮಾರಿದ್ದು ನೆನಪಿಲ್ಲ (ಇಲ್ಲಿ ಜನಪ್ರಿಯ ಪತ್ರಿಕೆಗಳ ಜಾಹಿರಾತು ಹಾಗೂ ಬರಹಗಳನ್ನು ಗುಡ್ಡೆ ಹಾಕಿ ಜಾಹಿರಾತಿನ ನಡುವೆ ಪ್ರಕಟಿಸಿ ದರಕ್ಕೆ ಮಾರುವ ವಿಚಾರಕ್ಕೆ ಬಟ್ಟಿದ್ದೇನೆ). ಜೊತೆಗೆ ಕಳೆದ ಕೆಲವು ದಶಕಗಳಲ್ಲಿ ಸಾಹಿತ್ಯ ಪತ್ರಿಕೆಗಳ ವಿಶೇಷಾಂಕಗಳು ವಿಷಯ ಆಧಾರಿತವಾಗಿರುತ್ತಿದ್ದವು. ಹೀಗೆ ಚೌಚೌ ಬರಹಗಳನ್ನು ಪೇರಿಸುವುದು ಜನಪ್ರಿಯ ಪತ್ರಿಕೆಗಳ ಸ್ವರೂಪವು. 'ಸಂಚಯ'ದ 'ಹಿಂದ್ ಸ್ವರಾಜ್' ಸಂಚಿಕೆ, ರಾಜಕುಮಾರ್, ತೇಜಸ್ವಿ, ಶರ್ಮ ಮುಂತಾದ ವ್ಯಕ್ತಿ ವಿಶೇಷ ಸಂಚಿಕೆ, 'ಶೂದ್ರ'ದ ಗಾಂಧಿ ಮತ್ತು ಕುವೆಂಪು ವಿಶೇಷಾಂಕ, 'ಸಂಕ್ರಮಣ'ದ ಕುವೆಂಪು ಮತ್ತು ಡಂಕೆಲ್ ವಿಶೇಷಾಂಕಗಳು, 'ರುಜುವಾತಿ'ನ ಎಂ.ಎನ್. ರಾಯ್ ವಿಶೇಷಾಂಕ, 'ಸಾಕ್ಷಿ'ಯ ಪೋಲೀಷ್ ಸಾಹಿತ್ಯಾಂಕ... ಇವು ನಮ್ಮ ಸಾಹಿತ್ಯ ಪತ್ರಿಕೆಗಳ ವಿಶೇಷಾಂಕಗಳ ನಮೂನೆ. ವ್ಯಕ್ತಿ ಅಥವಾ ವಿಷಯ ಕುರಿತು ವಿಶಿಷ್ಟವಾಗಿ ರೂಪುಗೊಳ್ಳುತ್ತಿವೆ. ದೇಶಕಾಲದ ವಿಶೇಷ ಸಂಚಿಕೆ ಹೀಗೆ ಅನೇಕ ಲೇಖಕರ ಬರಹಗಳನ್ನು ಒಟ್ಟುಗೂಡಿಸಿ ನಮ್ಮ ವಿಶಾಲ ವಿಶೇಷಾಂಕಗಳಿಗಿಂತ ಸ್ವಲ್ಪ ಮೇಲುಮಟ್ಟದ ಬರಹಗಳನ್ನು ಒಟ್ಟುಗೂಡಿಸಿದೆ.

ದೇಶಕಾಲ ಈ ಹಿಂದಿನ 'ಸಾಕ್ಷಿ' ಮತ್ತು 'ರುಜುವಾತು'ಗಳ ಮಾದರಿಗಳನ್ನು ಕಸಿ ಮಾಡಿದ ಪತ್ರಿಕೆಯಾಗಿದೆ. ಒಂದು ನಿರ್ದಿಷ್ಟ ಗುಂಪಿನ ಕೆಲವು ಬರಹಗಾರರನ್ನು ಇದು ತನ್ನ ತೆಕ್ಕೆಗೆ ಒಳಗೊಂಡಿರುವುದನ್ನು ಇದರ ಐದು ವರ್ಷಗಳ ನಡೆಯಲ್ಲಿ ಗುರುತಿಸಬಹುದಾಗಿದೆ. ಈ ಪತ್ರಿಕೆ ತನ್ನ ಬಗ್ಗೆ ತಾನು ನಡೆಸಿದ ಆತ್ಮವಿಮರ್ಶೆಯಲ್ಲೂ ಇದರ ವಿರುದ್ಧ ನಡೆದ ವಾಗ್ವಾದಗಳಲ್ಲೂ ಅದರ ರಕ್ಷಣೆಗೆ ಒದಗಿಬಂದವರು ಆ ಗುಂಪಿನ ಲೇಖಕರೇ. ಹೊಸ ಕಾಲದ ಸಾಹಿತ್ಯ ಪತ್ರಿಕೆಗಳ ಬಹುಮುಖತೆ ದೇಶಕಾಲ ಹೊಂದಲು ಸಾಧ್ಯವಾಗಿಲ್ಲ.

ಒಂದು ಸಾಹಿತ್ಯ ಪತ್ರಿಕೆ ರೂಪಿಸುವ ವಿಶೇಷಾಂಕದ ಸಂದರ್ಭವೆಂದರೆ, ಅದು ಸಂಭ್ರಮದ ಸಮಯವಾಗಿರುವಂತೆ ಸವಾಲಿನ ಕೆಲಸವೂ ಆಗಿರುತ್ತದೆ. ಯಾವ ವಿಶೇಷಾಂಕವೂ ಪರಿಪೂರ್ಣವೆನಿಸಲ್ಲವಾದರೂ ಸಂಪಾದಕನ ಆಯಕಟ್ಟನ್ನು, ತಿಳುವಳಿಕೆಯ ಎಲ್ಲೆಯನ್ನು ದಾಟಿ ಹೋಗುವ, ಅದೊಂದು ಅಪರಿಚಿತ ಯಾನವಾಗುವಂತೆ ಸಜ್ಜುಗೊಳಿಸುವುದು ಯಾವುದೇ ವಿಶೇಷಾಂಕದ ಪ್ರಾಮಾಣಿಕ ಪ್ರಯತ್ನವೆನ್ನಬಹುದು. 'ದೇಶಕಾಲ ವಿಶೇಷ'ದಲ್ಲಿ ಈ ಸಾಧ್ಯತೆ ಸಂಭವಿಸಿಲ್ಲ.

ದೇಶಕಾಲದ ಧೋರಣೆಯನ್ನು ಯಾರಾದರೂ ಗಮನಿಸಬಹುದಾಗಿದೆ. ನಾವು ಪ್ರಶ್ನಾತೀತರು, ಕೊಡುವಂಥವರು ಪತ್ರಿಕೆಯ ಮೂಲಕ ಕೊಡುತ್ತಿರುವುದೆಲ್ಲವೂ ಸ್ವೀಕಾರಾರ್ಹವೇ ಆಗಿದೆ ಎನ್ನುವ ಧೋರಣೆ ಎದ್ದು ಕಾಣುತ್ತಿದೆ. ದೇಶಕಾಲ ತನ್ನ ಕಾಲದ ಬರಹಗಾರರ ಸಮುದಾಯದೊಂದಿಗೆ ಒಂದು ಸಾವಯವ ಸಂಬಂಧ ಸ್ಥಾಪಿಸಿಕೊಂಡಿಲ್ಲ. ಇಲ್ಲಿ ಹೊಸಬನೊಬ್ಬನ ಬರಹವಾಗಲೀ, ಓದುಗರೊಬ್ಬರ ಪ್ರತಿಕ್ರಿಯೆಯಾಗಲೀ ಸಹಜವಾಗಿ ಪ್ರಕಟಗೊಳ್ಳುವುದಿಲ್ಲ. ಸಾಹಿತ್ಯ ಪತ್ರಿಕೆಗಳ ಮೊನಚು ಮುಖಗಳು ಬದಲಾಗಿ ಅದು ಉಳಿದ ಜನಪ್ರಿಯ ಪತ್ರಿಕೆಗಳಂತೆ ಹೆಚ್ಚು ವೃತ್ತಿಪರತೆಯಿಂದ ರೂಪುಗೊಳ್ಳುತ್ತವೆ.

'ಇಪ್ಪತ್ತೊಂದನೆ ಶತಮಾನದ ಇಪ್ಪತ್ತೊಂದು ಬರಹಗಾರರು' ಶೀರ್ಷಿಕ ಅಡಿಯಲ್ಲಿ ಇಪ್ಪತ್ತೊಂದು ಕನ್ನಡ ಲೇಖಕರನ್ನು, ಅವರ ಬರಹಗಳೊಂದಿಗೆ ಪರಿಚಯಿಸಲಾಗಿದೆ. ಇಂತಿಷ್ಟು ಜನ ಲೇಖಕರು ಅಂತ ವರ್ಗೀಕರಿಸಿಕೊಂಡು ಗುರುತಿಸ ಹೊರಡುವುದೇ ಕನ್ನಡದಂಥ ಬಹುಮುಖಿ ಸಂದರ್ಭದಲ್ಲಿ ಬಹಳ ಸಂಕೀರ್ಣ ಕೆಲಸ. ಫೋರ್ಬ್ಸ್‌ನಂಥ ಕೆಲವು ವ್ಯಾಪಾರೀ ಪತ್ರಿಕೆಗಳು ಇಪ್ಪತ್ತೊಂದು ಜಗತ್ ಶ್ರೀಮಂತರು, ಸುಂದರಿಯರು, ಜನಪ್ರಿಯರು, ಅಂತೆಲ್ಲ ಮಾಡುವ ಸರ್ಕಸ್ಸುಗಳಿಗೆ ಸಂವಾದಿಯಾದದ್ದು. ದೇಶಕಾಲ ಗುರುತಿಸುವಷ್ಟು ಜನರನ್ನು ಬಿಟ್ಟು ಇದರ ಸಮರ್ಥ ಬರಹಗಾರರ ದೊಡ್ಡ ಪಡೆಯೇ ಈ ಬ್ರಾಕೆಟ್ಟಿನ ಆಚೆಗೆ ಉಳಿದುಬಿಡುತ್ತದೆ.

ಇಪ್ಪತ್ತೊಂದನೇ ಶತಮಾನದ ಇಪ್ಪತ್ತೊಂದು ಪುಸ್ತಕಗಳು ಎಂಬ ಸರಣಿ ಲೇಖನಗಳು ಹೊಸ ಶತಮಾನದಲ್ಲಿ ಮೊದಲ ಮುದ್ರಣವಾಗಿ ಪ್ರಕಟಗೊಂಡ, ಇಪ್ಪತ್ತೊಂದು ಪುಸ್ತಕಗಳ ಕುರಿತಾಗಿದೆ. ಇದು ಒಂದು ಅಪೂರ್ಣವಾದ ಆಯ್ಕೆ. ಬರೀ ಇಪ್ಪತ್ತೊಂದು ಪುಸ್ತಕಗಳನ್ನು ಆರಿಸುವುದು, ಉಳಿದ ಮುಖ್ಯ ಪುಸ್ತಕಗಳ ಬಗ್ಗೆ ಮೌನ ವಹಿಸುವುದು ಜಾಣ ಕುರುಡು. ಇಂಥ ಪ್ರಯೋಗಗಳು ಜನಪ್ರಿಯ ಪತ್ರಿಕೆಗಳಿಗೆ ಸಲ್ಲಬಹುದೇ ಹೊರತು, ಸಾಹಿತ್ಯ ಪತ್ರಿಕೆಗಳ ಮಟ್ಟಿಗಂತೂ ಅಲ್ಲ. ಸಾಹಿತ್ಯ ಪತ್ರಿಕೆಗಳ ವ್ಯಾಪ್ತಿ ಮತ್ತು ಗಾಂಭೀರ್ಯ ಬೇರೆಯದೇ ನೆಲೆಯದ್ದು. ಈ ವಿಷಯವನ್ನೇ ಕುರಿತು ವಿಶೇಷ ಸಂಚಿಕೆ ರೂಪಿಸಬಹುದಾದ ಅವಕಾಶ, ವ್ಯಾಪ್ತಿ ಇಂಥದ್ದೊಂದು ಪರಿಕಲ್ಪನೆಗೆ ಇದೆ.

★

ಈ ಮೇಲಿನ ವಿರೋಧಾಭಾಸಗಳ ನಡುವೆಯೂ ಕನ್ನಡ ಸಾಹಿತ್ಯ ಪತ್ರಿಕೆಗಳ ಗತಿಯಲ್ಲಿ ಒಂದು ಹೆಚ್ಚಳವಾಗಿ ಪ್ರಯೋಗಶೀಲ ಸಂಚಿಕೆಯಾಗಿ 'ದೇಶಕಾಲ ವಿಶೇಷ' ಗಮನ ಸೆಳೆಯುತ್ತದೆ. ಈ ಸಂಚಿಕೆಯಲ್ಲಿ ಐದು ಲೇಖನಗಳಿವೆ. ದನೀಯಲ್ ಖಾರ್ಮ್ಸ್‌ನ ಕತೆಗಳಲ್ಲದ ಕತೆಗಳನ್ನು ಕೆ.ವಿ. ಅಕ್ಷರ ಅನುವಾದಿಸಿದ್ದಾರೆ. ಕನ್ನಡ ಕಥನ ಕ್ರಮವನ್ನು ಅವಾಸ್ತವಿಕ ನೆಲೆಯಲ್ಲಿ ಒಗ್ಗಿಸುವುದು ಆ ಮೂಲಕ ಕಥೆಯೊಂದರ ಒಡಲಲ್ಲಿ ವಿಕಾರ್ಥವನ್ನು ಪಲ್ಲಟಗೊಳಿಸುವುದನ್ನು ಈ ಬರಹ ಸಮರ್ಥಿಸುತ್ತದೆ.

ಆಧುನಿಕತೆ ಹಾಗೂ ಅನಂತರ ಹಿಂದಿನ ಮಲೆಯಾಳೀ ಕಾವ್ಯದ ಕುರಿತು ಮಲೆಯಾಳೀ ಕವಿ ಸಚ್ಚಿದಾನಂದನ್‌ರವರ ಲೇಖನವಿದೆ. ಮಲೆಯಾಳೀ ಕಾವ್ಯ ಅರವತ್ತರ ದಶಕದಿಂದೀಚೆಗೆ ಅನುಭವಿಸಿರುವ ಪಲ್ಲಟಗಳು ನಮ್ಮ ಆಧುನಿಕ ಕನ್ನಡ ಕಾವ್ಯದ ನಡಿಗೆಯನ್ನೇ ಹೋಲುತ್ತದೆ. ಸೌಂದರ್ಯಲಹರಿ ಬಗೆಗೆ ಹೊಸ ಜಿಜ್ಞಾಸೆ ಲಕ್ಷ್ಮೀಶ ತೋಳ್ಪಾಡಿಯವರ ಲೇಖನದಲ್ಲಿದೆ.

ಕನ್ನಡ ಮತ್ತು ಬ್ಲಾಗ್‌ಲೋಕ ಕುರಿತು ಎಂ.ಎಸ್. ಶ್ರೀರಾಮ್‌ರವರ ಲೇಖನವಿದೆ. ಈ ಲೇಖನ ಬ್ಲಾಗ್‌ಲೋಕದ ಸಮರ್ಥನೆಗಾಗಿಯೆ ಬರೆದಿರುವುದರಿಂದ ಇದರ ವಿಶ್ಲೇಷಣೆ ಏಕಮುಖಿಯಾಗಿದೆ. ಲೇಖಕರು ಹೇಳುವಂತೆ ಕನ್ನಡ ಬ್ಲಾಗ್‌ಗಳು ಅನಾಮಿಕತೆ ಮತ್ತು ಮುಕ್ತತೆಯ ಲಕ್ಷಣವನ್ನು ಪಡೆದಿವೆ ನಿಜ. ಆದರೆ ಇವು ಬ್ಲಾಗ್‌ನಲ್ಲಿ ಬರೆಯುವವರಲ್ಲಿ ಹೊಣೆಗೇಡಿತನವನ್ನು ಹುಟ್ಟುಹಾಕುತ್ತಿಲ್ಲವೆ? ಬಹುತೇಕ ಕನ್ನಡ ಬ್ಲಾಗ್‌ಗಳು ಪ್ರತಿಕ್ರಿಯೆ ಮತ್ತು ಮಾಹಿತಿಗಳ ದಾಸ್ತಾನುಗಳಾಗಿ ಬರವಣಿಗೆ ಎನ್ನುವುದು ಅಕ್ಷರ ಜೋಡಣೆ ಎಂಬ ಭ್ರಮೆಯನ್ನು ಹಂಚುತ್ತಿಲ್ಲವೆ? ಈ ದೆಸೆಯಿಂದ ಬ್ಲಾಗ್‌ಗಳಲ್ಲಿ ಚಿತ್ರವಾಗುತ್ತಿರುವ ಕತೆ-ಕವಿತೆಗಳು, ಅಂಕಣಗಳು ಒಂದು ಕಲವೂ ಒಡಲಾಳದಷ್ಟು ನಿಸ್ತೇಜವಾಗಿವೆ. ಪರಸ್ಪರ ಪರಿಚಿತರು ಬರೆಯುವ ಟಿಪ್ಪಣಿಗಳು ಹಾಸ್ಯಾಸ್ಪದವಾಗಿರುತ್ತವೆ. ಬರಹಗಾರರಿಗೆ ಇರಬೇಕಾಗಿದ್ದ ಸಂಕೋಚದ ಬಳ್ಳಿಯನ್ನೇ ತರಿದು ಹಾಕುವ ಬ್ಲಾಗ್‌ಗಳು 'ಏನಾದರೂ' ಬರೆಯುತ್ತಿರುವವರ ಅಹಂಕಾರವನ್ನಷ್ಟೇ ಸಲಹುತ್ತಿವೆ.

ಎಸ್.ಆರ್. ವಿಜಯಶಂಕರ್‌ರವರು ಬೇಂದ್ರೆಯವರ 'ಕುರುಡು ಕಾಂಚಾಣ' ಹಾಗೂ ಪುರಂದರದಾಸರ 'ಭಾಗ್ಯಲಕ್ಷ್ಮೀ' ರಚನೆಗಳನ್ನು ಇಲ್ಲಿ ಮರು ವಿಶ್ಲೇಷಿಸಿದ್ದಾರೆ. ಭಕ್ತಿ ಸಾಹಿತ್ಯವನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ಅಲ್ಲಿರುವ ಪ್ರತಿರೋಧ ಮತ್ತು ನಿಜದನಿಯನ್ನು ಗಮನಿಸಲು ಹೋಗದೆ ವರ್ಗಪ್ರಜ್ಞೆಯನ್ನಷ್ಟೇ ನೋಡುವಲ್ಲಿ ಆಸಕ್ತವಾಗಿರುವ ಸಂಸ್ಕೃತಿ ಚಿಂತನೆಯೊಂದು ಚಾಲ್ತಿಯಲ್ಲಿದೆ. ಇವುಗಳಾಚೆಯೂ ದಾಸರ ಭಾಗ್ಯದ ಲಕ್ಷ್ಮಿ ಸಾಮಾಜಿಕ ಪ್ರಜ್ಞೆಯನ್ನು ರೂಪಿಸುವಲ್ಲಿ ವಹಿಸುವ ಮಹತ್ವವನ್ನು ಇಲ್ಲಿನ ಮರು ಓದು ತಿಳಿಸುತ್ತದೆ.

ಈ ಸಂಚಿಕೆಯಲ್ಲಿ ಹದಿನಾಲ್ಕು ಕಥೆಗಳು ಹಾಗೂ ಒಂದು ನೀಳ್ಗತೆ ಇದೆ. 'ಮುಸಲಮಾನ ಬಂದ! ಮುಸಲಮಾನ ಬಂದ!' ಗಿರೀಶ ಕಾರ್ನಾಡರವರ ಕಥೆ. ಮತ್ತೊಬ್ಬರ ಆದೇಶದಿಂದ ಆರಂಭವಾಗಿರುವ ಈ ರೀತಿಯೂ ಈ ಕಥೆಯ ಮುಖ್ಯ ಭೂಮಿಕೆಯಾಗಿದೆ. 'ಸಬ್-ಸಬಾಲ್ಟ್ರನ್' ಕೆ. ಸತ್ಯನಾರಾಯಣರವರ ಕಥೆ. ಅಲಕ್ಷಿತ ಸಮುದಾಯದಲ್ಲಿ ಇರುವ ಕೀಳರಿಮೆಯನ್ನು ಅವರ ಅಗತ್ಯವನ್ನು ಈ ಕಥೆ ಚೆನ್ನಾಗಿ ಹಿಡಿದಿದೆ. ಚಿನ್ನಪ್ಪನ ಆಳದಲ್ಲಿರುವ ತಬ್ಬಲಿತನವೇ ಇಲ್ಲಿ ಮುಖ್ಯವಾದದ್ದು. ದೇವರಾಜು ಅರಸುರವರ ಲಕ್ಷ್ಯದಿಂದ ತಾನು ಅವಜ್ಞೆಗೊಳಗಾದವನು ಎಂಬ ಪ್ರಜ್ಞೆಯನ್ನು ಕಳೆದುಕೊಂಡು ತನ್ನ ಬದುಕಿಗೊಂದು ಅರ್ಥವನ್ನು ಕೊಟ್ಟುಕೊಳ್ಳುವ ಚಿನ್ನಪ್ಪನಿಗೆ ಅದು ಕೇವಲ ಬದುಕಿನ ಒಂದು ಭಾಗವಾಗದೆ ಅದೃಷ್ಟವಂತ ಘಟನಾವಳಿಯ ಸಾಲಿನಲ್ಲಿ ಸೇರಿಕೊಳ್ಳುವುದು ಇಲ್ಲಿ ಸಹಜವೇ ಆಗಿದೆ. ಶ್ರೀನಿವಾಸ ವೈದ್ಯರ 'ಕಬ್ಬಡ್ಡಿ... ಕಬ್ಬಡ್ಡಿ' ಮತ್ತು ಗುರುಪ್ರಸಾದ್ ಕಾಗಿನೆಲೆಯವರ 'ಉಸಿರು' ಕಥೆಗಳು ವಯೋವೃದ್ಧರ ಬದುಕನ್ನೇ ಧ್ಯಾನಿಸಿ ಬರೆದಂತಿವೆ. ಕಬ್ಬಡ್ಡಿ ಕಥೆಯ ಶಿರಟ್ಟಿ ಮಾಸ್ತರು ತಮ್ಮ ಬಾಳಿನಲ್ಲಿ ಉಳಿದಿರುವ ದಿನಗಳ ಭದ್ರತೆಗೆಂದು ಪೆನ್‌ಶನ್ನಿಗಾಗಿ ಸಾಹಸ ಮಾಡಿ ಏಗುತ್ತಿದ್ದರೆ, ಉಸಿರು ಕಥೆಯಲ್ಲಿ ಕಾಯಿಲೆಯೊಂದಿಗೆ ಮಲಗಿರುವ ರಾಮರಾಯರು ಉಚಿತ ಆರೋಗ್ಯ ವಿಮೆಗೆ ತನ್ನನ್ನು ಪರಿಗಣಿಸಬೇಕು ಎಂದು ಚಡಪಡಿಸುತ್ತಿದ್ದಾರೆ. ಈ ಎರಡು ಕಥೆಗಳಲ್ಲಿ ವ್ಯಕ್ತವಾಗಿರುವುದು ಹಣ್ಣಾದ ಎರಡು ಜೀವಗಳ ಹೋರಾಟವೇ.

'ಸರಿ ಹಾವಳಿ' ಬಿ.ಟಿ. ಜಾಹ್ನವಿಯವರ ಕಥೆ. ಅಧ್ಯಾಪಕರು ಸರಿಹಾವಳಿ ಕುರಿತು ಪ್ರಬಂಧ ಬರೆಯಲು ಹೇಳಿದಾಗ ಅಲ್ಲಿನ ವಿದ್ಯಾರ್ಥಿನಿ ಅನಿತಾ ಬರೆಯುವ ಅನಿರೀಕ್ಷಿತ ಉತ್ತರ ಅದರ ಹಿಂದೆ ಏನಿದೆ? ಎಂದು ಕುತೂಹಲದಿಂದ ಹೊರಟ ಕಥೆಯ ನಿರೂಪಕರಿಗೆ ಸಿಗುವುದು ಅನಿತಾಳ ಕುಟುಂಬದ ಛಿದ್ರವಾದ ಬದುಕು. ತನ್ನ ದೇಹವನ್ನು ಮಾರಿಕೊಂಡು ತನ್ನ ವಿದ್ಯಾಭ್ಯಾಸ ಮಾಡುತ್ತಾ, ತಂಗಿಯ ಓದಿಗೆ ನೆರವಾಗುತ್ತಾ, ಕುಟುಂಬವನ್ನು ಸಲಹುತ್ತಿರುವ ಅನಿತಾಳ ಧೈರ್ಯವಷ್ಟೇ ಇಲ್ಲಿ ವ್ಯಕ್ತವಾಗುವುದಿಲ್ಲ. ದೇಹವನ್ನೇ ಅನ್ನವೆಂದುಕೊಂಡು ಬದುಕಿಗೆ ನಿಷ್ಠೆಯಾಗಿರುವ ಪುಟ್ಟ ಹುಡುಗಿಯ ಪಾತ್ರವೂ ಇಲ್ಲಿ ತೀಕ್ಷ್ಣವಾಗಿ ವ್ಯಕ್ತವಾಗಿದೆ.

'ಗಣೆ ನಿಲ್ದಾಣ' ಮೊಗಳ್ಳಿ ಗಣೇಶರವರ ಕಥೆ. ಇದೊಂದು ತೀವ್ರ ವಾಸ್ತವವಾದಿ ಕಥೆಯಾಗಿದೆ. ಕಳೆದ ಎರಡು ಮೂರು ವರ್ಷಗಳಲ್ಲಿ ಮೊಗಳ್ಳಿ ಗಣೇಶರು ಬರೆದ 'ಗದ್ದುಗೆ', 'ದಸರಾ', ಕಥೆಗಳು ವಾಸ್ತವವಾದಿ ನೆಲೆಯಿಂದಲೇ ಆಯ್ಕೆಯಾಗಿರುವುದು ಅವರ ಕಥನ ಕ್ರಮದ ಹೊಸ ಬಗೆಯ ಹುಡುಕಾಟವಾಗಿಯೆ ತೋರುತ್ತಿದೆ. ಆದರೆ ವಿವರಗಳು, ಘಟನೆಗಳು ಕಥೆಗಾರನ ಕಕ್ಷೆಯಿಂದ ಹೊರಬರಲಾರದ ಕಾರಣದಿಂದ ಕಥೆಗಳು ಪ್ರತಿಕ್ರಿಯಾ ವಿಧಾನದಿಂದ ಮುಕ್ತವಾಗುವುದಿಲ್ಲ.

'ಅನುಬಂಧಗಳು' ಅಮರೇಶ ನುಗಡೋಣಿಯವರ ಕಥೆ. ರೈತರ ಆತ್ಮಹತ್ಯೆಯನ್ನು ರೈತರ ಕೋನದಿಂದ ನೋಡಿರುವ ಈ ಕಥನ ಓದುಗನ ಅಪಾರ ಸಹಾನುಭೂತಿಯನ್ನು ನಿರೀಕ್ಷಿಸುತ್ತದೆ. 'ವರಾಹ ಸಂಭವಾಮಿ' ಪ್ರಹ್ಲಾದ ಅಗಸನಕಟ್ಟೆಯವರ ಕಥೆ. ಈಚೆಗೆ ಹಲವು ಜನರನ್ನು ಬಲಿ ತೆಗೆದುಕೊಂಡ ಎಚ್‌ಒನ್‌ಎನ್‌ಒನ್ ಈ ಕಥೆಯ ವಸ್ತು. ಹಂದಿಜ್ವರದ ಬಗೆಗೆ ಜನಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸಬೇಕು ಎಂದು ಸಮಾಜಮುಖಿ ಧೋರಣೆಗಳ ಹಿಂದಿರುವ ಸ್ವಹಿತಾಸಕ್ತಿ, ಪ್ರಚಾರಪ್ರಿಯತೆಯನ್ನು ಈ ಕಥೆ ತೆರೆದಿಡುತ್ತದೆ.

'ಗೋಡೆಗೇರಿದ ತೇವ' ಸುನಂದಾ ಕಡಮೆಯವರ ಕಥೆ. ಮಧ್ಯಮವರ್ಗದ ಕುಟುಂಬದ ಶಿಥಿಲತೆಯನ್ನು, ಅದರ ಸ್ವಭಾವಗಳನ್ನು ಗೋಡೆಗೇರಿದ ತೇವದಲ್ಲಿ ಗಮನಿಸಬಹುದು.

'ಕೋಮಲ ಗಾಂಧಾರ' ಜಯಂತ ಕಾಯ್ಕಿಣಿಯವರ ಕಥೆ. ಕಾಯ್ಕಿಣಿಯವರು ಈ ಹಿಂದೆ ಬರೆದಿದ್ದ 'ಗೇಟ್ ವೇ' ಕಥೆಯ ಮುಂದುವರಿದ ಭಾಗವಾಗಿ ಕೋಮಲ ಗಾಂಧಾರವಿದೆ. ಎತ್ತಣಿಂದೆತ್ತಣ ಸಂಬಂಧ? (ಯು.ಆರ್. ಅನಂತಮೂರ್ತಿ), ಕೋಳಿಕೂಗುವ ಮುನ್ನ (ಯಶವಂತ ಚಿತ್ತಾಲ), ಈ ಮಳೆಯ ನಂತರ ಈ ಊರು ಇರುವುದಿಲ್ಲ (ಅಬ್ದುಲ್ ರಶೀದ್), ಪ್ರೇಮದ ಅಸಂಖ್ಯ ಅವಸ್ಥಾಂತರಗಳಲ್ಲಿ ಇದು ಮಧುರವೂ, ಯಾತನಾಮಯವೂ ಆಗಿದೆ (ಜೋಗಿ), ಇದಲ್ಲದೆ ಮತ್ತೊಬ್ಬ ಮಾಯಿ ನೀಳ್ಗತೆ (ರಾಘವೇಂದ್ರ ಪಾಟೀಲ) ಕಥೆಗಳು ಈ ಸಂಚಿಕೆಯಲ್ಲಿ ಸೇರಿಸಲ್ಪಟ್ಟಿವೆ.

ಎತ್ತಣಿಂದೆತ್ತಳ ಸಂಬಂಧ? ಜಾಗತಿಕ ಬಂಡವಾಳ ಮತ್ತು ನಕ್ಸಲ್ ಚಟುವಟಿಕೆಗಳ ಕಾರ್ಯಕಾರಣ ಸಂಬಂಧವಾಗಿ ಮಾತನಾಡುವ ಕಥೆ. ಇಲ್ಲಿನ ಪಾತ್ರಗಳು ನಕ್ಸಲೀಯರ ಸಮಸ್ಯೆಯನ್ನು ಕೇವಲ ನೆನಪಿನ ಭಾಗವಾಗಿ ನೋಡುತ್ತಲೇ ವಿಶ್ರಮಿಸಿಬಿಡುವಂಥವು. ಕಡೆಗೆ ನಿರೂಪಕ ಜಗದ ಚೆರಗಿಗಷ್ಟೇ ಮಾರಿಹೋಗುವ ರೀತಿಯೆ ಇಲ್ಲಿ ಅಸಂಬದ್ಧವಾಗಿದೆ. ಉಳಿದ ಕಥೆಗಳಲ್ಲಿ – 'ಕೋಳಿ ಕೂಗುವ ಮುನ್ನ', 'ಮತ್ತೊಬ್ಬ ಮಾಯಿ' ಕಥೆಗಳು ಕಥೆಗಾರರ ಹಳೆಯ ಮಾರ್ಗದಲ್ಲಿಯೆ ಗಿರಕಿ ಹೊಡೆದು ಓದುಗರನ್ನು ಬೆಚ್ಚಿಬೀಳಿಸಲೆಂದೇ ಬರೆದಿರುವಂತಿವೆ. 'ಈ ಮಳೆಯ ನಂತರ ಈ ಊರು ಇರುವುದಿಲ್ಲ', ಪ್ರೇಮದ ಅಸಂಖ್ಯ ಅವಸ್ಥಾಂತರಗಳಲ್ಲಿ 'ಇದು ಮಧುರವೂ, ಯಾತನಾಮಯವೂ' ಆಗಿದೆ– ಈ ಎರಡು ಕಥೆಗಳು ಕೇವಲ ಲಹರಿಗಳಾಗಿ ಬಿಟ್ಟಿವೆ.


'ಹೋಟಲ್ ಪರ್ವ' ಹೋಟಲ್ ಮಾಲಿಕರೊಂದಿಗೆ ಕಥೆಗಾರ್ತಿ ವೈದೇಹಿಯವರು ನಡೆಸಿರುವ ಮಾತುಕತೆ. ೧೯೭೨ರಲ್ಲಿ ತೆರೆದ ಹೋಟಲ್ ಏನೆಲ್ಲ ಪಲ್ಲಟಗಳಿಗೆ ಪಕ್ಕಾಗಿ ನೆಲೆಯೂರಿರುವುದನ್ನು ಕಥನಶೈಲಿಯಲ್ಲಿ ವ್ಯಕ್ತಮಾಡುತ್ತದೆ. ಸಾಮಾನ್ಯವಾಗಿ ಹೋಟಲ್‌ಗೆ ಹೋದಾಗ ಬಿಲ್ ಪಾವತಿ ಮಾಡುವಾಗಲೂ ಕ್ಯಾಷಿಯರ್‌ನ ಕೈಗಳನ್ನಷ್ಟೇ ನೋಡಿಕೊಳ್ಳುವ ಧಾವಂತದ ನಡಾವಳಿ ನಮ್ಮದು. ಹೀಗಿರುವಾಗ ಹೋಟಲ್‌ನೊಂದರ ನಿಜವಾದ ಆಸಕ್ತಿ, ಅದರ ದೈನಿಕ ಸಂಕಟಗಳನ್ನೆಲ್ಲವನ್ನು ಲೇಖಕಿ ಬೆಳಕಿಗೆ ತರುತ್ತಾರೆ. ಹೋಟಲ್ ಪರ್ವ ಮುಖ್ಯವಾಗಿ ಕುಲದ ನೆಲೆಯಿಂದ ಕಳಚಿಕೊಳ್ಳುತ್ತಿರುವ, ಮೇಲ್ವರ್ಗದ ಸಡಿಲಗೊಂಡಿರುವ ಮನಸ್ಸಿನ ಅಭಿವ್ಯಕ್ತಿಯಾಗಿಯೂ ಕಾಣಿಸಿಕೊಳ್ಳುತ್ತದೆ.

'ಹರಿಚಿತ್ತ ಸತ್ಯ' ವಸುಧೇಂದ್ರರವರ ಕಾದಂಬರಿ. ಇದು ಈ ಲೇಖಕರ ಮೊದಲ ಕಾದಂಬರಿಯೂ ಆಗಿದೆ. ಕಾದಂಬರಿ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದ ಸುತ್ತ ಹರಡಿಕೊಂಡಿದೆ.

'ಮಣ್ಣು' ಇಕ್ಬಾಲ್ ಅಹಮದ್ ಮತ್ತು ಎಸ್. ದಿವಾಕರ್‌ರವರ 'ಜುಗಲ್‌ಬಂದಿ' ಬರಹ. ಈ ಬರಹ ಸದ್ಯದ ನೆಲೆಯಿಂದಲೆ ಹೊರಟಿದ್ದು ನಮ್ಮನ್ನು ಜಾಗೃತಗೊಳಿಸಿ ಕರಗಿಸುವ ಬರಹವಾಗಿದೆ. 'ವರ್ಣ' ಎಸ್.ಜಿ. ವಾಸುದೇವ್ ಹಾಗೂ ಪ್ರತಿಭಾನಂದಕುಮಾರ್‌ರವರ ಅನುಸಂಧಾನವೂ ಸಾಕ್ಷೇಪವಾದ ಗುಣದಿಂದ ಬೆಳೆಯುವಷ್ಟು ಕ್ರಿಯಾಶೀಲವಾಗಿದ್ದು ಹೊಸ ಅನುಭವದ ದರ್ಶನ ಮಾಡಿಸುತ್ತವೆ. 'ಎತ್ತ ಹಾರಿದೆ ಹಂಸ' (ನಾಟಕ: ರಘುನಂದನ), ಗಾಂಧಿ ಕ್ಲಾಸ್ (ಕುಂ. ವೀರಭದ್ರಪ್ಪ), ತಿರುಕವಕ್ಕಿಗಳು (ಶ್ರೀಧರ ಹೆಗ್ಗೋಡು), ರಾಜಕಾರಣಿಗಳ ಸಂದರ್ಶನ ಮಾಲೆ (ಪ್ರಕಾಶ್ ಬೆಳವಾಡಿ). ಈ ಬರಹಗಳಲ್ಲದೆ ಈ ಸಂಚಿಕೆಯಲ್ಲಿರುವ ಎಲ್ಲಾ ಕವಿತೆಗಳು ದೇಶಕಾಲದ ಫಿಲ್ಲರ್‌ಗಳಾಗಿ ಬಳಕೆಯಾಗಿವೆ. ಇವುಗಳಿಂದ ಸಂಚಿಕೆಯ ಗಾತ್ರ ತೂಕವಷ್ಟೇ ಹೆಚ್ಚಿಸಿಕೊಂಡಂತಾಗಿದೆ.

ಆರ್. ಸುಧೀಂದ್ರಕುಮಾರ್

ಪ್ರತಿಕ್ರಿಯೆ



ನಿಮ್ಮ ಸಾಂಸ್ಕೃತಿಕ ಗಾಥೆ ಮತ್ತೊಂದು ಮಜಲು 'ಗುಡಿಸಲು', ತಮ್ಮ ವಿಶಿಷ್ಟ ಪರಿಕಲ್ಪನೆಗಳ ಮೂರ್ತರೂಪ ಎನಿಸಿದೆ. ಬೆಂಗಳೂರಿನಲ್ಲಿ ಎರಡು ಸಾವಿರದ ಹತ್ತನೇ ಇಸವಿಯ ನಾಗರಿಕತೆಯ ಓಘದಲ್ಲಿ ಸ್ವಲ್ಪ ಹೊತ್ತು ತಂಗಲು, ಮೌಲಿಕ ಕ್ಷಣಗಳನ್ನು ಮಡಿಲಲ್ಲಿ ಕಟ್ಟಿಕೊಳ್ಳಲು, ಮನಸ್ಸಿರುವವರಿಗೆ, ಎಳೆ ಬಿಸಿಲು-ಇಳಿ ಬಿಸಿಲು ಕಾಯುವವರಿಗೆ ತಮ್ಮ 'ಗುಡಿಸಲು' ಒಂದು ತಾಣವಿದ್ದಂತಿದೆ. ಅದರ ತಾಜಾತನ ಹಾಗೇ ಉಳಿಯಲಿ ಮತ್ತು ಸಾರ್ಥಕ್ಯ ಬೆಳೆಯಲಿ ಎಂದು ಹಾರೈಕೆ ನನ್ನದು.

ಗೀತಾ ಹೆಗಡೆ, ಸಿದ್ದಾಪುರ (ಉ.ಕ.)

'ಸಂಚಯ ೮೫' ಅನೇಕ ರೀತಿಯಲ್ಲಿ ಸಂತೋಷ ನೀಡಿ ಸಾರ್ಥಕವೆನಿಸಿತು. ನಮ್ಮ ಹಳ್ಳಿಯಲ್ಲಿ ನಾವು 'ನಮ್ಮೂರ ಬರಹಗಾರರು' ಎಂಬ ಗುಂಪನ್ನು ೨೦೦೮ ಜನವರಿಯಿಂದ ಆರಂಭಿಸಿದ್ದೇವೆ. ಅಂದಿನಿಂದ ಪ್ರತಿ ಶನಿವಾರ ಸಾಯಂಕಾಲ ನಾವು ನಮ್ಮ ಮನೆಯ ಜಗುಲಿಯಲ್ಲಿ ಸೇರುತ್ತೇವೆ. ಆಯಾ ವಾರದಲ್ಲಿ ಬರೆದ ಕವಿತೆ, ಲೇಖನ, ವಿಮರ್ಶೆ, ಕತೆ ಓದುತ್ತೇವೆ. ಪ್ರತಿ ಶನಿವಾರ ಸಂಜೆ ಆರು ಗಂಟೆಗೆ ಬರಬೇಕೆಂದು ಮತ್ತೆ ಮತ್ತೆ ತಿಳಿಸುವುದೂ ಇಲ್ಲ. ತುಂಬ ಬೆರಗುಗೊಳಿಸುವ ಪ್ರತಿಭೆಗಳು, ವಿಚಾರಗಳು ನಮಗೆ ಸಿಗುತ್ತವೆ. ಆಗೊಮ್ಮೆ, ಈಗೊಮ್ಮೆ ಯಾರನ್ನಾದರೂ ಆಹ್ವಾನಿಸಿ ಕವಿ-ಕಾವ್ಯ ಪರಿಚಯ ಮಾಡುವುದೂ ಇದೆ.

ನಾನು ೨೦೦೮ರಲ್ಲಿ ಅಮೆರಿಕಕ್ಕೆ ಹೋಗಿದ್ದೆ. ಆರೆಗಾನ್‌ನ ಪೋರ್ಟ್‌ಲ್ಯಾಂಡ್‌ನ ಸಮೀಪದ 'ಫಾರೆಸ್ಟ್ ಗ್ರೋವ್' ಎಂಬ ಪುಟ್ಟ ಸ್ಥಳದಲ್ಲಿ ಪ್ರತಿ ಸೋಮವಾರ 'ರೈಟರ್ಸ್ ಆಫ್ ದಿ ಗ್ರೋವ್' ಸೇರುತ್ತಿದ್ದರು. ನಾನಲ್ಲಿದ್ದ ಮೂರು ತಿಂಗಳ ಅವಧಿಯಲ್ಲಿ ತಪ್ಪದೇ ಈ ಗುಂಪಿನೊಂದಿಗೆ ಸೇರುತ್ತಿದ್ದೆ. ಅವರ ಸ್ಫೂರ್ತಿಯೇ ನಮ್ಮೂರಿನ ಗುಂಪಿಗೆ ಕಾರಣ. ಈಗ ಬೆಂಗಳೂರಿನಲ್ಲಿ ತಾವು ಈ ರೀತಿಯ ಕಲ್ಪನೆಯನ್ನು 'ನುಡಿ ಗುಡಿಸಲು' ಮೂಲಕ ಸಾಕಾರಗೊಳಿಸುತ್ತಿರುವುದು ಹಿಗ್ಗಿನ ವಿಷಯ.


ಸಂಚಯದಲ್ಲಿ ಸಲ್ಮಾನ್ ರಷ್ದಿ ಅವರ ಲೇಖನ ಒಂದೇ ಸಲ ಸೆರೆ ಹಿಡಿದು ಓದಿಸಿತು. ಮೂಲಭೂತವಾದವು ಈಗ ಬಲವಾಗುತ್ತಿದೆ. ಅಲ್ಪಸಂಖ್ಯಾತರು ಅಪಾಯದ ಸುಳಿವಿನಿಂದ ಅರ್ಧ ಹೆದರಿ, ಅರ್ಧ ವೀರಾವೇಶದಿಂದ, ತಮ್ಮ ರಕ್ಷಣೆಗೆಂದು ಎರ್ರಾಬಿರ್ರಿ ವರ್ತಿಸುತ್ತಾರೆ.

ಗುರುಮೂರ್ತಿ ಪೆಂಡಕೂರು, ರಾಮನಗರ,
ಹಗರಿಬೊಮ್ಮನಹಳ್ಳಿ - ೫೮೩ ೨೧೨



ರವಿಕುಮಾರ್ ಕಾಶಿ ಅವರ ಕಲಾಕೃತಿಗಳು

ಸಂಚಯ
ಗ್ಯಾಲರಿ



SANCHAYA (Bi-Monthly), MAG(2) PRB-DECL : 309/94-95

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925